ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಡಿಸೆಂಬರ್ 2024

ಬೆಲೆ ರೂ. 20/-

SAPTHAGIRI (KANNADA)
SPIRITUAL ILLUSTRATED MONTHLY
Volume:04, Issue: 5 Pages:56
December - 2024, Price Rs. 20/-




## ಗೀತಾ ಜಯಂತಿ
## 11-12-2024




# ಶ್ರೀ ವೆಂಕಟೇಶ್ವರ ಅನ್ನ ಪ್ರಸಾದ ಟ್ರಸ್ಟ್ (ಒಂದು ದಿನದ ದೇಣಿಗೆ ಕೊಡುವ ಯೋಜನೆ)

ಅನ್ನವೇ ಪರಬ್ರಹ್ಮ ಸ್ವರೂಪ, ಹಸಿದವನಿಗೆ ಅನ್ನ ನೀಡುವುದಕ್ಕಿಂತ ಉತ್ತಮವಾದ ಪುಣ್ಯ ಮತ್ತೊಂದಿಲ್ಲ. ಇದೇ ಸಂದರ್ಭದಲ್ಲಿ ತಿರುಮಲೆ ತಿರುಪತಿ ದೇವಸ್ಥಾನವು ತಿರುಮಲೆ, ತಿರುಪತಿ ಮತ್ತು ತಿರುಚಾನೂರಿನಲ್ಲಿ ನಿತ್ಯವೂ ಅನ್ನಪ್ರಸಾದ ವಿತರಣೆಯನ್ನು ನಡೆಸುತ್ತಿದೆ. ಈ ಕಾರ್ಯಕ್ಕೆ ಅನೇಕ ದಾನಿಗಳು ಉದಾರವಾಗಿ ದೇಣಿಗೆ ನೀಡುತ್ತಾರೆ, ಎಂಬುದು ತಿಳಿದಿರುವ ವಿಷಯ! ಪ್ರತಿಯೊಬ್ಬರೂ ಭೂಮಿಯನ್ನು ದಾನ ಮಾಡಲು ಸಾಧ್ಯವಿಲ್ಲ. ಇದನ್ನು ಗಮನಿಸಿದ ತಿ.ತಿ.ದೇ., ಒಂದು ದಿನದ ಅನ್ನಪ್ರಸಾದದ ವೆಚ್ಚವನ್ನು ಭಕ್ತರಿಂದ ಕಾಣಿಕೆಯಾಗಿ ಸ್ವೀಕರಿಸಲು ಸಹ ಸಿದ್ಧತೆ ಮಾಡಿಕೊಳ್ಳಲಾಗಿದೆ. ಭಕ್ತರೇ ಈ ಕಾರ್ಯಕ್ಕೆ ಸ್ಪಂದಿಸಿ ! ಮತ್ತೊಬ್ಬರ ಹಸಿವನ್ನು ತೀರಿಸಿ! ಮಾಧವನ ಕೃಪೆಗೆ ಪಾತ್ರರಾಗಿ !!!

ಈ ವಿರಾಳವನ್ನು ಕೇವಲ ವೈಯಕ್ತಿಕವಾಗಿ ಮಾತ್ರವಲ್ಲದೆ ಕಂಪನಿಗಳು, ಸಂಸ್ಥೆಗಳು ಮತ್ತು ಟ್ರಸ್ಟ್‌ಗಳು ಜಂಟಿಯಾಗಿ ನೀಡಬಹುದು.

ದಾನಿಗಳು ದೈನಂದಿನ ಮೊತ್ತವನ್ನು (ರೂ. 44 ಲಕ್ಷಗಳು) ಬೆಳಗಿನ ಉಪಾಹಾರ (ರೂ. 10 ಲಕ್ಷಗಳು) ಮಧ್ಯಾಹ್ನದ ಭೋಜನ (ರೂ. 17 ಲಕ್ಷಗಳು ) ಅಥವಾ ರಾತ್ರಿ ಊಟ (ರೂ. 17 ಲಕ್ಷಗಳು) ಆಯ್ಕೆ ಮಾಡಿ ವಿತರಿಸಬಹುದು. ಒಟ್ಟು ರೂ.44 ಲಕ್ಷ ವಿರಾಳ ಅಥವಾ 25 ಲಕ್ಷ ವಿರಾಳ ನೀಡುವ ದಾನಿಗಳಿಗೆ , 10 ಲಕ್ಷ ವಿರಾಳ ನೀಡುವ ದಾನಿಗಳಿಗೆ ಅಲ್ಪಾಹಾರ, ಮಧ್ಯಾಹ್ನ ಮತ್ತು ರಾತ್ರಿಯ ಊಟಕ್ಕೆ ತಿ.ತಿ.ದೇ., ದಾನಿಗಳಿಗೆ ಒದಗಿಸುವ ಸೌಲಭ್ಯಗಳು ಒಂದೇ ಆಗಿರುತ್ತದೆ. ಈ ಕಾರ್ಯ ಕ್ರಮದಲ್ಲಿ ಪಾಲ್ಗೊಳ್ಳುವ ಭಕ್ತರು ತಮ್ಮ ಕೋರಿಕೆಯಂತೆ ಭಕ್ತರಿಗೆ ಸೇವೆ ಸಲ್ಲಿಸಲು ಅವಕಾಶವಿದ್ದು ಅವರ ಹೆಸರನ್ನು ಮಾತೃಶ್ರೀ ತರಿಗೊಂಡ ವೆಂಗಮಾಂಬ ಅನ್ನ ಪ್ರಸಾದ ವಿತರಣಾ ಕೇಂದ್ರದಲ್ಲಿ ಪ್ರದರ್ಶಿಸಲಾಗುತ್ತದೆ. ಇದರಲ್ಲಿ ಪಾಲ್ಗೊಂಡ ಭಕ್ತ ದಾತರು ಭಕ್ತರಿಗೆ ತಾವೇ ಸೇವೆ ಸಲ್ಲಿಸುವ ಅವಕಾಶವಿರುತ್ತದೆ. ಮಾತೃಶ್ರೀ ತರಿಗೊಂಡ ವೆಂಗಮಾಂಬ ಅನ್ನ ಪ್ರಸಾದ ವಿತರಣಾ ಕೇಂದ್ರದಲ್ಲಿ ಅವರ ಹೆಸರನ್ನು ಪ್ರದರ್ಶಿಸಲಾಗುತ್ತದೆ.

**ಹೆಚ್ಚಿನ ವಿವರಗಳಿಗಾಗಿ :**

ಉಪಕಾರ್ಯ ನಿರ್ವಹಣಾಧಿಕಾರಿ, ಎಫ್.ಎ.ಸಿ.,
(ಡೋನಾರ್‌ಸೆಲ್) ಆದಿಶೇಷು ಅತಿಥಿ ಗೃಹ
ತಿ.ತಿ.ದೇ., ತಿರುಮಲೆ.
ದೂರವಾಣಿ ಸಂಖ್ಯೆ : - 0877 - 2263001, 2263472.

ಈ ಮೇಲ್ ಐ.ಡಿ. :-
cdmc.ttd@tirumala.org

| | |
|---|---|
| 1. ಅಲ್ಪಹಾರ (ಟಿಫಿನ್ ) | - 10 ಲಕ್ಷಗಳು |
| 2.ಮಧ್ಯಾಹ್ನ ಭೋಜನ | - 17 ಲಕ್ಷಗಳು |
| 3. ರಾತ್ರಿ ಭೋಜನ | - 17 ಲಕ್ಷಗಳು |
| ಒಟ್ಟು ಮೊತ್ತ | - 44 ಲಕ್ಷಗಳು |

ಈ ಮೊತ್ತವನ್ನು ದಾನಿಗಳು ಅನ್ನಪ್ರಸಾದ ಟ್ರಸ್ಟ್‌ಗೆ ನೀಡಬಹುದು.









# ಭಗವದ್ಗೀತೆ

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ ನವಾನಿ ಗೃಹ್ಣಾತಿ ನರೋಽಪರಾಣಿ।

ತಥಾ ಶರೀರಾಣಿ ವಿಹಾಯ ಜೀರ್ಣಾನ್ಯನ್ಯಾನಿ ಸಂಯಾತಿ ನವಾನಿ ದೇಹೀ॥

ಮನುಷ್ಯ ಉಟ್ಟ ಬಟ್ಟೆ ಹಳತಾದಾಗ ಅವುಗಳನ್ನು ಬಿಟ್ಟು ಹೊಸತನ್ನು ತೊಟ್ಟು ಕೊಳ್ಳುತ್ತಾನೆ, ಹಾಗೆಯೇ ಜೀವನೂ ತನ್ನ ದೇಹ ಜೀರ್ಣವಾದಾಗ ಅದನ್ನು ತೊರೆದು ಇನ್ನೊಂದು ದೇಹವನ್ನು ಸೇರುತ್ತಾನೆ.

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -22)




ಈಶಾನಾಂ ಜಗತೋಽಸ್ಯ ವೇಂಕಟಪತೇಃ ವಿಷ್ಣೋಃ ಪರಾಂ ಪ್ರೇಯಸೀಂ।
ತದ್ವಕ್ಷಸ್ಥಲನಿತ್ಯವಾಸರಸಿಕಾಂ ತತ್ಕ್ಷಾಂತಿ ಸಂವರ್ಧಿನೀಮ್ ॥
ಪದ್ಮಾಲಂಕೃತ ಪಾಣಿಪಲ್ಲವಯುಗಾಂ ಪದ್ಮಾಸನಸ್ಥಾಂ ಶ್ರಿಯಂ।
ವಾತ್ಸಲ್ಯಾದಿ ಗುಣೋಜ್ಜ್ವಲಾಂ ಭಗವತೀಂ ವಂದೇ ಜಗನ್ಮಾತರಮ್॥

(ಹತ್ತನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ಔತ್ಸು ಕ್ಯಪೂರ್ವಮುಪಹೃತ್ಯ ಮಹಾಪರಾಧಾನ್ ಮಾತಃ ಪ್ರಸಾದಯಿತುಮಿಚ್ಛತಿ ಮೇ ಮನಸ್ತ್ವಾಮ್।**

**ಆಲಿಹ್ಯ ತಾನ್ನಿ ರವಶೇಷಮಲಬ್ಧ ತೃಪ್ತಿ ಸ್ತ್ವಾಮ್ಯಸ್ಯಹೋ ವೃಷಗಿರೀಶಧೃತಾ ದಯೇ ತ್ವಮ್ ॥97॥**

ಹಿಂದಿನ ಪದ್ಯದಲ್ಲಿ ಆಚಾರ್ಯರು ತಮಗೆ ತಿಳಿದಾಗಲಿ, ತಿಳಿಯದೆಯೇ ಆಗಲಿ, ಅಪರಾಧವನ್ನೆಸಗುವ ಮತ್ತು ಅದನ್ನು ಕ್ಷಮಿಸಿ ತಮ್ಮ ಉದ್ಧಾರವನ್ನು ಮಾಡುವಂತೆ ಪ್ರಾರ್ಥಿಸುವ ಪರಿಸ್ಥಿತಿಯುಂಟಾಗದೇ ಇರುವಂತೆ ಮಾಡಬೇಕೆಂದು ದಯಾದೇವಿಯನ್ನು ಪ್ರಾರ್ಥಿಸಿದರು. ಈ ಪದ್ಯದಲ್ಲಿ ದಯಾದೇವಿಯು ತನ್ನ ಅಪರಾಧಗಳೆಲ್ಲವನ್ನೂ ನುಂಗಿಕೊಂಡು ಕಷ್ಟಪಟ್ಟು ಕೊಂಡಾದರೂ ತನ್ನ ಉದ್ಧಾರವನ್ನು ಹೀಗೆ ಮಾಡುತ್ತಾಳೆಂಬುದನ್ನು ಅವರು ವಿಶದ ಪಡಿಸುತ್ತಾರೆ.

ಕುತೂಹಲ, ಆಸಕ್ತಿ , ಮಾನವನ ಸಹಜಸ್ವಭಾವ, ಅದಿಲ್ಲದೆ ಮನುಷ್ಯನ ಜೀವನ ನೀರಸವಾಗಿರುತ್ತದೆ. ಕುತೂಹಲ ಇದ್ದರೆ ಮಾತ್ರ ಮಾನವನ ಪ್ರಗತಿ ಮತ್ತು ಉದ್ಧಾರ ಸಾಧ್ಯ. ಆದರೆ ಒಬ್ಬೊಬ್ಬರಲ್ಲಿ ಒಂದೊಂದು ರೀತಿಯಲ್ಲಿ ಕಂಡು ಬರುತ್ತದೆ, ಒಂದೊಂದು ರೀತಿಯಲ್ಲಿ ಪ್ರಸರಿಸುತ್ತದೆ. ಇದು ಯಾವ ರೀತಿಯಲ್ಲಿ , ಯಾವ ದಿಕ್ಕಿನಲ್ಲಿ ಪ್ರಸರಿಸಿದರೂ ಅದರ ಪರಿಣಾಮ ಜ್ಞಾನಾಭಿವೃದ್ಧಿಯೇ. ಲೋಕದಲ್ಲಿ ಜ್ಞಾನದ ವ್ಯಾಪ್ತಿ ಬಹು ವಿಸ್ತಾರವಾದದ್ದು. ಈ ಎಲ್ಲ ಜ್ಞಾನಗಳಲ್ಲಿಯೂ ಶ್ರೇಷ್ಠತಮವಾದದ್ದು ಆತ್ಮಜ್ಞಾನ. ಇದಕ್ಕಾಗಿ ಅಂದರೆ, ಆತ್ಮಜ್ಞಾನವನ್ನು ಪಡೆದು ಮೋಕ್ಷವನ್ನು ಸಾಧಿಸುವುದಕ್ಕಾಗಿ ಶ್ರಮಿಸುವ ಮತ್ತು ಶ್ರಮಿಸಿರುವ ಎಷ್ಟೋ ಮಂದಿ ಚೇತನರ ಜೀವನ ಚರಿತ್ರೆಯನ್ನು ತಿಳಿದುಕೊಂಡಿದ್ದೇವೆ. ಹೀಗೆ ಆತ್ಮಜ್ಞಾನ ಪಡೆಯಲು ಶ್ರಮಿಸಿದ ಚೇತನರಲ್ಲೂ ಅನೇಕ ಮಾರ್ಗಗಳು ಕಂಡು ಬರುತ್ತವೆ. ಇಂತಹ ಮಾರ್ಗಗಳಲ್ಲಿ ಪ್ರಪತ್ತಿ ಮಾರ್ಗವೂ ಒಂದು. ಪ್ರಪನ್ನನಾದವನು ತನ್ನ ಸಮಸ್ತವನ್ನು ಭಗವಂತನಲ್ಲಿ ಅರ್ಪಿಸಿ ಸಂಪೂರ್ಣವಾಗಿ ಅವನಲ್ಲಿ ಶರಣಾಗತನಾಗುವನು. ತನ್ನ ದೇನಿದ್ದರೂ ಎಲ್ಲವೂ ಅವನದೇ ಎಂಬ ಭಾವವನ್ನು ಹೊಂದಿದವನಾಗಿ ವರ್ತಿಸುವನು. ಇಂತಹವರಲ್ಲಿ ಆಚಾರ್ಯರೂ ಒಬ್ಬರೂ . ಈ ಪದ್ಯದಲ್ಲಿ ತಮ್ಮ ವಿಚಿತ್ರವಾದ ಕುತೂಹಲವನ್ನು ಅವರು ವ್ಯಕ್ತ ಪಡಿಸಿದ್ದಾರೆ. ಅವರು ಸ್ಪಷ್ಟಪಡಿಸಿರುವಂತೆ ತಮ್ಮ ಅಪರಾಧಗಳನ್ನೆಲ್ಲ ಭಗವಂತನಲ್ಲಿ ಅರ್ಪಿಸಲು ಆಸಕ್ತಿಯುಳ್ಳವರಾಗಿದ್ದಾರೆ. ಆದ್ದರಿಂದಲೇ ದಯಾದೇವಿಯನ್ನು ಸಂಬೋಧಿಸುತ್ತಾ ತನ್ನ ಅಪರಾಧಗಳನ್ನೆಲ್ಲ ನಾಶಮಾಡಿ ಆಕೆಯನ್ನು ಪ್ರಸನ್ನಗೊಳಿಸಲು ಇಚ್ಛಿಸುತ್ತಾರೆ. ಇದನ್ನು ವ್ಯಕ್ತ ಪಡಿಸಿರುವ ರೀತಿಯೂ ಸ್ವಾರಸ್ಯವಾಗಿದೆ. ನಮ್ಮ ಅಪರಾಧಗಳನ್ನು ನಾವು ಹೋಗಲಾಡಿಸಿಕೊಂಡರೆ ಆಕೆಗೆ (ದಯಾದೇವಿಗೆ) ಏನು ತೃಪ್ತಿಯಾದೀತು! ಆಕೆಗೆ ಏನನ್ನಾದರೂ ಕೊಟ್ಟರೆ ತಾನೆ ಆಕೆ ಪ್ರಸನ್ನಳಾಗುವುದು . ಹಿಂದೆ 39 ನೆಯ ಪದ್ಯದಲ್ಲಿ ಆಕೆಯದು ಬಹು ದೊಡ್ಡ ಹೊಟ್ಟೆಯೆಂದೂ ತನ್ನ ಎಲ್ಲ ಅಪರಾಧಗಳನ್ನೂ ನುಂಗಿದರೂ ಆಕೆಯ ಹೊಟ್ಟೆಯುತುಂಬದೆ ಆಕೆ ಅತೃಪ್ತಳಾಗಿರುವಳೆಂದು ಸ್ವಾರಸ್ಯವಾಗಿ ವರ್ಣಿಸಿದ್ದಾರಷ್ಟೆ. ಇಲ್ಲಿ ತಮ್ಮ ಅಪರಾಧಗಳನ್ನೇ ಆಕೆಗೆ ಉಪಹಾರವಾಗಿ ಕೊಟ್ಟು, ಅಂದರೆ, ಅವುಗಳನ್ನು ನಾಶಮಾಡಿ ಆಕೆಯನ್ನು ಪ್ರಪನ್ನಳನ್ನಾಗಿ ಮಾಡಿಕೊಳ್ಳುತ್ತೇನೆಂದು ಹೇಳುವ ಅವರ ರೀತಿಯು ನಿಜವಾಗಿಯೂ ಬಹಳ ಸ್ವಾರಸ್ಯವಾದದ್ದು. ಅಂದರೆ ಪ್ರಸನ್ನನಾದವನು ತನ್ನ ಸಮಸ್ತವನ್ನೂ ಆಕೆಗೆ ಆಕೆಯ ಮೂಲಕ ಸರ್ವೇಶ್ವರನಿಗೆ, ಅರ್ಪಿಸುತ್ತಾನಲ್ಲವೆ! ಅಪರಾಧ ಚಕ್ರವರ್ತಿಯಾದ ತಾನು ತನ್ನ ಅಪರಾಧಗಳಿಗೆಲ್ಲ ಒಡೆಯನಾದ್ದರಿಂದ ಅವುಗಳೂ ತಮ್ಮ ಸರ್ವಸ್ವಗಳಲ್ಲಿ ಸೇರಿದುವೇ ತಾನೇ. ಆದ್ದರಿಂದಲೇ ಅವನ ಗುಣಗಳಿಗೆಲ್ಲ ಚಕ್ರವರ್ತಿನಿಯೂ ಆದ ದಯಾದೇವಿಯು ಅಪರಾಧಗಳಿಗೆಲ್ಲ ಚಕ್ರವರ್ತಿಯಾದ ತನ್ನನ್ನು ಗುಣಗಳಲ್ಲೆಲ್ಲ ಪ್ರಧಾನವಾದ ಕ್ಷಮಾಗುಣ ಪೂರ್ಣಳಾದವಳಾಗಿ ಭಗವಂತನ ಪಾದಾರವಿಂದಗಳಲ್ಲಿ ಕೆಡಕುವಳೆಂದು ಭಾವವು. ಅತ್ಯಂತ ಗುರುತರವಾದ ಅಪರಾಧಗಳನ್ನು ಅರ್ಪಿಸಿದರೂ ಕೂಡ ಆಕೆ ಪ್ರಸನ್ನಳಾಗುವಳೆಂದೂ ತನ್ನ ಉದ್ಧಾರ ಮಾಡುವಳೆಂದೂ ಭಾವವು ಇದು ಪ್ರಪತ್ತಿಯ ಪರಾಕಾಷ್ಠತೆ.

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀ ಕ್ರೋಧಿನಾಮ ಸಂವತ್ಸರ ಕಾರ್ತೀಕ - ಮಾರ್ಗಶಿರ ಮಾಸ ಸಂಚಿಕೆ

ಸಂಪುಟ : 04 ಡಿಸೆಂಬರ್ - 2024 ಸಂಚಿಕೆ : 05



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಶ್ರೀ ಜೆ. ಶ್ಯಾಮಲ ರಾವ್, ಐ.ಎ.ಎಸ್.,
ಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ., ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.,

**ಸಂಪಾದಕರು**
ಡಾ॥ವಿ. ಜಿ. ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.,

**ಮುದ್ರಣ**
ಶ್ರೀ . ಪಿ. ರಾಮರಾಜು, ಎಮ್.ಎ.,
ವಿಶೇಷಾಧಿಕಾರಿ,
ತಿ.ತಿ.ದೇ., ಮುದ್ರಣಾಲಯ, ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ. ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್,
ಪ್ರಧಾನ ಛಾಯಗ್ರಹಣ, ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು,
ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ., ಪ್ರೆಸ್,
2 ನೇ ಅಂತಸ್ತು, ಕೆ.ಟಿ.ರಸ್ತೆ.
ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
**1800-425-4141**
ಸಲಹೆ/ಸೂಚನ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
**www.tirumala.org**
ಮೂಲಕ ಓದಬಹುದು.

## ವಿಷಯಸೂಚಿಕೆ

| | | |
|---|---|---|
| ಸಂಪಾದಕೀಯ | | 06 |
| ಆನಂದನಿಲಯನ ತಪಸ್ಸಿನ ಫಲವೇ ಶ್ರೀ ಅಲಮೇಲುಮಂಗ!! | - ಎಸ್. ವಾದಿರಾಜ | 07 |
| ಧ್ವಜಪುರದ ಶ್ರೀ ಕೋಟೇಶ್ವರ ಕ್ಷೇತ್ರ | - ಮನೋಹರ ಜೋಶಿ | 11 |
| ಪುಸ್ತಕ ಪರಿಚಯ | - ಪ್ರಣವ | 13 |
| ಶ್ರೀ ಮದ್ಭಾಗವತ ಮಹಾತ್ಮೆ | - ಡಾ॥ ಸುಮನ ಬದರೀನಾಥ್ | 14 |
| ಶ್ರೀ ಚೊಕ್ಕನಾಥ ಸ್ವಾಮಿ ದೇವಸ್ಥಾನ | - ಶ್ರೀಮತಿ. ಮಾಲಾಪ್ರಸಾದ್ | 16 |
| ಆಂಡಾಳ್ ದೇವಿಯ ಭಕ್ತಿ ಗೀತೆ ತಿರುಪ್ಪಾವೈ | - ಡಾ॥ ಎನ್.ಕೆ. ರಾಮಶೇಷನ್ | 18 |
| ಭಗವದ್ಗೀತೆ ಅದು ಜೀವದ ಭಾವಗೀತೆ | -ಶ್ರೀಮತಿ. ಕೆ. ವಿ. ಪದ್ಮಾವತಿ | 20 |
| ಈಶಾವಾಸ್ಯ ಉಪನಿಷತ್ತು | - ಪ್ರಭಂಜನ ಗುತ್ತಲ್ | 22 |
| ಶ್ರೀ ವೆಂಕಟೇಶ್ವರ ಸ್ವಾಮಿ ಆಲಯ | - ದಿ॥ ಬಿ.ಎನ್. ಶ್ರೀನಿವಾಸನ್ | 24 |
| ಕುಕ್ಕೆ ಸುಬ್ರಹ್ಮಣ್ಯದಲ್ಲಿ ಜಾತ್ರೆಯ ಸಂಭ್ರಮ | -ಶ್ರೀಮತಿ.ಸುಮಚಂದ್ರಶೇಖರ್ | 31 |
| ಪುಣ್ಯ ಪೂರ್ವಾರ್ಜಿತ ವಿದು ಸುರಮಾನ್ಯ ಶ್ರೀನಿಲಯನ ದರುಶನ | - ಎಂ. ಎ. ಭರತ್ | 35 |
| ಶ್ರೀ ಅಕ್ಷೋಭ್ಯ ತೀರ್ಥರು | -ಶ್ರೀಧರರಾಯಸಂ | 37 |
| ಶಿಖಂಡಿಯಾದ ಅಂಬೆ | - ಹನುಮಂತ.ಮ. ದೇಶಕುಲಕರ್ಣಿ | 38 |
| ತಿರುಕ್ಕಾವಳಂಬಾಡಿ (ತಿರುನಾಂಗೂರ್) | - ಶ್ರೀಮತಿ. ಸೂರ್ಯವಂಶಿ | 39 |
| ಧನುರ್ಮಾಸ ಪುಣ್ಯ ಪೂರ್ಣಮಾಸ ಪರ್ವಪ್ರವರ ಪ್ರತಿಷ್ಠಿತ ಮಾಸ | - ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | 41 |
| ಕನ್ನಂಬಾಡಿ ಗ್ರಾಮ (ನಾರ್ತ್‌ಬ್ಯಾಂಕ್) ಶ್ರೀ ವೇಣುಗೋಪಾಲಸ್ವಾಮಿ ದೇವಾಲಯ | - ಕೆಂಗೇರಿ ಚಕ್ರಪಾಣಿ | 44 |
| ರಾಶಿಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ॥ ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ - ಹೀಯಾಳಿಸುವ ಪ್ರವೃತ್ತಿ ಒಳ್ಳೆಯದಲ್ಲ | - ಎ.ಆರ್.ರಘುರಾಮ | 48 |
| ಚಿತ್ರಕಥೆ- ಮಹಾದಾತ | - ಶ್ರೀನಿವಾಸ ದೀಕ್ಷಿತರು | 52 |

ಮುಖಚಿತ್ರ - ಕೃಷ್ಣಾಲಂಕಾರದಲ್ಲಿರುವ ಶ್ರೀಮಲೆಯಪ್ಪಸ್ವಾಮಿಯವರು, ತಿರುಮಲೆ
ಹಿಂಬದಿಚಿತ್ರ - ಶ್ರೀ ಗೋವಿಂದರಾಜಸ್ವಾಮಿ ದೇವಸ್ಥಾನದಲ್ಲಿರುವ ಶ್ರೀ ಗೋದಾದೇವಿ, ತಿರುಪತಿ

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ | ರೂ. 2400/- (12 ವರ್ಷಗಳು) |
| ವಿದೇಶಿ ವಾರ್ಷಿಕ ಚಂದಾ | ರೂ. 1030/- |

ಸಂಪಾದಕೀಯ

# ತಿರುಮಲೆಯಲ್ಲಿ ತಿರುಪ್ಪಾವೈ

ಆರ್ತತ್ರಾಣಪರಾಯಣನಾದ ವೆಂಕಟಗಿರಿನಾಥನಿಗೆ ದಿನನಿತ್ಯವೂ ಬೆಳಿಗ್ಗೆ 'ಸುಪ್ರಭಾತ' ದಿಂದ ಹಿಡಿದು ರಾತ್ರಿ 'ಏಕಾಂತಸೇವೆ' ಯವರೆಗೂ ಅನೇಕ ಉತ್ಸವಗಳು ನಡೆಯುತ್ತವೆ. ಇಷ್ಟು ಮಾತ್ರವೇ ಅಲ್ಲದೇ ತಿರುಮಲೆಯ ವೇಂಕಟೇಶ್ವರನಿಗೆ ನಿತ್ಯೋತ್ಸವಗಳು, ವಾರೋತ್ಸವಗಳು,ಪಕ್ಷೋತ್ಸವಗಳು,ಮಾಸೋತ್ಸವಗಳು,ವಾರ್ಷಿಕೋತ್ಸವಗಳು ಹೀಗೆ ಅತ್ಯಂತ ವೈಭವದಿಂದ ನಡೆಯುತ್ತವೆ.

ಹೀಗೆ ಅನೇಕ ಉತ್ಸವಗಳು,ಸೇವೆಗಳು ನಡೆಯುತ್ತಿದ್ದರೂ ಪ್ರತಿದಿನವೂ ವೇಂಕಟೇಶ್ವರಸ್ವಾಮಿಗೆ "ಕೌಸಲ್ಯಾ ಸುಪ್ರಜಾರಾಮ! ಪೂರ್ವಾಸಂಧ್ಯಾ ಪ್ರವರ್ತತೇ"ಎಂಬ ಸುಪ್ರಭಾತದೊಂದಿಗೆ ದಿನವು ಪ್ರಾರಂಭವಾಗುತ್ತದೆ. ಈ ಸುಪ್ರಭಾತ ಸೇವೆಯು ಧನುರ್ಮಾಸವನ್ನು ಬಿಟ್ಟು ಉಳಿದ ದಿನವೆಲ್ಲಾ ನಡೆಯುತ್ತದೆ. ಧನುರ್ಮಾಸದುದ್ದಕ್ಕೂ ಗೋದಾದೇವಿ (ಆಂಡಾಳ್) ಸ್ವಾಮಿಯನ್ನು ಕೀರ್ತಿಸಿದ 'ತಿರುಪ್ಪಾವೈ' ಪಾಶುರಗಳ ಗಾಯನ ನಡೆಯುತ್ತದೆ. ಈ ಧನುರ್ಮಾಸ ಪ್ರತಿ ವರ್ಷ ಸಾಧಾರಣವಾಗಿ ಮಾರ್ಗಶಿರ ಪುಷ್ಯಮಾಸದಲ್ಲಿ ಬರುತ್ತದೆ. ಅಂದರೆ ಸೌರಮಾನದ ಪ್ರಕಾರ ಡಿಸೆಂಬರ್ 15 ಅಥವಾ 16 ನೆಯ ತಾರೀಖಿನಂದು ಪ್ರಾರಂಭವಾಗಿ ಜನವರಿ 14 ರೊಂದಿಗೆ ಮುಗಿಯುತ್ತದೆ.

ತಮಿಳು ಭಾಷೆಯ ಸಾಹಿತ್ಯದಲ್ಲಿ ನಾಲ್ಕುಸಾವಿರ ಪಾಶುರಗಳಲ್ಲಿ (ಹಾಡುಗಳು)'ನಾಲಾಯಿರ ದಿವ್ಯ ಪ್ರಬಂಧ' ಬಹಳ ಪ್ರಸಿದ್ಧವಾದುದು. ಇದನ್ನು ವೈಷ್ಣವ ಭಕ್ತಾಗ್ರಣಿಯಾದ ಹನ್ನೆರಡು ಜನ "ಆಳ್ವಾರರು"ಭಗವಂತನನ್ನು ಕೀರ್ತಿಸಿದ್ದಾರೆ. ಇವರನ್ನೇ ದಿವ್ಯಸೂರಿಗಳೆಂದು,ಪರಮಯೋಗಿಗಳೆಂದು ಕರೆಯುತ್ತಾರೆ.

ಪರಮಯೋಗಿಗಳಾದ ಈ ಆಳ್ವಾರರು ಶ್ರೀಮಹಾವಿಷ್ಣುವನ್ನು ನೋಡಿ ಪರವಶತೆಯನ್ನು ಹೊಂದಿ ಹಾಡಿದ ಪಾಶುರ ಪ್ರಬಂಧಗಳು ವೇದಗಳಂತೇ ಗೌರವಿಸಲ್ಪಡುತ್ತಿವೆ. ಅದರಲ್ಲಿ ಗೋದಾದೇವಿ ರಚಿಸಿದ ತಿರುಪ್ಪಾವೈ ಎನ್ನುವ ಮೂವತ್ತು ಪಾಶುರಗಳು ಅತ್ಯಂತ ಪ್ರಸಿದ್ಧವಾದುದಾಗಿದೆ. ಈಕೆ "ಪೆರಿಯಾಳ್ವಾರರು"ಎಂದು ಪ್ರಸಿದ್ಧಿ ಪಡೆದ ವಿಷ್ಣುಚಿತ್ತನ ಸಾಕುಮಗಳು! ಶ್ರೀವಿಲ್ಲಿಪುತ್ತೂರಿನಲ್ಲಿ ವಟಪತ್ರಶಾಯಿಯಾದ ಶ್ರೀಮಹಾವಿಷ್ಣುವಿಗೆ,ವಿಷ್ಣುಚಿತ್ತನು ಸೇವೆಯನ್ನು ಮಾಡುತ್ತಿದ್ದ ಹೂಮಾಲೆಗಳನ್ನು ತಾನೇ ಮೊದಲು ಧರಿಸಿ ಪುನಃ ಅವುಗಳನ್ನು ಸ್ವಾಮಿಯ ಸೇವೆಗೆ ಕಳುಹಿಸಿದ್ದರಿಂದ ಈಕೆಗೆ "ಆಮುಕ್ತಮಾಲ್ಯ"ದ ಎಂದು, "ಚೂಡಿಕೊಡುತ್ತ ನಾಚ್ಚಿಯಾರ್" ಎಂಬ ಹೆಸರುಗಳು ಇವೆ.

ವೈಷ್ಣವ ಭಕ್ತಾಗ್ರೇಸರರು ಅನೇಕ ಮಂದಿ ದರ್ಶಿಸಿ ಕೀರ್ತಿಸಿದ ವೈಷ್ಣವ ಪ್ರಧಾನ ಕ್ಷೇತ್ರ ಈ ತಿರುಮಲೆ! ಪೋಯಿಗೈ ಆಳ್ವಾರ್, ತಿರುಮಳಿಶೈ ಆಳ್ವಾರ್, ನಮ್ಮಾಳ್ವಾರ್ ಮೊದಲಾದವರು ಶ್ರೀವೇಂಕಟಾಚಲಪತಿಯನ್ನು ಅನೇಕ ವಿಧದಲ್ಲಿ ಕೀರ್ತಿಸಿ ಗಾಯನ ಮಾಡಿದರು. ಏಕೈಕ ಸ್ತ್ರೀ ಆಳ್ವಾರರೆಂದು ಪ್ರಸಿದ್ಧಿಯನ್ನು ಪಡೆದ 'ಆಂಡಾಳ್' ತಿರುಮಲೇಶನನ್ನು ಹಲವು ರೀತಿಯಲ್ಲಿ ಕೀರ್ತಿಸಿದ್ದಾಳೆ.

'ವೆಯ್ಯಿದೋರ್ ತಳಲ್ ಮಿಲ್ ಶಕ್ಕರೆಕ್ಕೆಯ್, ವೇಂಗಡ ವರ್ಕಣ್ಣೈವಿದಿಕಿತ್ತಿಯೇ' ಗೋದಾದೇವಿ ತಿಳಿಸಿದ ಈ ಅರ್ಪಣಾಭಾವವನ್ನು ದೃಷ್ಟಿಯಲ್ಲಿರಿಸಿಕೊಂಡು ಭಗವದ್ರಾಮಾನುಜರು ತಿರುಮಲೆ ತಿರುಪತಿ ದೇವಾಲಯಗಳಲ್ಲಿ 'ತಿರುಪ್ಪಾವೈ' ಪಠನೆಯನ್ನು ಪ್ರತಿ ಧನುರ್ಮಾಸದಲ್ಲಿ ಪ್ರಾರಂಭಿಸಿದರು. ರಾಮಾನುಜಾಚಾರ್ಯರಿಗೆ ಗೋದಾದೇವಿಯ ಬಗೆಗೆ, ಆಕೆ ಕೀರ್ತಿಸಿದ 'ತಿರುಪ್ಪಾವೈ' ಬಗೆಗೆ ಅತ್ಯಂತ ಭಕ್ತಿಶ್ರದ್ಧೆಯನ್ನು ಹೊಂದಿದ್ದರು. ತಿರುಪ್ಪಾವೈ ಸರ್ವವೇದಗಳ ಸಾರವೆಂದು ವ್ಯಾಖ್ಯಾನಿಸಿ, ಪ್ರಚಾರವನ್ನು ಮಾಡಿದ ಶ್ರೀರಾಮಾನುಜರು "ತಿರುಪ್ಪಾವೈ ಜೀಯರ್" ಎಂದೇ ಪ್ರಸಿದ್ಧಿಯನ್ನು ಪಡೆದರು.

ಈ ತಿಂಗಳೆಲ್ಲಾ ತಿರುಮಲೆಯಲ್ಲಿ ಶ್ರೀನಿವಾಸನಿಗೆ ಸುಪ್ರಭಾತದ ಬದಲಾಗಿ ಜಿಯ್ಯಂಗಾರರು, ಏಕಾಂಗಿಗಳು, ವೈಷ್ಣವಾಚಾರ್ಯರೇ ಮೊದಲಾದವರು ಆಂಡಾಳ್ ತಿರುಪ್ಪಾವೈ ಪಠನೆಯನ್ನು ಏಕಾಂತವಾಗಿ ನಡೆಸುತ್ತಾರೆ. ಧನುರ್ಮಾಸದ ಮೂವತ್ತು ದಿನಗಳೂ ಶ್ರೀವೇಂಕಟೇಶ್ವರನನ್ನೇ ಶ್ರೀಕೃಷ್ಣನೆಂದು ಭಾವಿಸಿ ಅರ್ಚಕರು ಪೂಜೆಗಳನ್ನು ಮಾಡುತ್ತಾರೆ.

ಅದಕ್ಕೇ ಏಳೇಳೂ ಲೋಕಗಳಲ್ಲಿ ಸರಿಸಾಟಿಯಿಲ್ಲದ ಏಳು ಗಿರಿಗಳಲ್ಲಿ ವಿಶೇಷವಾಗಿ 'ಧನುರ್ಮಾಸ'ದ ತಿಂಗಳಿನಲ್ಲಿ ಆನಂದನಿಲಯನ ಸನ್ನಿಧಿಯಲ್ಲಿ ನಡೆಯುವ ಉತ್ಸವ ವಿಶೇಷಗಳಲ್ಲಿ ಪಾಲ್ಗೊಂಡು ಧನ್ಯರಾಗೋಣ ಬನ್ನಿ..

**ಓಂ ನಮೋ ವೇಂಕಟೇಶಾಯ !!**

# ಆನಂದನಿಲಯನ ತಪಸ್ಸಿನ ಫಲವೇ ಶ್ರೀ ಅಲಮೇಲುಮಂಗ!!!

ಮೂಲ: ಜೆ. ಬಾಲಸುಬ್ರಮಣ್ಯ
ಅನುವಾದ : ಎಸ್. ವಾದಿರಾಜ

ಏನಿದು! ಸಾಕ್ಷಾತ್ತು ಆನಂದನಿಲಯನೇ ತಪಸ್ಸು ಮಾಡಿದನೇ? ಸಪ್ತಗಿರಿಯ ಮೇಲೆ ಬಂಗಾರದ ಮಹಲಾದ ಆನಂದನಿಲಯದಲ್ಲಿ ನೆಲೆಸಿರುವ ಸ್ವಾಮಿಯು ನಿಜವಾಗಿಯೂ ತಪಸ್ಸು ಮಾಡಿದನೇ? ಆ ದೇವಾದಿದೇವನು ತಪಸ್ಸು ಮಾಡಿದರ ಫಲವಾಗಿ ಅಲಮೇಲುಮಂಗಮ್ಮ ಅವತರಿಸಿದಳೇ?

ಇದು ಕೇಳುವುದಕ್ಕೆ ವಿಚಿತ್ರವಾಗಿದೆಯಲ್ಲವೇ? ನಂಬಲಾರದ ನಿಜ ದಂತಿದೆಯಲ್ಲಾ? ಇದು ಎಲ್ಲಿ ನಡೆದ ಕಥೆಯೋ? ಯಾವುದೋ ಕಾಲದಲ್ಲಿ ನಡೆದ ಕಥೆಯಲ್ಲವೇ? ನಿಜವಾಗಿಯು ನಂಬಬಹುದಾದ ಕಥೆಯೇ?

ಇದು ವಿಚಿತ್ರವಲ್ಲ ,ನಂಬಲಾರದುದಂತದಲ್ಲವೇ ಅಲ್ಲ ! ಸುಮಾರು ಐದು ಸಾವಿರ ವರ್ಷಗಳ ಹಿಂದೆ ನಡೆದ ನೈಜಘಟನೆ!!

## ಎರಡು ಸ್ಥಳಗಳಲ್ಲಿ ತಪಸ್ಸನ್ನು ಆಚರಿಸಿದ ಆನಂದ ನಿಲಯ ವಾಸ


ಆನಂದನಿಲಯನು ಒಂದಲ್ಲ, ಒಂದೇ ಸ್ಥಳದಲ್ಲಿ ಅಲ್ಲ ಎರಡು ಬಾರಿ! ಎರಡು ದಿವ್ಯವಾದ ಪ್ರದೇಶಗಳಲ್ಲಿ ತಪಸ್ಸನ್ನು ಮಾಡಿದ. ಅದು ಒಂದು ಕ್ಷೇತ್ರದಲ್ಲಿ ಹತ್ತು ವರ್ಷಗಳ ಕಾಲ, ಮತ್ತೊಂದೆಡೆ ಹನ್ನೆರಡು ವರ್ಷಗಳ ಕಾಲ! ಒಟ್ಟು ಇಪ್ಪತ್ತೆರಡು ವರ್ಷಗಳ ಕಾಲ ನಿದ್ರಾಹಾರಗಳನ್ನು ತೊರೆದು ತಪಸ್ಸನ್ನು ಆಚರಿಸಿದ. ಯಾರಿಗಾಗಿ? ಯಾತಕ್ಕಾಗಿ? ಅಂದರೆ ಭಕ್ತರೆಲ್ಲರಿಗಾಗಿ, ಲೋಕಕಲ್ಯಾಣಕ್ಕಾಗಿ ತಪಸ್ಸನ್ನು ಆಚರಿಸಿದ. ಆನಂದ ನಿಲಯನ ತಪಸ್ಸಿಗೆ ಆನಂದಗೊಂಡ ಶ್ರೀ ಅಲಮೇಲುಮಂಗಮ್ಮ ಸಮಸ್ತ ಜಗತ್ಕಲ್ಯಾಣವನ್ನು ಎಸಗುವ ಜಗಜ್ಜನನಿಯಾಗಿ ಅವತರಿಸಿದಳು.

ಆ ತಾಯಿಯ ಕೃಪಾ ಕಟಾಕ್ಷವೇ ಭಕ್ತರ ಪಾಲಿನ ಕಾಮಧೇನು! ಆ ಜಗನ್ಮಾತೆಯ ಮನಸ್ಸು ಚಿಂತಾಮಣಿಯಂತದ್ದು! ಆ ತಾಯಿಯ ಕೈಗಳು ಭಕ್ತರ ಬೇಡಿಕೆಗಳನ್ನು ಪೂರೈಸುವಂತಹಾ ಕಲ್ಪವೃಕ್ಷಗಳು! ಇನ್ನು ಆ ದಿವ್ಯಮಂಗಳ ತಾಯಿಯ ದರ್ಶನವೇ ನವನಿಧಿಗಳ ರಾಶಿ! ಆಕೆ ಸುರಿಸುವ ದಯಾರಸವೇ ಆನಂದಾಮೃತ ! ಹುಣ್ಣಿಮೆಯ ಚಂದ್ರನಂತಹಾ ಅಮ್ಮನ ಮುಖಾರವಿಂದವು ಸಮಸ್ತ ಕಳೆಗಳ ಆಗರ!!

ಹೀಗೆ ಅನೇಕ ವಿಧವಾದ ವಿಶೇಷವಾದ ಗುಣಗಳಿಂದ ಪ್ರಕಾಶಿಸುತ್ತಾ, ಸಮಸ್ತ ಭಕ್ತರ ಅಭೀಷ್ಟಗಳನ್ನು ಅನುಗ್ರಹಿಸುವಂತಹಾ ಅಮ್ಮನಮ್ಮ ಅಲಮೇಲುಮಂಗಮ್ಮ! ಆಕೆಯ ದಿವ್ಯವಾದ, ಅದ್ಭುತವಾದ ಚರಿತ್ರೆಯನ್ನು ಶ್ರದ್ಧೆಯಿಂದ ಕೇಳಿ ಶ್ರವಣಾನಂದವನ್ನು ಹೊಂದೋಣ!!

## ಅಲಮೇಲುಮಂಗಪಟ್ಟಣ - ತಿರುಚಾನೂರು

ಅಲಮೇಲುಮಂಗಮ್ಮ ಆನಂದನಿಲಯನ ಪಟ್ಟದರಸಿಯಾಗಿ, ಸಿರಿಯನ್ನು ಅನುಗ್ರಹಿಸುವ ತಾಯಿಯಾಗಿ ಸ್ಥಿರವಾಗಿ ನೆಲೆಸಿರುವ ಪುಣ್ಯಕರವಾದ ಸ್ಥಳವೇ ತಿರುಚಾನೂರು! ಈ ಕ್ಷೇತ್ರವನ್ನು "ಅಲಮೇಲುಮಂಗ ಪಟ್ಟಣ" ಎಂದೂ ಕರೆಯುತ್ತಾರೆ. ಹಿಂದೆ ಈ ಪ್ರಾಂತದಲ್ಲಿ ಶ್ರೀಶುಕ ಮಹರ್ಷಿಯ ಆಶ್ರಮವಿತ್ತಂತೆ! ಆದ್ದರಿಂದ ಶ್ರೀಶುಕನ ಊರೆಂದು ಪ್ರಸಿದ್ಧಿಯಾಗಿತ್ತು. ಅದೇ ತಿರುಶುಕನೂರು ಎಂದು ನಂತರ ತಿರುಚ್ಚುಕನೂರು ಎಂದು ಕರೆಯಲ್ಪಡುತ್ತಾ ಇಂದು ತಿರುಚಾನೂರು ಎಂದು ಪ್ರಸಿದ್ಧಿ ಯಾಗಿದೆ ಎಂದು ಪ್ರತೀತಿ! ಈ ಊರಿನ ಮಧ್ಯದ ಭಾಗದಲ್ಲಿ ಪದ್ಮಸರೋವರ ಎಂಬ ಪುಷ್ಕರಿಣೆ ಇದೆ. ಹಿಂದೆ ಈ ಪುಷ್ಕರಿಣೆಯಲ್ಲಿ ಸಾಕ್ಷಾತ್ತು ಶ್ರೀಮಹಾಲಕ್ಷ್ಮೀ ಬಂಗಾರದ ಪದ್ಮದಲ್ಲಿ ಅವತರಿ





ಸಿದ್ದರಿಂದ ಆಕೆ ಪದ್ಮಾವತಿ ಎಂದೂ ಅಲಮೇಲುಮಂಗ ಎಂದೂ ಕರೆಯಲ್ಪಡುತ್ತಿದ್ದಾಳೆ. ಅಲಮೇಲುಮಂಗ ಎಂದರೆ ತಮಿಳು ಭಾಷೆಯಲ್ಲಿ "ಅಲರ್‌ಮೇಲ್‌ಮಂಗ" ಅಂದರೆ ಪದ್ಮದ ಮೇಲೆ ಪ್ರಕಾಶಿಸುವಂತಹಾ ದಿವ್ಯವಾದ ಸ್ತ್ರೀ ಎಂದು ಅರ್ಥ!

ಆನಂದನಿಲಯನು ನೆಲೆಸಿರುವ ತಿರುಮಲೆಯ ಕ್ಷೇತ್ರವು ಎಷ್ಟು ಪ್ರಾಚೀನವಾದುದೋ ತಿರುಚಾನೂರು ಕೂಡಾ ಅಷ್ಟೇ ಪ್ರಾಚೀನ ವಾದುದಾಗಿದೆ. ವೇಂಕಟಾಚಲ ಎಷ್ಟು ಅದ್ಭುತವಾದ ಕ್ಷೇತ್ರವೋ ಅಲ್ಲಿರುವ ಆನಂದನಿಲಯನು ಎಷ್ಟು ಮಹಿಮಾನ್ವಿತನೋ, ಹಾಗೇ ಅಲುಮೇಲು ಮಂಗಪಟ್ಟಣವೂ, ಅಲ್ಲಿ ನೆಲೆಸಿರುವ ಅಲಮೇಲುಮಂಗಮ್ಮಳೂ ಅಷ್ಟೇ ಮಹಿಮೆಯುಳ್ಳವಳಾಗಿದ್ದಾಳೆ!!

ಈ ಏಳುಗಿರಿಯೊಡೆಯ ಕಲಿಯುಗದ ಭಕ್ತರ ಉದ್ಧಾರಕ್ಕಾಗಿ ಸಾಕ್ಷತ್ತು ವೈಕುಂಠದಿಂದ ಧರೆಗೆ ಇಳಿದುಬಂದ. ಭೃಗು ಮಹರ್ಷಿ ಮಾಡಿದ ಕೆಲಸದಿಂದಾಗಿ ಸ್ವಾಮಿಯು ಲಕ್ಷ್ಮೀದೇವಿಯ ಕೋಪಕ್ಕೆ ಗುರಿಯಾಗಿ, ಆಕೆಯ ವಿರಹವನ್ನು ಹೊಂದಿ ವೇಂಕಟೇಶ್ವರನು ಭಕ್ತರ ಕೋರಿಕೆಗಳನ್ನು ತೀರಿಸಲಾರದೇ ಕಳವಳಗೊಂಡಿದ್ದ. ತಾನೂ ಅನೇಕ ನೋವನ್ನು ಅನುಭವಿಸಿದ.

## ತಿರುಮಲೇಶನ ತಪಸ್ಸು

ಶ್ರೀನಿವಾಸನ ಮೇಲೆ ಕೋಪಗೊಂಡು ವೈಕುಂಠವನ್ನು ತೊರೆದು ಹೋಗಿದ್ದ ಶ್ರೀಮಹಾಲಕ್ಷ್ಮಿಯನ್ನು ಅರಸುತ್ತಾ, ಆಕೆಯ ತವರಾದ ಕೊಲ್ಹಾಪುರ ಕ್ಷೇತ್ರಕ್ಕೆ ಹೋಗಿ ಅಲ್ಲಿ ಆಕೆಯ ಅನುಗ್ರಹಕ್ಕಾಗಿ ಹತ್ತು ವರ್ಷಗಳ ಕಾಲ ತಪಸ್ಸು ಮಾಡಿದ. ಆದರೆ ಅಶರೀರವಾಣಿಯ ಮೂಲಕ, "ಇಲ್ಲಿ ನಿನಗೆ ನನ್ನ ದರ್ಶನ ದೊರೆಯುವುದಿಲ್ಲ" ಎಂದು ಖಡಾಕಂಡಿತವಾಗಿ ಹೇಳುತ್ತಾ ಪದ್ಮಸರೋವರದ ತೀರದಲ್ಲಿ ನಿನ್ನ ಕೋರಿಕೆ ನೆರವೇರುತ್ತದೆಂದು ಲಕ್ಷ್ಮೀದೇವಿ ಆದೇಶಿಸಿದಳು. ತನ್ನ ಮನದರಸಿಯನ್ನು ಹೇಗಾದರೂ ಪುನಃ ಪಡೆಯಬೇಕೆಂದು, ಆಕೆಯ ಅನುಜ್ಞೆಯ ಮೇರೆಗೆ ವೇಂಕಟೇಶ್ವರನು ತನ್ನ ಪಟ್ಟದರಸಿಯ ಅನುಗ್ರಹಕ್ಕಾಗಿ ಸುವರ್ಣಮುಖೀಯ ನದೀತೀರದಲ್ಲಿ ಪದ್ಮಸರೋವರವನ್ನು ಏರ್ಪಡಿಸಿ, ಹನ್ನೆರಡು ವರ್ಷಗಳ ಕಾಲ ಘೋರವಾದ ತಪಸ್ಸು ಮಾಡಿದ.

## ಕೊನೆಗೂ ಅವತರಿಸಿದ ಅಲಮೇಲುಮಂಗ

ಒಂದು ಕಾರ್ತೀಕ ಮಾಸದ ಶುದ್ಧ ಪಂಚಮಿಯ ಶುಕ್ರವಾರದಂದು, ಅಭಿಜಿತ್ ಲಗ್ನ, ಉತ್ತರಾಷಾಢ ನಕ್ಷತ್ರದಲ್ಲಿ, ಷೋಡಶಕಳೆಗಳೊಂದಿಗೆ ಪದ್ಮಸರೋವರದಲ್ಲಿ ಅರಳಿದ್ದ ಬಂಗಾರದ ಸಹಸ್ರದಳ ಪದ್ಮದಲ್ಲಿ ಶ್ರೀಮಹಾಲಕ್ಷ್ಮೀದೇವಿಯು ಉದ್ಭವಿಸಿದಳು. ಹೀಗೆ ಪದ್ಮಾವತಿಯಾಗಿ ಅಲಮೇಲುಮಂಗಳಾಗಿ ಅವತರಿಸಿದ, ಆ ತಾಯಿಯನ್ನು ಕೂಡಲೇ ತನ್ನ ವಕ್ಷಃಸ್ಥಳದಲ್ಲಿ ಸ್ಥಾಪಿಸಿಕೊಂಡ ಸಪ್ತಗಿರಿಯೊಡೆಯ "ಶ್ರೀನಿವಾಸನಾಗಿ" ಸಂಪೂರ್ಣವಾದ ಲಕ್ಷ್ಮೀಕಳೆಯೊಂದಿಗೆ ಪ್ರಕಾಶಿಸುತ್ತಾ ತಿರುಮಲೆಯ ಬೆಟ್ಟಕ್ಕೆ ಪಯಣಿಸಿದ. ಈ ತಾಯಿಯು ಉದ್ಭವಿಸಿದ ಸ್ಥಳದಲ್ಲಿಯೇ ಅರ್ಚಾಮೂರ್ತಿಯಾಗಿ ಪೂಜೆಯನ್ನು ಸ್ವೀಕರಿಸಬೇಕೆಂದು ದೇವತೆಗಳೆಲ್ಲರೂ ಆಕೆಯನ್ನು ಪರಿಪರಿವಿಧದಲ್ಲಿ ಪ್ರಾರ್ಥಿಸಿದರು. ಆ ದೇವತೆಗಳ ಪ್ರಾರ್ಥನೆಯನ್ನು ಮನ್ನಿಸಿದ ಮಹಾಲಕ್ಷ್ಮಿಯು ತಾನು ಇಲ್ಲಿ ಸ್ವತಂತ್ರ ವೀರಲಕ್ಷ್ಮಿಯಾಗಿ ನೆಲೆಸಿರುತ್ತೇನೆಂದು ತಿರುಮಲೆಯ ಗಿರಿಯಲ್ಲಿ ಸ್ವಾಮಿಗೆ ಸ್ವತಂತ್ರವಾಗಿ ಸೇವೆಗಳು ನಡೆಯುತ್ತಿರುವಂತೆ ತನಗೂ ಇಲ್ಲಿ ಎಲ್ಲಾ ಸೇವೆಗಳು, ಉತ್ಸವಗಳನ್ನು ನಡೆಸಬೇಕೆಂದು ಆದೇಶಿಸಿದಳು. ಶ್ರೀ ಸ್ವಾಮಿಯು ತನ್ನ ಪಕ್ಕದಲ್ಲಿ ಇಲ್ಲದಿರುವುದರಿಂದ ವಿರಹಲಕ್ಷ್ಮಿಯಾಗಿ, ವೀರಲಕ್ಷ್ಮಿಯಾಗಿ ಸ್ವತಂತ್ರವಾಗಿ ಇಲ್ಲಿಗೆ ತನ್ನನ್ನು ಆರಸಿ ಬರುವ ಭಕ್ತರ ಕೋರಿಕೆಗಳನ್ನು ನೆರವೇರಿಸುತ್ತೇನೆಂದು.ಇಲ್ಲಿ ಭಕ್ತರು ತಮ್ಮ ಕೋರಿಕೆಗಳನ್ನು ಬೇಡಿಕೊಂಡಾಗ ಮೊದಲು ತಾನು ಕೇಳಿಸಿಕೊಂಡು ನಂತರ ಆ ಬೇಡಿಕೆ ಗಳನ್ನು ತಿರುಮಲೆಯ ಕ್ಷೇತ್ರದಲ್ಲಿ ಶ್ರೀಹರಿಯ ವಕ್ಷಃಸ್ಥಳದಲ್ಲಿ ವ್ಯೂಹಲಕ್ಷ್ಮಿಯಾಗಿ ಇರುವ ತಾನು ಸ್ವಾಮಿಗೆ ತಿಳಿಸಿ ಅವರವರ ಕೋರಿಕೆಗಳನ್ನು ನೆರವೇರಿಸುತ್ತೇನೆಂದು ವರವನ್ನು ನೀಡಿದಳು.

ಅಂದಿನಿಂದಲೂ ಇಂದಿನವರೆಗೂ ತಿರುಚಾನೂರಿನಲ್ಲಿ ಅರ್ಚಾಮೂರ್ತಿಯಾಗಿ ನೆಲೆಸಿರುವ ಶ್ರೀ ಮಹಾಲಕ್ಷ್ಮಿಯು ಪದ್ಮಾವತಿಯೆಂದು, ಅಲಮೇಲುಮಂಗಮ್ಮ ಎಂಬ ಹೆಸರಿನಿಂದ ಸ್ವತಂತ್ರ ವೀರಲಕ್ಷ್ಮಿಯಾಗಿ ಪಾಂಚರಾತ್ರಾಗಮ ಶಾಸ್ತ್ರೋಕ್ತವಾಗಿ ಪೂಜೆಯನ್ನು ಸ್ವೀಕರಿಸುತ್ತಿದ್ದಾಳೆ. ಆದ್ದರಿಂದ ಪ್ರಪ್ರಥಮವಾಗಿ ಸಾಕ್ಷಾತ್ತು ಶ್ರೀನಿವಾಸನಿಂದಲೇ ಪ್ರಾರ್ಥಿಸಲ್ಪಟ್ಟು ತಿರುಚಾನೂರಿನಲ್ಲಿ ಸ್ವತಂತ್ರ ವೀರಲಕ್ಷ್ಮಿಯಾಗಿ ಪೂಜೆಯನ್ನು ಸ್ವೀಕರಿಸುತ್ತಿರುವ ಪದ್ಮಾವತಿದೇವಿಯನ್ನು ದರ್ಶಿಸಿ,ಪೂಜಿಸುವುದು, ಆಕೆಗೆ ತಮ್ಮ ತಮ್ಮ ಇಷ್ಟಾರ್ಥಗಳನ್ನು ಭಿನ್ನೈಸಿಕೊಳ್ಳುವುದು ಅತ್ಯಂತ ಶ್ರೇಯೋದಾಯಕವಾದುದು.ಇದರಿಂದ ಭಕ್ತರ ಯಾತ್ರೆಯು ಪರಿಪೂರ್ಣವಾಗುತ್ತದೆಂಬ ಪ್ರತೀತಿ ಇದೆ.

## ಗಂಭೀರನಾದ ಶ್ರೀನಿವಾಸಮೂರ್ತಿ

ಅತ್ಯಂತ ಕಷ್ಟಗಳನ್ನು, ವ್ಯಯವನ್ನು ಅನುಭವಿಸಿ ಪ್ರಯಾಣವನ್ನು ಮಾಡಿ ಏಳುಬೆಟ್ಟಗಳನ್ನು ಹತ್ತಿ ನೇರವಾಗಿ ತಿರುಮಲೆಯನ್ನು ತಲುಪುವ ಭಕ್ತರಿಗೆ ಕೇವಲ ಒಂದು ಕ್ಷಣ ಮಾತ್ರ ಸ್ವಾಮಿಯ ದರ್ಶನವನ್ನು ಪಡೆಯುವಂತಹಾ ಪರಿಸ್ಥಿತಿ ನೆಲೆಗೊಂಡಿದೆ. ಅದರಲ್ಲೂ ಎಲ್ಲೋ ಅವಸರದಿಂದ ಓಡುತ್ತಿರುವಂತೆ ಶಂಖಚಕ್ರಗಳಿಂದ ಗಂಭೀರನಾಗಿ ನಿಂತಿರುವ ಸ್ವಾಮಿ, ಜೊತೆಗೆ ನಮ್ಮಂತೆಯೇ ಶ್ರೀನಿವಾಸನನ್ನು ದರ್ಶಿಸಲು ಬರುವ ಸಾವಿರಾರು ಜನ ಭಕ್ತರು! ಇದಕ್ಕೆ ಜೊತೆಯಾಗಿ ಸದಾ ಉತ್ಸವಗಳೊಂದಿಗೆ ರಾರಾಜಿಸುತ್ತಿರುವ ಸ್ವಾಮಿ! ಅಂತಹ ತಿರುಮಲೆಯ ಸ್ವಾಮಿಯು ಸರಿಯಾಗಿ ಕಣ್ಣಿಗೆ ಕಾಣಿಸದೇ ಕೇವಲ ಒಂದು ಕ್ಷಣ ಮಾತ್ರಾ ದರ್ಶನವನ್ನು

ನೋಡಿದರೆ, ಆ ಸ್ವಾಮಿಯ ಪೂರ್ತಿ ವಿಗ್ರಹದ ಗಾಂಭೀರ್ಯಕ್ಕೆ, ದರ್ಪಕ್ಕೆ ಉಬ್ಬಿತಬ್ಬಿಬ್ಬಾಗಿ, ಕಳವಳ ಪಡುತ್ತಾ ತಮ್ಮ ಕೋರಿಕೆಗಳನ್ನು ಸ್ವಾಮಿಯ ಬಳಿ ಹೇಳಿಕೊಳ್ಳಲಾಗದೇ, ಅಥವಾ ಸ್ವಾಮಿಯನ್ನು ನೋಡಿದ ಕ್ಷಣದಲ್ಲೇ ತಾವು ಕೇಳಿಕೊಳ್ಳಬೇಕೆಂದುಕೊಂಡ ಕೋರಿಕೆಗಳನ್ನು ಮರೆಯುವುದೂ ಒಂದು ವಿಚಿತ್ರವೇ ಸರಿ!

ಅಲ್ಲದೇ ತಮ್ಮೊಂದಿಗೆ ಬಂದಿರುವ ಭಕ್ತರ ನಡುವೆ ನೂಕಾಟ, ಸದ್ದುಗದ್ದಲ, ಕೊನೇ ಪಕ್ಷ ಆ ಸ್ವಾಮಿಯ ದಿವ್ಯ ಮಂಗಳ ವಿಗ್ರಹವನ್ನು ಸರಿಯಾಗಿ ಮನಸಾರೆ ನೋಡದೆ, ನೋಡುವುದಕ್ಕೆ ಸಾಧ್ಯವಾಗದೇ, ಅರ್ಧ ಮನಸ್ಸಿನಿಂದ ಹೊರಗೆ ಬರುತ್ತಾರೆ.

ಭಕ್ತರೆಲ್ಲರಿಗೂ ಯಾವುದೋ ತಿಳಿಯದ ಅತೃಪ್ತಿ! ಯಾವುದೋ ಹೇಳಿಕೊಳ್ಳಲಾರದ ಕಳವಳ! ಇವೆಲ್ಲವೂ ತೀರುವ ಬಗೆ ಹೇಗೆ? ಇದಕ್ಕೆ ಒಂದೇ ಒಂದು ಪರಿಹಾರವೆಂದರೆ ತಿರುಮಲೇಶನಿಗಿಂತಲೂ ಮೊದಲು ಪದ್ಮಾವತಿ ಅಮ್ಮನವರವನ್ನು ದರ್ಶಿಸುವುದೇ ಆಗಿದೆ. ಆ ಅಮ್ಮನಿಗೆ ತಮ್ಮ ಪ್ರಾರ್ಥನೆಗಳನ್ನು ಅರಿಕೆ ಮಾಡಿಕೊಳ್ಳುವುದು ನಮ್ಮ ಬಯಕೆಗಳನ್ನು ನಮ್ಮ ಸಮಸ್ಯೆಗಳನ್ನು ಸ್ವಾಮಿಗೆ ತಿಳಿಸಬೇಕೆಂದು ಕೇಳಿಕೊಳ್ಳುವುದೇ ಒಂದು ಉಪಾಯ! ಇದು ಸತ್ಯವಾದ ಮಾತು! ಒಳ್ಳೆಯ ಮಾರ್ಗವೂ ಹೌದು !

## ಶಾಂತಿ ಸಹನೆಗಳ ಆಗರ ಅಲಮೇಲುಮಂಗಮ್ಮ

ತಿರುಚಾನೂರಿನಲ್ಲಿ ಅಲಮೇಲುಮಂಗಮ್ಮ ಚತುರ್ಭುಜಗಳಿಂದ ಪ್ರಶಾಂತವಾಗಿ, ಪದ್ಮಾಸನಿಯಾಗಿ ಅಭಯವರದಹಸ್ತಗಳೊಂದಿಗೆ ದರ್ಶನವನ್ನು ನೀಡುತ್ತಿದ್ದಾಳೆ. ತಿರುಮಲೆಯಲ್ಲಿ ಶ್ರೀನಿವಾಸನು ಗಂಭೀರವಾಗಿ ನಿಂತಿದ್ದರೆ, ತಿರುಚಾನೂರಿನಲ್ಲಿ ಪದ್ಮದ ಮೇಲೆ ಕುಳಿತಿರುವ ಈ ತಾಯಿ ಭಕ್ತರ ಪ್ರಾರ್ಥನೆಗಳನ್ನು ಕೋರಿಕೆಗಳನ್ನು ನಿಧಾನವಾಗಿ ಸಹನೆಯಿಂದ ಕೇಳಿಸಿಕೊಳ್ಳುತ್ತಾಳೆ. ನಂತರ ತಾನು ಕೇಳಿಸಿಕೊಂಡಿದ್ದೆಲ್ಲವನ್ನೂ ತಿರುಮಲೆಯಲ್ಲಿ ಶ್ರೀ ಹರಿಯ ವಕ್ಷಸ್ಥಳದಲ್ಲಿ ವ್ಯೂಹಲಕ್ಷ್ಮಿಯಾಗಿ ಇರುವ ಈ ಜಗಜ್ಜನನಿ ಮತ್ತಷ್ಟು ಸಹನೆಯೊಂದಿಗೆ, ಶಾಂತವಾಗಿ, ಪ್ರೇಮದಿಂದ ತನ್ನ ಸ್ವಾಮಿಗೆ ಭಕ್ತರ ಪ್ರಾರ್ಥನೆಗಳನ್ನು ತಿಳಿಸುತ್ತಾಳೆ. ಅಷ್ಟಕ್ಕೇ ಸುಮ್ಮನಾಗದೇ ಆ ಭಕ್ತರ ಕೋರಿಕೆಗಳನ್ನು ತಪ್ಪದೇ ತೀರಿಸುವಂತೆ ಸ್ವಾಮಿಯನ್ನು ಒತ್ತಾಯ ಮಾಡುತ್ತಾಳೆ. ಕೊನೆಗೆ ಅವೆಲ್ಲವನ್ನೂ ನೀಡಿ, ಭಕ್ತರಿಗೆ ಸುಖಶಾಂತಿಗಳನ್ನು ಪ್ರಸಾದಿಸುವಂತೆ ಒಪ್ಪಿಸುತ್ತಾಳೆ. ಮಕ್ಕಳಿಗಾಗಿ ಅಮ್ಮನ ಮಾತನ್ನು ಕೇಳಿದ ತಂದೆಯೂ ಎಲ್ಲಾದರೂ ಸುಮ್ಮನಿರುವನೇ! ಆದ್ದರಿಂದ ಆಕೆಯ ಶಿಫಾರಸ್ಸನ್ನು ಒಪ್ಪುತ್ತಾ ಶ್ರೀನಿವಾಸನು,ಪುನಃ ಪ್ರತ್ಯೇಕವಾಗಿ ಭಕ್ತರು ಏನನ್ನೂ ಬೇಡಿಕೊಳ್ಳದೆಯೇ, ಕೇವಲ ದರ್ಶನ ಮಾತ್ರದಿಂದಲೇ ಕೋರಿಕೆಗಳನ್ನು ನೆರವೇರಿಸಲೇಬೇಕೆಂದು "ಕಲೌ ವೇಂಕಟ ನಾಯಕಃ" ಎಂಬ ಬಿರುದನ್ನು ಸಾರ್ಥಕಪಡಿಸಿಕೊಂಡಿದ್ದಾನೆ.

## ದಯಾಗುಣವೆಂಬ ಭಾರ

ಇನ್ನೊಂದು ಮಾತು! ಹಿಂದಿನ ಕಾಲದಲ್ಲಿ ಅತ್ತ ಆನಂದನಿಲಯ,ಇತ್ತ ಅಲಮೇಲು ಮಂಗಮ್ಮ ಒಂದೇ ಎತ್ತರದಲ್ಲಿದ್ದರಂತೆ ! ಆದರೆ ಸ್ವಾಮಿಗಿಂತಲೂ ಅಮ್ಮನವರಿಗೆ ಸ್ವಲ್ಪ ಅಧಿಕವಾದ ದಯೆ, ಕರುಣೆ ಎಂಬ ಭಾರವಾದ ಗುಣವು ಇರುವುದರಿಂದ ಭೂಮಿಯು ಕೆಳಗೆ ಕುಸಿದು ಹೋಯಿತಂತೆ! ಆದ್ದರಿಂದಲೇ ಸ್ವಾಮಿಯು ಎತ್ತರದಲ್ಲೂ ಅಲಮೇಲುಮಂಗಮ್ಮ ತಗ್ಗಿನ ಪ್ರದೇಶದಲ್ಲೂ ಇದ್ದಾರೆಂದು ಹಿರಿಯರು ಹೇಳುತ್ತಾರೆ. ನಿಜವಾಗಿಯೂ ಅಲಮೇಲುಮಂಗಮ್ಮ ದಯಾನಿಧಿಯಲ್ಲವೇ !!

## ಹಲವಾರು ಉತ್ಸವಗಳು, ಸೇವೆಗಳನ್ನು ಸ್ವೀಕರಿಸುತ್ತಿರುವ ಅಲಮೇಲುಮಂಗಮ್ಮ

ಕರುಣಾಮಯಿಯಾದ ಪ್ರೇಮಮೂರ್ತಿಯಾದ ಶ್ರೀಮಹಾಲಕ್ಷ್ಮೀ, ಅಲಮೇಲುಮಂಗ ಅಥವಾ ಪದ್ಮಾವತಿ ಎಂಬ ಹೆಸರಿನಿಂದ ಪೂಜೆಗಳನ್ನು ಸ್ವೀಕರಿಸುತ್ತಾ ತಿರುಚಾನೂರಿನಲ್ಲಿ ನೆಲೆಸಿದಂದಿನಿಂದಲೂ ಪಾಂಚರಾತ್ರಾಗಮ ಶಾಸ್ತ್ರದ ಪ್ರಕಾರ ಸುಪ್ರಭಾತ,ಸಹಸ್ರನಾಮರ್ಚನೆ, ಪದ್ಮಾವತಿ ಪರಿಣಯ,ಡೋಲೋತ್ಸವ, ಏಕಾಂತಸೇವೆಯಂತಹಾ ನಿತ್ಯೋತ್ಸವಗಳು, ಸೋಮವಾರ ಅಷ್ಟದಳ ಪಾದಪದ್ಮಾರಾಧನೆ, ಗುರುವಾರಂದು,ತಿರುಪ್ಪಾವಡ ಸೇವೆ,ಶುಕ್ರವಾರಾಭಿಷೇಕ, ಶುಕ್ರವಾರದಂದು ಹೂ ದೋಟದ ಉತ್ಸವ, ಸಹಸ್ರದೀಪಾಲಂಕರಣ ಸೇವೆ, ಶನಿವಾರ ಪುಷ್ಪಾಂಜಲಿ ಸೇವೆಯಂತಹಾ ವಾರೋತ್ಸವಗಳು, ವೈಶಾಖಮಾಸದ ಹುಣ್ಣಿಮೆಯಂದು ವಸಂತೋತ್ಸವಗಳು,ಜ್ಯೇಷ್ಠಮಾಸದಲ್ಲಿ ತೆಪ್ಪೋತ್ಸವ,ಭಾದ್ರಪದ ಮಾಸದಲ್ಲಿ ಪವಿತ್ರೋತ್ಸವ, ಕಾರ್ತೀಕ





ಮಾಸದಲ್ಲಿ ಲಕ್ಷಕುಂಕುಮಾರ್ಚನೆ, ಬ್ರಹ್ಮೋತ್ಸವ, ಪುಷ್ಪಯಾಗದಂತಹಾ ವಾರ್ಷಿಕೋತ್ಸವಗಳು ಶ್ರೀಪದ್ಮಾವತಿ ಅಮ್ಮನವರಿಗೆ ವೈಭವದಿಂದ ಆಚರಿಸಲ್ಪಡುತ್ತವೆ.

## ಬ್ರಹ್ಮೋತ್ಸವದಲ್ಲಿ ವಾಹನಗಳ ವೈಭವ !

ಆದರೆ ಪ್ರತೀ ವರ್ಷವೂ ಕಾರ್ತೀಕಮಾಸದಲ್ಲಿ ಅಂದರೆ ಸೌರಮಾನದ ಪ್ರಕಾರ ವೃಶ್ಚಿಕ ಮಾಸದ ಶುದ್ಧಪಂಚಮಿಯಂದು ಶ್ರೀ ಪದ್ಮಾವತಿ ಅಮ್ಮನವರ ಅವತಾರದಿನೋತ್ಸವದ ಸಂದರ್ಭದಲ್ಲಿ ಹತ್ತು ದಿನಗಳ ಕಾಲ ಅಮ್ಮನವರ ಬ್ರಹ್ಮೋತ್ಸವಗಳು ಅಂಕುರಾರ್ಪಣೆಯೊಂದಿಗೆ ಪ್ರಾರಂಭವಾಗಿ, ಪಂಚಮೀತೀರ್ಥ ಎಂಬ ಚಕ್ರಸ್ನಾನದೊಂದಿಗೆ ಸಮಾಪ್ತಿಯಾಗುತ್ತದೆ. ಉತ್ಸವಗಳು ಪ್ರಾರಂಭವಾದದಂದಿನಿಂದಲೂ ಪ್ರತಿದಿನವೂ ಎರಡೂ ಹೊತ್ತು ವಿವಿಧ ವಾಹನಗಳಲ್ಲಿ ಶ್ರೀ ಅಲಮೇಲುಮಂಗಮ್ಮನಿಗೆ ಉತ್ಸವಗಳು ನಡೆಯುತ್ತದೆ. ನಾಗದೋಷ ನಿವಾರಿಣಿಯಾಗಿ ಸಂತಾನಪ್ರದೆಯಾಗಿ ದೊಡ್ಡ ಶೇಷವಾಹನ, ಚಿಕ್ಕ ಶೇಷವಾಹನಗಳಲ್ಲಿ ವಿದ್ಯಾಲಕ್ಷ್ಮಿಯ ರೂಪದಲ್ಲಿ, ಹಂಸವಾಹನದ ಮೇಲೆ ಸಂಪತ್ತನ್ನು ಮಳೆಯಂತೆ ಸುರಿಸುವ ಸಂಪತ್ ಲಕ್ಷ್ಮೀಯಾಗಿ , ಕಲ್ಪವೃಕ್ಷದಲ್ಲೂ ತ್ರೇತಾಯುಗದಲ್ಲೂ ವೇದವತಿಯಾದ ಇಂದಿನ ಪದ್ಮಾವತಿಯನ್ನು, ಹನುಮದ್ವಾಹನದಲ್ಲೂ ಧನಲಕ್ಷ್ಮಿಯಾಗಿ, ಪಲ್ಲಕಿಯಲ್ಲೂ ಗಜಲಕ್ಷ್ಮಿಯಾಗಿ, ಗಜ



ವಾಹನದಲ್ಲಿ ಅಖಿಲಾಂಡಕೋಟಿ ಬ್ರಹ್ಮಾಂಡ ನಾಯಕನ ನಾಯಕಿಯಾಗಿ, ಸರ್ವಭೂಪಾಲ ವಾಹನದಲ್ಲೂ ವಿಜಯಲಕ್ಷ್ಮಿಯಾಗಿ, ಗರುಡ ವಾಹನದಲ್ಲೂ ಆದಿಲಕ್ಷ್ಮಿಯಾಗಿ, ಸೂರ್ಯಪ್ರಭ ವಾಹನದಲ್ಲೂ ಸಾಮ್ರಾಜ್ಯಲಕ್ಷ್ಮಿಯಾಗಿ, ಚಂದ್ರಪ್ರಭವಾಹನದಲ್ಲಿ ರಥೋತ್ಸವದಲ್ಲಿ ಸರ್ವಲೋಕಗಳಿಗೆ ಮಹಾರಾಜ್ಞೆಯಾಗಿ ಅಲಮೇಲುಮಂಗಮ್ಮ ಭಕ್ತರಿಗೆ ದರ್ಶನವನ್ನು ನೀಡುತ್ತಿದ್ದಾಳೆ. ಕೊನೆಯದಾಗಿ ಅಶ್ವವಾಹನದಲ್ಲಿ ಭವಭಯ ಹಾರಿಣಿಯಾಗಿ ದರ್ಶನವನ್ನು ನೀಡುತ್ತಾಳೆ.

### ಪಂಚಮೀತೀರ್ಥದ ಉತ್ಸವ

ಬ್ರಹ್ಮೋತ್ಸವದ ಕೊನೆಯ ದಿನ ತಿರುಚಾನೂರು ಪಂಚಮೀ ದಿನದಂದು ಅಮ್ಮನವರು ಅವತರಿಸಿದ ದಿನ. ಆ ದಿನ ತಿರುಮಲೆಯ ಶ್ರೀನಿವಾಸನಿಂದ ಪದ್ಮಾವತಿ ಅಮ್ಮನವರಿಗೆ ಅರಿಶಿನ-ಕುಂಕುಮ,ಚಂದನ,ಸೀರೆಯ ಉಡುಗೊರೆ, ಪ್ರಸಾದಗಳನ್ನು ಕಾಲ್ನಡಿಗೆಯಲ್ಲಿ ಆನೆಯ ಮೇಲೆ ಸಂಪ್ರದಾಯದ ಪ್ರಕಾರ ತಿರುಚಾನೂರಿಗೆ ಮಂಗಳವಾದ್ಯಗಳೊಂದಿಗೆ ತರುತ್ತಾರೆ.

### ಪಂಚಮೀತೀರ್ಥದ ಉಡುಗೂರೆ

ಶ್ರೀನಿವಾಸನು ಬಳುವಳಿಯಾಗಿ ಕಳುಹಿಸಿದ ಅರಿಶಿನ, ಚಂದನ, ತುಳಸಿಯೊಂದಿಗೆ ಪದ್ಮಸರೋವರದ ತೀರದಲ್ಲಿ ಶ್ರೀಪದ್ಮಾವತಿ ಅಮ್ಮನವರಿಗೇ, ಸುದರ್ಶನ ಭಗವಾನನಿಗೆ ತಿರುಮಂಜನವನ್ನು ವೈಭವದಿಂದ ನಡೆಸುತ್ತಾರೆ. ನಂತರ ಶುಭಮುಹೂರ್ತದಲ್ಲಿ ಪದ್ಮಸರೋವರದಲ್ಲಿ ಸುದರ್ಶನ ಭಗವಾನನಿಗೆ ಚಕ್ರಸ್ನಾನವನ್ನು ವೈಭವದಿಂದ ನಿರ್ವಹಿಸುತ್ತಾರೆ. ಅದೇ ಸಮಯದಲ್ಲಿ ತಿರುಮಲೇಶನು ಅಲ್ಲಿಗೆ ಬರುತ್ತಾನೆಂದು ಪ್ರತೀತಿ! ಆ ಸಮಯದಲ್ಲಿ ಪದ್ಮಸರೋವರದಲ್ಲಿ ಸಾವಿರಾರು ಜನ ಭಕ್ತರು ಪವಿತ್ರಸ್ನಾನವನ್ನು ಮಾಡಿ ಪವಿತ್ರರಾಗುತ್ತಾರೆ. ಅನಂತ ದಯಾರೂಪಿಣಿಯಾದ ಪದ್ಮಾವತಿ ಅಮ್ಮನವರ ಪಂಚಮೀತೀರ್ಥ ಮಹೋತ್ಸವದಂದು ಅಲ್ಲಿ ನೆಲೆಗೊಳ್ಳುವ ವೈಭವವನ್ನು ವರ್ಣಿಸುವುದಕ್ಕೆ ಮಾತುಗಳೇ ಸಾಲುವುದಿಲ್ಲ.

ಹಿಂದೆ ವೇದಾಂತದೇಶಿಕರೆಂಬ ಮಹಾನುಭಾವರು ಇದ್ದರು. ಅವರು ಸಾಕ್ಷಾತ್ತು ಶ್ರೀನಿವಾಸನ ಅನಂತ ದಯಾಗುಣವೇ ಅಲಮೇಲುಮಂಗಮ್ಮಳಾಗಿ ಅವತರಿಸಿದ್ದಾಳೆ ಎಂದು ವರ್ಣಿಸಿದ್ದಾರೆ. ಆದ್ದರಿಂದ ಅತ್ತ ತಿರುಮಲೇಶನನ್ನು ಇತ್ತ ತಿರುಚಾನೂರು ಪದ್ಮಾವತಿಯನ್ನು ಎಷ್ಟು ಹೊಗಳಿದರೂ ಅವರಿಬ್ಬರೂ ಅಭಿನ್ನರು ಎಂದು ತಿಳಿಯಬೇಕು. ಇಬ್ಬರೂ ಒಂದೇ ಎನ್ನುವುದನ್ನು ಮರೆಯಬಾರದು ಇಬ್ಬರಲ್ಲಿ ಯಾರೊಬ್ಬರನ್ನು ಹೊಗಳಿದರೂ ಕೀರ್ತಿಸಿದರೂ,ಇಬ್ಬರನ್ನೂ ಕೀರ್ತಿಸಿದಂತೆಯೇ ಸರಿ! ಅವರಿಬ್ಬರ ಅವಿನಾಭವ ಸಂಬಂಧ ಎಂದೆಂದರೆ ಸೂರ್ಯನಿಗೂ ಸೂರ್ಯ ಕಿರಣಗಳಿಗೆ, ಅಗ್ನಿಗೂ ತಾಪಕ್ಕೂ, ಸಮುದ್ರಕ್ಕೂ ಅಲೆ ಗಳಿಗೂ ಇರುವ ಸಂಬಂಧದಂತದ್ದು. ಅದಕ್ಕೇ ಅನ್ನಮಾಚಾರ್ಯರು, ಆತನೇ ನೀನು, ನೀನೆಂದರೆ ಆತ ನಿನ್ನ ಹೆಸರನ್ನು ನೆನೆಪಿಸಿಕೊಂಡರೆ ನೀನೇ ಆತನ ಮಾತು. ನಿನ್ನ ಹೃದಯವೇ ಆತನಾಗಿ, ಅಲಮೇಲು ಮಂಗ ನಿನ್ನ ಮೂಲಕ ಎಲ್ಲಾ ಜೀವರ ಜೀವನವೆಲ್ಲವೂ ಆಕೆಯೇ ನಿರ್ವಹಿಸುತ್ತಾಳೆ ನಿನ್ನ ಸತಿ ವೇಂಕಟೇಶ್ವರ'' ಎನ್ನುತ್ತಾ ಇಬ್ಬರಿಗೂ ಅಭಿನ್ನತೆಯನ್ನು ಆಪಾದಿಸಿದ್ದಾರೆ.

ಅಭಿನ್ನರೂ ಆದ ಅಲಮೇಲುಮಂಗ ಸಮೇತ ಆನಂದನಿಲಯನನ್ನು ನಾವು ಹೀಗೆ ಪ್ರಾರ್ಥಿಸೋಣ!

“ನಾರಾಯಣಸ್ಯ ಹೃದಯೇ ಭವತೀ ಯಥಾಸ್ತೇ
ನಾರಾಯಣೋಪಿ ತವ ಹೃತ್ಕಮಲೇ ಯಥಾಸ್ತೇ
ನಾರಾಯಣಸ್ತ್ವಮಪಿ ನಿತ್ಯಮುಖೌ ತಥೈವ
ತೌ ತಿಷ್ಟತಾಂತ ಹೃದಿ ಮಮಾಪಿ ದಯಾವತಿ ಶ್ರೀಃ''

ಅಮ್ಮಾ ಅಲಮೇಲುಮಂಗಮ್ಮಾ! ಆನಂದನಿಲಯನಾದ ನಾರಾಯಣನ ಹೃದಯದಲ್ಲಿ ನೀನು ನೆಲೆಯಾಗಿ ನಿಂತಿರುವೆ! ನಿನ್ನ ಹೃದಯದಲ್ಲಿ ಸ್ವಾಮಿಯು ಇರುತ್ತಾನೆ! ನೀವಿಬ್ಬರೂ ದಯೆತೋರಿ ನನ್ನ ಹೃದಯದಲ್ಲಿ ನೆಲೆಸಿ!

ಅಮ್ಮನ ದಯೆ ಕರುಣೆ ಇದ್ದರೆ ಸಾಕು ! ಸಕಲವೂ ಇದ್ದಂತೆ!!

### ಅಲಮೇಲು ಮಂಗಮ್ಮನಿಗೆ ಆನಂದನಿಲಯನ ಉಡುಗೂರೆ

ಅಲಮೇಲುಮಂಗಮ್ಮ ಅವತರಿಸಿದ ಪಂಚಮೀತೀರ್ಥದಂದು ಆನಂದನಿಲಯನು ತಿರುಮಲೆಯಿಂದ ತಿರುಚಾನೂರಿಗೆ ಹಲವಾರು ಉಡುಗೊರೆಗಳನ್ನು ಕಳುಹಿಸುತ್ತಾನೆ.

ಎರಡು ರೇಷ್ಮೆಸೀರೆಗಳು, ಎರಡು ರೇಷ್ಮೆಯ ರವಿಕೆಯ ವಸ್ತ್ರಗಳು, ಶ್ರೀನಿವಾಸನಿಗೆ ಅಲಂಕರಿಸಿದ ಎರಡು ಹಸಿ ಅರಿಶಿನದ ಮುದ್ದೆ, ಎರಡು ಶ್ರೀಗಂಧದ ಮುದ್ದೆಗಳು, ಹಸಿ ಅರಿಶಿನದ ಗಿಡಗಳು, ಹೂವಿನ ಮಾಲೆಗಳು,ತುಳಸೀಮಾಲೆಗಳೊಂದಿಗೆ ಎರಡು ಬಂಗಾರದ ಆಭರಣಗಳು ಇವುಗಳೊಂದಿಗೆ ಭಕ್ಷ್ಯಗಳಾದ ದೊಡ್ಡ ಲಾಡು 51, ವಡೆಗಳು 51, 51 ಅತಿರಸಗಳು, 51 ದೋಸೆಗಳು (51 ಅಂದರೆ ಒಂದು ಪಡಿ ಎಂದರ್ಥ)ಮೊದಲಾದವುಗಳನ್ನು ಆನೆಯ ಮೇಲೆ ಅಂಬಾರಿಯೊಂದಿಗೆ ತಿರುಮಲೆಯ ಶ್ರೀಹರಿಯ ಆಲಯದ ಅರ್ಚಕ ಪರಿಚಾರಕವರೇಣ್ಯರು, ಜಿಯ್ಯಂಗಾರರು ಸಂಪ್ರದಾಯ ಪೂರ್ವಕವಾಗಿ ತೆಗೆದುಕೊಂಡು ಬಂದು ಶ್ರೀಅಲಮೇಲು ಮಂಗಮ್ಮನಿಗೆ ಅರ್ಪಿಸುತ್ತಾರೆ. ಅದಕ್ಕೆ “ಅಲಮೇಲುಮಂಗ ಹರಿ ಅಂತರಂಗ'' ಎಂಬ ಅನ್ನಮಾಚಾರ್ಯರ ಕೀರ್ತನೆಯನ್ನು ನೆನೆಪಿಸಿಕೊಳ್ಳೋಣ.

ಇಂತಹಾ ಮಹಿಮಾನ್ವಿತಳಾದ ಶ್ರೀನಿವಾಸನ ಹೃದಯ ಸಾಮ್ರಾಜ್ಞೆಯಾದ ಅಲಮೇಲುಮಂಗಮ್ಮಳನ್ನು ಶ್ರದ್ಧಾಭಕ್ತಿಗಳಿಂದ ಧ್ಯಾನಿಸಿ, ದರ್ಶಿಸಿ ಧನ್ಯರಾಗೋಣ.

ಗೋವಿಂದಾ !ಗೋವಿಂದಾ!! ಗೋವಿಂದಾ!!

# ಧ್ವಜಪುರದ ಶ್ರೀ ಕೋಟೇಶ್ವರ ಕ್ಷೇತ್ರ



– ಮನೋಹರ ಜೋಶಿ
98869 19689

ಭಾರತ ಖಂಡವು ಅನೇಕ ಪುಣ್ಯ ಕ್ಷೇತ್ರಗಳ ಸಂಗಮ. ಪ್ರಾಚೀನ ಪುರಾಣ ಪ್ರಸಿದ್ಧ ಕ್ಷೇತ್ರಗಳು ಹೊಂದಿರುವ ಪವಿತ್ರ ಪ್ರದೇಶ. ದೇವತೆಗಳು, ಗಂಧರ್ವರು, ಋಷಿಮುನಿಗಳು, ಪುಣ್ಯ ಪುರುಷರು ಅವತಾರ ಮಾಡಿದ ಸಾಧನ ಭೂಮಿ. ಭಾರತದ ದಕ್ಷಿಣಭಾಗದ ಪರಶುರಾಮ ದೇವರಿಂದ ಸೃಷ್ಟಿಯಾದ ಪ್ರದೇಶದಲ್ಲಿ ಅನೇಕ ಪ್ರಾಚೀನ ದೇವಾಲಯಗಳು ಕಾಣಬಹುದು. ಅವುಗಳಲ್ಲಿ ದಕ್ಷಿಣ ಕನ್ನಡದ ಕರಾವಳಿ ತೀರದ ಕೋಟೇಶ್ವರ ಕ್ಷೇತ್ರ ಪುರಾಣ ಪ್ರಸಿದ್ಧ ತೀರ್ಥಕ್ಷೇತ್ರವಾಗಿದೆ. ಪರಶುರಾಮ ಸೃಷ್ಟಿಯ ಸಪ್ತಮೋಕ್ಷ ಕ್ಷೇತ್ರಗಳಲ್ಲಿ ಒಂದಾದ ದಕ್ಷಿಣ ಕಾಶಿ ಧ್ವಜಪುರ ಎಂದು ಪುರಾಣದಲ್ಲಿ ಉಲ್ಲೇಖವಾದ ಶ್ರೀ ಕೋಟಿ ಲಿಂಗೇಶ್ವರ ದೇವಾಲಯವು ಪವಿತ್ರ ಶಿವನ ಸನ್ನಿಧಾನದ ಕ್ಷೇತ್ರ, ಸಕಲ ಪಾಪಗಳು ಕಳೆಯುವ ಮಹಾರುದ್ರ ದೇವರು ನೆಲೆಸಿರುವ ಸ್ಥಳ ಅನೇಕ ಶಾಸನಗಳು ದೊರೆತಿರುವ ಕೋಟೇಶ್ವರ ದೇವಾಲಯವನ್ನು ಶಾಸನಗಳ ಭಂಡಾರ ಎಂದೇ ಹೇಳಬಹುದು. ಇಲ್ಲಿನ ಆರಾಧ್ಯದೈವ ಕೋಟಿ ಲಿಂಗಗಳಿಂದ ಪ್ರಾದುರ್ಭವಿಸಿದ ರುದ್ರದೇವರ ಮಹಾಸನ್ನಿಧಾನ. ಈ ಕ್ಷೇತ್ರದ ಸಂಪ್ರದಾಯ ಅತೀ ಪ್ರಾಚೀನಕಾಲದಿಂದ ನಡೆದುಕೊಂಡು ಬಂದಿವೆ. ದೇವಾಲಯದ ಸಂಪ್ರದಾಯಗಳು ಇಲ್ಲಿಯವರೆಗೂ ಅವಿಚ್ಛಿನ್ನವಾಗಿ ನಡೆದುಕೊಂಡು ಬರಲು ಅನೇಕ ಆಳರಸರು ದತ್ತಿ ನೀಡಿರುವ ವಿವರಗಳು ಇಲ್ಲಿ ದೊರೆತಿರುವ ಶಾಸನಗಳು ಹೇಳುತ್ತಿವೆ. ಸಾಂಸ್ಕೃತಿಕ ಧಾರ್ಮಿಕ ಐತಿಹಾಸಿಕವಾಗಿ ವಿವಿಧ ವಿಶೇಷತೆಗಳ ಸಂಗಮ ಕ್ಷೇತ್ರ ಕೋಟೇಶ್ವರದ "ಶ್ರೀಕೋಟಿ ಲಿಂಗೇಶ್ವರ" ದೇವಾಲಯ.

**ಕ್ಷೇತ್ರ ವಿಶೇಷತೆ :**

ಪ್ರಕೃತಿ ಸಂಪತ್ತಿಗೆ ಮುಕುಟ ಪ್ರಾಯವಾಗಿರುವ ಪಶ್ಚಿಮ ಕರಾವಳಿ ತೀರ ನಮ್ಮ ನಾಡಿನ ಹೆಮ್ಮೆಯ ತಾಣ. ಅನೇಕ ದೇವತೆಗಳು ನೆಲೆಸಿರುವ ಪುಣ್ಯ ನಾಡು. ಪ್ರಾಚೀನ ದೇವಾಲಯಗಳ ಬೀಡು ದಕ್ಷಿಣ ಕನ್ನಡದ ಕರಾವಳಿಯ ತುಳು ನಾಡು ಪುಣ್ಯಭೂಮಿ, ಸಾಕ್ಷಾತ್ ಪರಶುರಾಮನು ಸಮುದ್ರದಲ್ಲಿನ ಸ್ವಲ್ಪ ಭೂಭಾಗ ಹೊರ ತೆಗೆದು ಸೃಷ್ಟಿಸಿ ದೇವತೆಗಳಿಗೆ ಧರ್ಮರಕ್ಷಣೆಗಾಗಿ ಕಾಲ ಕಾಲಕ್ಕೆ ಅವತಾರ ಮಾಡಲು ಅನುವು ಮಾಡಿಕೊಟ್ಟ ಭೂಮಿ. ಸಾವಿರಾರು ಸಂವತ್ಸರಗಳ ಹಿಂದೆ ಅತ್ಯಂತ ಪುಣ್ಯವಂತರು ಸಾಧಕರು, ಧರ್ಮದ ಮೂರ್ತಿಗಳಂತೆ ಇದ್ದ ತೇಜ ಪುಂಜರಾದ ಋಷಿ,ಮುನಿಗಳು ರುದ್ರದೇವರನ್ನು ಪ್ರತ್ಯಕ್ಷವಾಗಿ ಕಾಣಬೇಕೆಂಬ ಹಂಬಲದಿಂದ ಏಕಕಾಲಕ್ಕೆ ಕೋಟಿ ಋಷಿಗಳು ಭಕ್ತಿಯಿಂದ ಅನೇಕ ದಿನಗಳವರೆಗೆ ಈ ಸ್ಥಳದಲ್ಲಿ ಅಖಂಡ ತಪಸ್ಸು ಆಚರಿಸಿದರು. ಇವರೆಲ್ಲರ ಭಕುತಿಗೆ ಪ್ರಸನ್ನನಾಗಿ ಮಹಾರುದ್ರರು ಕೋಟಿ ಲಿಂಗಗಳ ಮೂಲಕ ಪ್ರಕಟವಾಗಿ ಪ್ರತಿಯೊಬ್ಬ ಋಷಿಗಳಿಗೂ ದರ್ಶನ ಕೊಟ್ಟು ಆನಂದ ಪಡಿಸಿದರು. ಮುಂದೆ ಈ ಕ್ಷೇತ್ರವು ಕೋಟೇಶ್ವರ ಎಂದು ಹಾಗೂ ಶಿವನು ಕೋಟಿ ಲಿಂಗಗಳಲ್ಲಿ ಸನ್ನಿಧಾನವಾಗಿರುವುದರಿಂದ ಕೋಟಿಲಿಂಗೇಶ್ವರನೆಂದು ಪ್ರಸಿದ್ಧಿಪಡೆಯಿತು. ಈಗಿನ ಗರ್ಭಗೃಹದಲ್ಲಿ ಸ್ವಯಂ ಉದ್ಭವ ಲಿಂಗದ ಕೆಳಗೆ ಪವಿತ್ರ ತೀರ್ಥದ ಬಾವಿ ಇದ್ದು ಕೋಟಿ ಲಿಂಗಗಳು ಈ ಬಾವಿಯಲ್ಲಿ ಇಂದಿಗೂ ಸನ್ನಿತವಾಗಿವೆ ಎಂದು ಇತಿಹಾಸವಿದೆ. ಕಾರ್ತಿಕ ಮಾಸದ ಹುಣ್ಣಿಮೆಯ ದಿನ ಕೃತಿಕಾ ನಕ್ಷತ್ರದ ಸೋಮವಾರ ಕೋಟಿ ಲಿಂಗ ಉದ್ಭವವಾದುದೆಂದು ಪ್ರತೀತ. ಕೋಟೇಶ್ವರದ ಕ್ಷೇತ್ರ ಮಹಿಮೆಯು ಪದ್ಮ, ಬ್ರಹ್ಮ, ಸ್ಕಂದ ಪುರಾಣಗಳಲ್ಲಿ ವಿಶದವಾಗಿ ತಿಳಿಸಲ್ಪಟ್ಟಿದೆ. ಸಪ್ತ ಮೋಕ್ಷ ಕ್ಷೇತ್ರಗಳಲ್ಲಿ ಪುರಾಣ ಪ್ರಸಿದ್ಧವಾದ ಕೋಟೇಶ್ವರ ಕ್ಷೇತ್ರವು ಒಂದು. ಕೋಟೇಶ್ವರದ ಕ್ಷೇತ್ರ ಸನ್ನಿಧಾನ ಹಾಗೂ ಕ್ಷೇತ್ರ ದೇವತೆಯ ಮಹಿಮೆಯನ್ನು ಕುರಿತು ಸೋದೆಯ ಶ್ರೀವಾದಿರಾಜ ತೀರ್ಥ ಪೂಜ್ಯಚರಣರು ತೀರ್ಥ ಕ್ಷೇತ್ರಗಳ ಮಹತ್ವ ತಿಳಿಸಿ ಕೊಡುವ ತಮ್ಮ ತೀರ್ಥಪ್ರಬಂಧ" ಎಂಬ ಮಹಾಕಾವ್ಯಗ್ರಂಥದ ಪಶ್ಚಿಮ ಪ್ರಬಂಧ ಭಾಗದಲ್ಲಿ "ಚಾರು ಕೋಟೀಶ್ವರಸ್ಥಾನಂ ನಮಸ್ತೇ ಶಿತಿಕಂಠಾಯ"ಎಂದು ಮುಂತಾದ ಸ್ತೋತ್ರಗಳಿಂದ ಸ್ತುತಿಸಿದ್ದಾರೆ.



## ಕೋಟಿ ತೀರ್ಥ :

ದೇವಳದ ಉತ್ತರ ಭಾಗದಲ್ಲಿ ವಿಶಾಲವಾದ ಪುರಾತನ ಪವಿತ್ರ ಪುಷ್ಕರಣಿ ಇದೆ. ಇದಕ್ಕೆ "ಕೋಟಿತೀರ್ಥ" ಎಂದು ಕರೆಯಲಾಗುತ್ತದೆ. ಸುಮಾರು 4.5 ಎಕರೆ ವಿಸ್ತೀರ್ಣ ಹೊಂದಿದ್ದು ಸಂಧ್ಯಾ ಅಗ್ನಿಕಗಳಿಗೆ, ಜಪ-ತಪಗಳಿಗೆ ಅನುಕೂಲವಾಗುವಂತೆ ಕುಳಿತುಕೊಳ್ಳಲು ಕಟ್ಟೆ ಮೆಟ್ಟಲಗಳ ಕಲಾತ್ಮಕವಾಗಿ ಕಟ್ಟಲ್ಪಟ್ಟಿವೆ. ಪುಷ್ಕರಿಣಿಗೆ ಪ್ರವೇಶಿಸಲು ನಾಲ್ಕು ದಿಕ್ಕುಗಳಿಂದ ಪ್ರವೇಶ ದ್ವಾರಗಳಿವೆ ಮಧ್ಯದಲ್ಲಿ ಸುಂದರವಾದ ಕಲ್ಲಿನ ಮಂಟಪ ಕಾಣಬಹುದು.ಕೋಟಿತೀರ್ಥವು ಪೂರ್ವದಲ್ಲಿ ಚತುರ್ಮುಖ ಬ್ರಹ್ಮನ ಕಮಂಡಲುನಿಂದ ಪ್ರವಹಿಸಿದ ಪವಿತ್ರ ಜಲದಿಂದ ನಿರ್ಮಿತವಾದ ತೀರ್ಥ. ಇದಕ್ಕೆ ಬ್ರಹ್ಮ ಸರೋವರವೆಂದು ಹೇಳಲಾಗುತ್ತಿತ್ತು. ಪ್ರತಿ ವರುಷ ಸಿಂಹಮಾಸದಲ್ಲಿ ಗಂಗೆ ಹರಿದು ಬಂದು ಈ ತೀರ್ಥದಲ್ಲಿ ಸೇರುವುದರಿಂದ ಗಂಗಾ ಸನ್ನಿಧಾನವಿದೆ. ಈ ತೀರ್ಥದಲ್ಲಿ ಅನುಸಂಧಾನ ಪೂರ್ವಕವಾಗಿ ಭಕ್ತಿಯಿಂದ ಮಿಂದರೆ ಸಕಲ ಪಾಪಗಳು ಕಳೆಯುತ್ತವೆ ಎಂದು ಪುರಾಣಗಳು ಹೇಳುತ್ತಿವೆ. ಕಾರ್ತಿಕ ಮಾಸದ ಬಹುಳ ತ್ರಯೋದಶೀ ದಿನದಂದು ರಾತ್ರಿ ಕೋಟಿ ತೀರ್ಥದಲ್ಲಿ ತೆಪ್ಪೋತ್ಸವದಲ್ಲಿ ಜರುಗುವುದು. ಇದನ್ನು ನೋಡಿದವರೇ ಭಾಗ್ಯವಂತರು. ಪುಷ್ಕರಣಿ ಸುತ್ತಲು ಸಹಸ್ರ ಸಹಸ್ರ ದೀಪಗಳ ಹಣತೆ ಬೆಳಗುವುದರಿಂದ ದೀಪಗಳಿಂದ ಹೊರ ಹೊಮ್ಮುವ ಶುಭ್ರ ಬೆಳಕಿನಲ್ಲಿ ತೆಪ್ಪೋತ್ಸವದ ವೈಭವ ಕಣ್ತುಂಬಿಸಿಕೊಳ್ಳುವುದೇ ಅದ್ಭುತವಾದ ದೃಶ್ಯವಾಗಿರುತ್ತದೆ.

## ದೇವಾಲಯದ ಭವ್ಯತೆ:

ಪ್ರಕೃತಿಯ ರಮಣೀಯವಾದ ಪರಿಸರದಲ್ಲಿರುವ ಶ್ರೀಕೋಟೇಶ್ವರದ ದೇವಾಲಯದ ಪೂರ್ವಾಭಿಮುಖವಾಗಿದ್ದು ಇದರ ವಾಸ್ತು ಶೈಲಿ ಆಕರ್ಷಕವೂ ಅಪರೂಪವೂ ಹೌದು,ದೇವಾಲಯದ ನಿರ್ಮಾಣ ಸುಮಾರು 8-9 ನೇ ಶತಮಾನದಲ್ಲಿ ಆಗಿದ್ದು ಕಾಲ ಕಾಲಕ್ಕೆ ಜೀರ್ಣೋದ್ಧಾರಗೊಳ್ಳುತ್ತ ಬಂದಿತೆಂದು ಹೇಳಲಾಗುತ್ತದೆ. ವಿಶಾಲವಾದ ಪ್ರಾಂಗಣ ಹೊಂದಿರುವ ಈ ದೇವಾಲಯ ಸಪ್ತ ಪ್ರಾಕಾರಗಳ ಪಥ ಹೊಂದಿರುವುದು ದೇವಸ್ಥಾನದ ವಿಶೇಷಗಳಲ್ಲಿ ಇದು ಒಂದು. ವಿಶಾಲವಾದ ರಥ ಬೀದಿ ಹೊಂದಿದೆ. ಮುಖ್ಯದ್ವಾರದ ಎರಡು ಬದಿಯಲ್ಲಿ ಪರಶುಪಾಣಿ ಹಾಗೂ ಶೂಲಪಾಣಿಗಳೆಂದು ಕರೆಯಲ್ಪಡುವ ಸುಂದರ ದ್ವಾರಪಾಲಕರ ಮೂರ್ತಿಗಳಿವೆ. ಇವುಗಳು ಕಂಚಿನ ಪ್ರತಿಮೆಗಳಾಗಿದ್ದು ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ನಿರ್ಮಿತವಾಗಿರಬಹುದೆಂದು ಅಂದಾಜಿಸಲಾಗುತ್ತದೆ. ಗುಡಿಯ ಗೋಡೆಗಳ ಮೇಲೆ ಅಪೂರ್ವವಾದ ಉಬ್ಬು ಶಿಲ್ಪಗಳು ಕೆತ್ತಲಾಗಿದ್ದು ಎಲ್ಲವೂ ಆಕರ್ಷಕವಾಗಿವೆ. 60 ಅಡಿ ಎತ್ತರಕ್ಕೆ ಒಂದೇ ಮರದ ಧ್ವಜಸ್ತಂಭವಿದ್ದು, ಇದು ಮೂರು ಯೋಜನೆಗಳ ದೂರದಿಂದಲೇ ಗೋಚರವಾಗುತ್ತದೆ. ಶಿವ ಪಾರ್ವತೀ ದೇವಿಯರ ನಂದಿ ಹಾಗೂ ಮೂಲೆ ಗಣಪತಿ ವಿಗ್ರಹಗಳು ಆಲಯದಲ್ಲಿ ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಒಳಪ್ರಕಾರದಲ್ಲಿ ಸಪ್ತ ಮಾತ್ರಿಕೆಯರು, ಸುಬ್ರಮಣ್ಯ, ವೀರಭದ್ರಸ್ವಾಮಿ,ಶ್ರೀವಿಷ್ಣು,ಜೇಷ್ಟಲಕ್ಷ್ಮೀ ವೆಂಕಟರಮಣ ಸ್ವಾಮಿ, ಮುಖ್ಯ ಪ್ರಾಣದೇವರ, ಆದಿ ಗಣಪತಿ ದೇವರುಗಳ ಸನ್ನಿಧಾನವು ಒಳಗೊಂಡಿದೆ.


## ಬ್ರಹ್ಮರಥೋತ್ಸವ

ನಮ್ಮ ರಾಜ್ಯದಲ್ಲಿರುವ ಅತ್ಯಂತ ದೊಡ್ಡ ರಥಗಳಲ್ಲಿ ಕೋಟೇಶ್ವರದ ಬ್ರಹ್ಮರಥದ ಸ್ಥಾನ ಮೊದಲ ಪಂಕ್ತಿಯಲ್ಲಿ ಸೇರಿದೆ. ಉತ್ಸವ ಮೂರುತಿ ಕೋಟೇಶ್ವರನನ್ನು ಕುಳ್ಳಿರಿಸುವ ಬ್ರಹ್ಮರಥೋತ್ಸವಕ್ಕೆ ಶತಮಾನಗಳ ಇತಿಹಾಸವಿದೆ. 7 ದಿನಗಳ ಕಾಲ ಜಾತ್ರಾ ಉತ್ಸವವು ವೈಭವದಿಂದ ಆಚರಿಸಲಾಗುತ್ತದೆ. ಸೌರಮಾನದ ವೃಶ್ಚಿಕ ಮಾಸದಲ್ಲಿ ಬರುವ ಚಂದ್ರಮಾನದ ಕಾರ್ತೀಕ ಅಥವಾ ಮಾರ್ಗಶಿರ ಹುಣ್ಣಿಮೆಯಂದು ನಡೆಯುವ ಬ್ರಹ್ಮ ರಥೋತ್ಸವವು ಕರಾವಳಿ ಪ್ರಾಂತ್ಯದಲ್ಲಿ "ಕೊಡಿ ಹಬ್ಬ" ಎಂತಲೇ ಪ್ರಸಿದ್ಧಿ. ಜಾತ್ರಾ ದಿನಗಳಂದು ಜರಗುವ ಧಾರ್ಮಿಕ ವಿಧಾನಗಳು, ರಥೋತ್ಸವ ಕಟ್ಟೆ ಪೂಜೆ ಓಕಳಿ ಮುಂತಾದ ಸಂಪ್ರದಾಯಗಳು ವಿಶೇಷತೆಗಳಿಂದ ಕೂಡಿದ್ದು ಇದು ಅತ್ಯಂತ ದೊಡ್ಡದಾದ ಜಾತ್ರಾ ಮಹೋತ್ಸವಕ್ಕೆ ಮಹಾಶಿವರಾತ್ರಿ ದಿನ ಅಪಾರ ಭಕ್ತರು ಸೇರುವರು. ದೀಪೋತ್ಸವ,ತೆಪ್ಪೋತ್ಸವ, ರಥೋತ್ಸವ ವಿಜೃಂಭಣೆಯಿಂದ ನೆರವೇರುತ್ತವೆ.

## ತಲಪುವ ಮಾರ್ಗ:

ಕರ್ನಾಟಕದ ಉಡುಪಿ ಜಿಲ್ಲೆಯ ಉತ್ತರ ತುದಿಯ ತಾಲ್ಲೂಕು ಕೇಂದ್ರವಾದ ಕುಂದಾಪುರದಿಂದ 4 ಕಿ.ಮೀ ಅಂತರದಲ್ಲಿದೆ. ಉತ್ತಮ ಸಾರಿಗೆ ಸೌಲಭ್ಯವಿದ್ದು ಉಡುಪಿಯಿಂದ ಕುಂದಾಪುರಕ್ಕೆ ಹೋಗುವ ರಸ್ತೆ ಮಾರ್ಗದಲ್ಲಿ ಕೋಟೇಶ್ವರ ಕ್ಷೇತ್ರವಿದೆ.

## ಪುಸ್ತಕ ಪರಿಚಯ




# ಸಾಧಕರಿಗೊಂದು ಸಂಗ್ರಹಯೋಗ್ಯ ಕೈಪಿಡಿ

**ಕೃತಿಯ ಹೆಸರು :** ಸಂಪೂರ್ಣ ಚಾತುರ್ಮಾಸ್ಯ ವ್ರತ ವಿಧಿ ವಿಧಾನ

**ಲೇಖಕರು :** ವೇದವಿದ್ವಾನ್ ಶಿವರಾಮ ಕೇಶವ ಜೋಗಳೇಕರ

**ಪ್ರಕಾಶಕರು :** ಕುಂದ ಅಧ್ಯಯನ ಕೇಂದ್ರ ಉಪ್ಪುಂದ ಬೈಂದೂರು ತಾಲೂಕು, ಉಡುಪಿ ಜಿಲ್ಲೆ

**ಪುಟಗಳು :** 168 ಬೆಲೆ ರೂ. 200

**ಪ್ರತಿಗಳಿಗೆ ಸಂಪರ್ಕಿಸಿ :** 82751 80641

ಚಾತುರ್ಮಾಸ್ಯಕಾಲ ಸಾಧಕರಿಗೆ ಹೆಚ್ಚು ಪುಣ್ಯ ಸಂಪಾದನೆ ಮಾಡಬಹುದಾದ ಪರ್ವಕಾಲ. ಏಕಾದಶಿ ಕೃಷ್ಣಾ ಜನ್ಮಾಷ್ಟಮಿಗಳಂತೆ ಕಡ್ಡಾಯವಾಗಿ ಮಾಡಬೇಕಾದ ಪುಣ್ಯವ್ರತ. ಆಹಾರ ನಿಯಮ ಮಾತ್ರವಲ್ಲದೆ ನಮಸ್ಕಾರ-ಪ್ರದಕ್ಷಿಣೆ ಇಷ್ಟ ಭೋಗ ವಸ್ತು ತ್ಯಾಗ, ಶಾಸ್ತ್ರ ಪಾಠ, ಪುರಾಣ ಶ್ರವಣ,ಸತ್ಸಂಗ ಹೀಗೆ ಹತ್ತು ಹಲವು ಸಾಧನ ಮಾರ್ಗಗಳಿವೆ.

ಧರ್ಮದ ಅನುಸಂಧಾನದ ಮತ್ತು ಅನುಷ್ಠಾನದ ಮೂಲಕ ಬದುಕಿನ ಸರ್ವೋಚ್ಛಧ್ಯೇಯವಾದ ದೈವಿಕಾರುಣ್ಯದ ಪ್ರಾಪ್ತಿಯಾಗುತ್ತದೆ. ಇದಕ್ಕಾಗಿ ವ್ಯಕ್ತಿಯಲ್ಲಿ ಸುಪ್ತವಾಗಿ ಒದಗಿರುವ ಧಾರ್ಮಿಕ ಪ್ರಜ್ಞೆಯನ್ನು ಮತ್ತು ಅಂತಸ್ತವಾದ ದೈವಿಕತೆಯನ್ನು ಜಾಗೃತಿಗೊಳಿಸಬೇಕು. ಇದಕ್ಕೆ ಧಾರ್ಮಿಕ ಗ್ರಂಥಗಳ ಅವಲಂಬನೆ ಅವಶ್ಯ. ಆಚಾರ ಮತ್ತು ವಿಚಾರಗಳ ಪರಸ್ಪರ ಸಂಬಂಧ ದಿಂದಲೇ ಶಾಸ್ತ್ರಗಳು ಆವಿರ್ಭವಿಸಿವೆ. ಇದು ಸಮಾಜದ ಶಾಸನ ಅನುಶಾಸನಗಳಾಗಿದ್ದು, ಅನುಲ್ಲಂಘನೀಯವಾಗಿದೆ.

ಕರ್ಕಾಟಕ ಸಂಕ್ರಾಂತಿಯಿಂದ ಮಕರ ಸಂಕ್ರಾಂತಿಯವರೆಗೆ ಅದರಲ್ಲಿ ಬರುವ ಪ್ರಮುಖ ವ್ರತಾಚರಣೆ, ಚಾತುರ್ಮಾಸ್ಯ, ಆಷಾಢ ಶುದ್ಧ ಏಕಾದಶಿಯಿಂದ ಕಾರ್ತಿಕ ಶುದ್ಧ ದ್ವಾದಶಿ ತನಕ ಆಚರಿಸುವ ರಿವಾಜು ಇದೆ. ಈ ಅವಧಿಯಲ್ಲಿ ಆಚರಿಸುವ ವ್ರತಾಚರಣೆಗಳ ಬಗ್ಗೆ, ಅವುಗಳ ಆಚರಣೆಯ ಉದ್ದೇಶ.ವಿಧಾನ, ಫಲಪ್ರಾಪ್ತಿಯ ಜೊತೆಗೆ ಚಾರಿತ್ರಿಕ, ಪೌರಾಣಿಕ ಹಿನ್ನೆಲೆಯನ್ನು ಸಂಕ್ಷಿಪ್ತವಾಗಿ ಸಂಗ್ರಹಿಸಿ ಈ ಪುಸ್ತಕವನ್ನು ಶ್ರದ್ಧಾವಂತ ಜಿಜ್ಞಾಸುಗಳಿಗೆ ನೀಡಿ ಉಪಕರಿಸಿದ್ದಾರೆ.

ಇದು ಸನ್ಯಾಸಿಗಳಿಗೆ ಮತ್ತು ಕೆಲವು ಮಡಿ ಹೆಂಗಸರಿಗೆ ಸಂಬಂಧಪಟ್ಟದ್ದು ಎಂದು ಕೆಲವರು ಭಾವಿಸುತ್ತಾರೆ. ಇದು ತಪ್ಪು ತಿಳುವಳಿಕೆ. ಎಲ್ಲ ಆಶ್ರಮದವರು ಸರ್ವವರ್ಣದವರು ಆಚರಿಸಬೇಕಾದ ನಿತ್ಯವ್ರತ ಕರ್ಮವೇ ಆಗಿರುತ್ತದೆ. ಮೂಲತಃ ಗೋಕರ್ಣದವರಾದ ವೇದರತ್ನ ಕೇಶವ ಶಾಸ್ತ್ರಿ ಸೀತಾರಾಮ ಜೋಗಳೇಕರ್‌ರವರ ಸುಪುತ್ರ ಸದ್ಯ ಮಹಾರಾಷ್ಟ್ರ ಕರವೀರ ಕ್ಷೇತ್ರ ಕೊಲ್ಲಾಪುರದಲ್ಲಿ ನೆಲೆಸಿರುವ ವೇದವಿದ್ವಾನ್ ಶಿವರಾಮ ಕೇಶವ ಜೋಗುಳೇಕರ್ ಈ ಕೃತಿಯನ್ನು ಹಲವು ಉಪಯುಕ್ತ ಮಾಹಿತಿಯೊಡನೆ ಸಂಗ್ರಹಿಸಿ, ಚಾತುರ್ಮಾಸ್ಯದ ಪ್ರಾಚೀನತೆ, ಅದರ ಹಿರಿಮೆ ಅದರ ಆಚರಣೆಯಿಂದ ಸಿಗುವ ಫಲ, ನಿಷಿದ್ಧ ವಸ್ತುಗಳು, ವಿಶೇಷಕಾಮ್ಯ ವ್ರತಗಳ ಬಗ್ಗೆ ಅನೇಕ ವಿವರಗಳನ್ನು ನೀಡಿರುವ ಲೇಖಕರಿಗೆ ಅಭಿನಂದನೆಗಳು.

**ಕೃತಿ ಪರಿಚಯ : ಪ್ರಣವ**



# ಶ್ರೀಮದ್ಭಾಗವತ ಮಹಾತ್ಮೆ


– ಡಾ।। ಸುಮನ ಬದರೀನಾಥ್
94820 94855

ಶ್ರೀಮದ್ಭಾಗವತವೂ ನಮ್ಮ ಸಂಸ್ಕೃತಿಯ ಅಮೂಲ್ಯ ಶ್ರೇಷ್ಠ ಗ್ರಂಥಗಳಲ್ಲಿ ಒಂದಾಗಿದೆ. ಅಮೋಘ ಶಾಸ್ತ್ರಗ್ರಂಥವೂ. ಸುಮಧುರ ಭಕ್ತಿ ಕಾವ್ಯವೂ ಆದ ಭಾಗವತವು ಜ್ಞಾನಗಂಗೆಯನ್ನೂ, ಭಕ್ತಿಯಮುನೆಯನ್ನೂ ಹರಿಸುವ ಹಿಮಾಲಯ ಸದೃಶ ಕೃತಿಯಾಗಿದೆ. ವೇದ ವೇದಾಂತಸಾರವನ್ನೊಳಗೊಂಡ ನವ ರಸ ಭರಿತವೂ, ನವವಿಧ ಭಕ್ತಿಯುಕ್ತವೂ ಆಗಿದೆ. ಪಾರಾಯಣ ಪಠಣ,ಶ್ರವಣಗಳಿಗೆ ಅತ್ಯಂತ ಶ್ರೇಷ್ಠವಾದ ಮಹಿಮಾನ್ವಿತ ಗ್ರಂಥವಾಗಿದೆ.

ಶ್ರೀಮದ್ಭಾಗವತವು ಶ್ರೀಮನ್ನಾರಾಯಣನ ಅವತಾರವೇ ಆದ ಶ್ರೀವೇದವ್ಯಾಸ ಪ್ರಣೀತವಾದುದು. ಅಷ್ಟಾದಶ ಪುರಾಣಗಳ ರತ್ನಮಾಲೆಯಲ್ಲಿನ ನಾಯಕಮಣಿ, ಇದರಲ್ಲಿ ಹನ್ನೆರಡು ಸ್ಕಂದಗಳು ಹದಿನೆಂಟು ಸಾವಿರ ಗ್ರಂಥ (32 ಅಕ್ಷರ - ಒಂದು ಗ್ರಂಥ)ಗಳೂ ಇವೆ. ಕೇಳುವುದಕ್ಕೆ ಕಿವಿಗಿಂಪಾಗಿಯೂ ಅರ್ಥಗರ್ಭಿತವಾಗಿಯೂ ಇರುವುದರಿಂದ ಈ ಗ್ರಂಥಕ್ಕೆ ಶ್ರೀಮದ್ಭಾಗವತವೆಂಬ ಹೆಸರು ಅನ್ವರ್ಥವಾಗಿದೆ.

ಶ್ರೀಮದ್ಭಾಗವತವು ಪ್ರಪ್ರಥಮದಲ್ಲಿ ಶ್ರೀಮನ್ನಾರಾಯಣನಿಂದ ಬ್ರಹ್ಮನಿಗೆ, ಅವನಿಂದ ನಾರದರಿಗೆ ಉಪದೇಶವಾಯಿತು. ನಾರದರಿಂದ ಶ್ರೀವೇದವ್ಯಾಸರಿಗೆ ಸೂಚಿಸಲ್ಪಟ್ಟಿತು. ಶ್ರೀಮನ್ನಾರಾಯಣನೇ ವೇದವ್ಯಾಸರೂಪಿಯಾಗಿ ಅವತರಿಸಿ, ವೇದಗಳನ್ನು ವಿಂಗಡಿಸಿ ಬ್ರಹ್ಮಸೂತ್ರಗಳನ್ನು ರಚಿಸಿ ಅದಲ್ಲದೆ ಮಹಾಭಾರತವನ್ನೂ, ಹದಿನೇಳು ಪುರಾಣಗಳನ್ನೂ ರಚಿಸಿದರು ಆದರೂ ಅವರಿಗೆ ತೃಪ್ತಿಯಾಗಲಿಲ್ಲ. ಆ ಸಮಯದಲ್ಲಿ ಅವರಲ್ಲಿಗೆ ಬಂದ ನಾರದರೂ ಶ್ರೀಹರಿಯ ಮಹಿಮೆಗಳನ್ನು ರಸವತ್ತಾಗಿ ವರ್ಣಿಸುವ, ಭಾಗವತ ಧರ್ಮ ಪ್ರಸಾರಕವಾದ ಗ್ರಂಥವೊಂದನ್ನು ರಚಿಸಬೇಕೆಂದು ಭಿನ್ನವಿಸಿಕೊಂಡರು. ನಾರದರ ಅಭಿಪ್ರಾಯವನ್ನರಿತ ವೇದವ್ಯಾಸರು ಭಾಗವತದ ಪುರಾಣವನ್ನು ರಚಿಸಿ ಅದನ್ನು ತಮ್ಮ ಪುತ್ರರಾದ ಶುಕಾಚಾರ್ಯರಿಗೆ ಉಪದೇಶಿಸಿದರು. ಶುಕಾಚಾರ್ಯರು ಋಷಿಗಳಿಂದ ಶಪಿತನಾಗಿ ಗಂಗೆಯ ತಟದಲ್ಲಿ ಪ್ರಾಯೋಪವೇಶದಲ್ಲಿ ಕುಳಿತ ಪರೀಕ್ಷಿತ್ ರಾಜನಿಗೆ ಶ್ರವಣ ಮಾಡಿಸಿದರು. ಅಲ್ಲಿ ಅದನ್ನು ಶ್ರವಣ ಮಾಡಿದ ಸೂತ ಪುರಾಣಿಕರು ನೈಮಿಷಾರಣ್ಯದಲ್ಲಿ ಶೌನಕಾದಿ ಋಷಿಗಳಿಗೆ ಹೇಳಿ ಇದು ಲೋಕದಲ್ಲಿ ಪ್ರಚಲಿತವಾಯಿತು ಇದು ಭಾಗವತ ನಡೆದು ಬಂದ ಪರಂಪರೆ.

ಪುರಾಣರತ್ನವೆನಿಸಿದ ಭಾಗವತವನ್ನು ಬಹು ಹಿಂದಿನಿಂದಲೂ ಪಾರಾಯಣ, ಪ್ರವಚನ, ಶ್ರವಣ ಮಾಡುವ ಸಂಪ್ರದಾಯ ಬೆಳೆದು ಬಂದಿದೆ. ಭಾಗವತ ಪುರಾಣ ನಡೆಯುತ್ತಿದೆಯೆಂದರೆ ಭಕ್ತ ಜನ ಕಿಕ್ಕಿರಿದು ನೆರೆಯುತ್ತಾರೆ. ಶ್ರವಣ ಮಾಡಿ ಧನ್ಯರಾದೆವೆಂದು ಭಾವಿಸುತ್ತಾರೆ. ಅದರಲ್ಲೂ ಭಾದ್ರಪದ ಮಾಸದಲ್ಲಿ ನಡೆಯುವ ಪ್ರೋಷ್ಠಪದೀ ಭಾಗವತದ ಶ್ರವಣವು ಬಹು ಶ್ರೇಷ್ಠವೆಂದು ಹೇಳಲ್ಪಟ್ಟಿದೆ. ಯಾವ ತಿಂಗಳಿನಲ್ಲಿ ಪೂರ್ವಾಭಾದ್ರ ಮತ್ತು ಉತ್ತರಾಭಾದ್ರ ನಕ್ಷತ್ರಗಳು ಪೂರ್ಣಿಮೆಯ ದಿನ ಅಥವಾ ಅದರ ಹಿಂದಿನ ಮುಂದಿನ ದಿನಗಳಲ್ಲಿ ಬರುತ್ತದೆಯೊ ಆ ಮಾಸಕ್ಕೆ ಪ್ರೋಷ್ಠಪದೀ ಎನ್ನುವರು. ಅದು ಭಾದ್ರಪದ ಮಾಸವಾಗಿರುತ್ತದೆ. ಪ್ರಥಮತಃ ಶುಕಾಚಾರ್ಯರು ಭಾದ್ರಪದ ನವಮಿಯಿಂದ ಪೌರ್ಣಮಿಯವರೆಗೂ ಸಪ್ತಾಹ ಕ್ರಮದಲ್ಲಿ (ಅಂದರೆ ಏಳು ದಿನಗಳ ಕಾಲ) ಗಂಗೆಯ ತಟದಲ್ಲಿ ಪ್ರಾಯೋಪವೇಶದಲ್ಲಿ ಕುಳಿತ ಪರೀಕ್ಷಿತ್ ರಾಜನಿಗೆ ಭಾಗವತವನ್ನು ಹೇಳಿದರು. ಪರೀಕ್ಷಿತ್ ರಾಜನು ಭಾಗವತ ಶ್ರವಣದಿಂದ ಮುಕ್ತಿಯನ್ನು ಹೊಂದಿದನು. ಅದರಿಂದ ಪ್ರೋಷ್ಠಪದೀ ಭಾಗವತ ಶ್ರವಣವು ಬಹು ಶ್ರೇಷ್ಠವೆಂದು ಭಾವಿಸಲ್ಪಟ್ಟಿದೆ. ಭಾದ್ರಪದ ಪಾಡ್ಯದಿಂದ ಪೌರ್ಣಿಮೆಯವರೆಗೂ ಬಹು ಕಡೆಗಳಲ್ಲಿ ಪ್ರೋಷ್ಠಪದೀ ಭಾಗವತ ಪುರಾಣ ಕಥನ ನಡೆಯುತ್ತದೆ. ಭಾವುಕ ಭಕ್ತ ಜನರು ಬಹು ಸಂಖ್ಯಾತವಾಗಿ ನೆರೆದು ಪ್ರೋಷ್ಠ



ಪದೀ ಭಾಗವತದ ಶ್ರವಣ ಮಾಡಿ ಧನ್ಯರಾದೆವೆಂದು ಭಾವಿಸುತ್ತಾರೆ. ಭಾಗವತ ಪ್ರವಚನ, ಪಾರಾಯಣಗಳಿಗೆ ವಿಧಿ ವಿಧಾನಗಳುಂಟು ಪಾರಾಯಣ ಅಥವಾ ಪ್ರವಚನ ಮಾಡುವವರು ಒಂದು ಶುಭದಿನದಲ್ಲಿ ಸ್ನಾನಮಾಡಿ ಶುಭ್ರವಸ್ತ್ರಗಳನ್ನು ಊರ್ಧ್ವಪುಂಡ್ರಾದಿಗಳನ್ನೂ ಧರಿಸಿ, ಸಂಧ್ಯಾವಂದನ, ದೇಶ ಕಾಲೋಚ್ಚಾರಣ ಪೂರ್ವಕವಾಗಿ ಶ್ರೀಮನ್ನಾರಾಯಣನನ್ನೂ,ವ್ಯಾಸ, ಶುಕಋಷಿಗಳನ್ನೂ, ಭಾಗ ವತ ಗ್ರಂಥವನ್ನೂ ಪೂಜಿಸಬೇಕು.ದೇವಸ್ಥಾನದಲ್ಲಿ, ಗುರುಗಳ ಸಾನ್ನಿಧ್ಯದಲ್ಲಿ, ವಿಶಾಲವಾದ ಸ್ಥಳವಿದ್ದರೆ ಮನೆಯಲ್ಲಿ ಅಥವಾ ಮತ್ತಾವುದೇ ಪ್ರಶಸ್ತ ಸ್ಥಳದಲ್ಲಿ ಕಥಾಮಂಟಪವನ್ನು ರಚಿಸಬೇಕು ಅದನ್ನು ತಳಿರುತೋರಣಗಳಿಂದಲೂ, ಪುಷ್ಪ ಮಾಲೆಗಳಿಂದಲೂ ರಂಗವಲ್ಯಾದಿಗಳಿಂದಲೂ ಅಲಂಕರಿಸಬೇಕು. ಪ್ರವಚನ ಮಾಡುವವರು ಕುಳಿತುಕೊಳ್ಳುವ ಸ್ಥಳವು ಉನ್ನತವೂ ಸುಸಜ್ಜಿತವೂ ಆಗಿರ ಬೇಕು. ಅವರಿಗಿಂತ ಎತ್ತರ ಅಥವಾ ಸಮಾನಾಸನದಲ್ಲಿ ಯಾರೂ ಕುಳಿತು ಕೊಳ್ಳಬಾರದು. ಪ್ರವಚನ ಮಾಡುವವರು ಕಥಾಮಂಟಪಕ್ಕೆ ಬಂದಾಗ ಎಲ್ಲರೂ ಎದ್ದು ನಿಲ್ಲಬೇಕು ಮತ್ತು ಅವರು ಕುಳಿತನಂತರ ಕುಳಿತುಕೊಳ್ಳಬೇಕು, ಏಕೆಂದರೆ ಭಾಗವತನ್ನು ಹೇಳುವವರಲ್ಲಿ ವ್ಯಾಸಮಹರ್ಷಿಗಳ ಮತ್ತು ಶುಕಾಚಾರ್ಯರ ಸಾನ್ನಿ ಧ್ಯವಿರುತ್ತದೆ. ಕಥನಕಾರರು ಶ್ರೋತೃಗಳಿಗೆ ಸಂತೋಷವಾಗುವಂತೆ ಎಲ್ಲರಿಗೂ ಕೇಳಿಸುವಂತೆ, ಶ್ರದ್ಧಾಭಕ್ತಿಗಳಿಂದ ಹೇಳಬೇಕು. ಶ್ರೋತೃಗಳೂ ಶ್ರದ್ಧಾ ಭಕ್ತಿಯಿಂದ ಶ್ರವಣ ಮಾಡಬೇಕು.

ಸಾಧ್ಯವಿದ್ದರೆ ಭಾಗವತವನ್ನು ಉಪವಾಸದಿಂದ ಕೇಳಬೇಕು, ಇಲ್ಲದಿದ್ದರೆ ಹಾಲು ಹಣ್ಣು, ಯಥಾಶಕ್ತಿ ಫಲಾಹಾರ ಅಥವಾ ದಿನವೂ ಕಥಾಶ್ರವಣ ಮುಗಿದ ಮೇಲೆ ರಾತ್ರಿ ಒಮ್ಮೆ ಪತ್ರಾವಳಿಯಲ್ಲಿ ಭೋಜನ ಮಾಡಬೇಕು. ಬೆಳಗ್ಗೆ ಮತ್ತು ಸಾಯಂಕಾಲ ಎರಡೂ ಹೊತ್ತು ಕಥನ ಮಾಡಬೇಕು. ಕಥನ ಪ್ರಾರಂಭದಲ್ಲಿ ಮತ್ತು ಕಡೆಯಲ್ಲಿ ಭಾಗವತ ಗ್ರಂಥವನ್ನು ಪುಷ್ಪಾದಿಗಳಿಂದ ಪೂಜಿಸಿ ಮಂಗ ಳಾರತಿ ಮಾಡಬೇಕು. ಭಾಗವತ ಹೇಳುವ ಸ್ಥಳದಲ್ಲಿ ಎರಡು ದೀಪಗಳನ್ನು ಹಚ್ಚಿಟ್ಟಿರಬೇಕು. ಭಾಗವತ ಗ್ರಂಥದ ಪೂರ್ಣ ಪಾರಾಯಣ ಮುಗಿದ ಮೇಲೆ ಮಂಗಳವನ್ನು ಮಾಡಿ ಭಾಗವತ ಗ್ರಂಥವನ್ನೂ, ಪ್ರವಚನಕಾರರನ್ನೂ ವಸ್ತ್ರಾ ಭರಣ ಮತ್ತು ದ್ರವ್ಯಾದಿಗಳಿಂದ ಪೂಜಿಸಬೇಕು. ಶ್ರೋತೃವು ಆಚಾರ್ಯರಿಗೆ ಏನನ್ನು ಕೊಡುವನೇ ಅದು ಅಕ್ಷಯವಾಗುವುದು.ಅದನ್ನು ಸ್ವೀಕರಿಸುವುದರಿಂದ ಪ್ರವಚನಕಾರರು ಪ್ರತಿಗ್ರಾಹಿಯಾಗುವುದಿಲ್ಲ.

ಬ್ರಾಹ್ಮಣ ಸುವಾಸಿನೀ ಭೋಜನ, ಭಾಗವತ ಗ್ರಂಥ ದಾನಗಳು ಮಂಗಳ ದಿನ ಹೇಳಲ್ಪಟ್ಟಿವೆ. ಈ ಪ್ರಕಾರ ಸಪ್ತಾಹಶ್ರವಣ ಮಾಡುವುದರಿಂದ ಮನುಷ್ಯನಿಗೆ ಭೋಗಭಾಗ್ಯಗಳೂ, ಮುಕ್ತಿಯೂ ಲಭಿಸುತ್ತವೆ.

ಭಾಗವತದ ಕಥನ, ಶ್ರವಣ, ಪಾರಾಯಣದ ಫಲಗಳು ಬಹು ಬಗೆಯಾಗಿ ವರ್ಣಿಸಲ್ಪಟ್ಟಿವೆ. ಭಾಗವತದ ಶ್ರವಣದಿಂದ ಭಕ್ತಿವೃದ್ಧಿಯಾಗಿ ಪರಮಾತ್ಮನ ಪ್ರಸನ್ನತೆಯುಂಟಾಗುವುದು. ಭಾಗವತವು ಕಲ್ಪವೃಕ್ಷದಂತೆ ಯಾವತ್ತೂ ಮನೋ ರಥಗಳನ್ನು ಪೂರ್ಣ ಮಾಡುತ್ತದೆ. ಪುಣ್ಯಕ್ಷೇತ್ರಗಳಲ್ಲಿ ಭಾಗವತ ಕಥನ ಶ್ರವಣ ಮಾಡಬೇಕು. ಮಾಸ ಪಾರಾಯಣ ಶ್ರವಣ, ಸಂವತ್ಸರ ಪಾರಾಯಣ ಶ್ರವಣ, ಸಪ್ತಾಹ ಶ್ರವಣ ಪಾರಾಯಣ, ಆದಿಯಾಗಿ ಹಲವಾರು ರೀತಿಯಲ್ಲಿ ಭಾಗವತ ವನ್ನು ಪಾರಾಯಣ ಮಾಡಬಹುದು. ಚಾತುರ್ಮಾಸ, ಅಧಿಕಮಾಸ ಮಾಘ ಮಾಸಗಳಲ್ಲಿ ಭಾಗವತ ಪಾರಾಯಣ ಶ್ರವಣಗಳು ಬಹುಶ್ರೇಷ್ಠವೆನಿಸಿವೆ. ಕೆಲವರು ನಿತ್ಯಪಾರಾಯಣ ಶ್ರವಣಗಳು ಬಹು ಶ್ರೇಷ್ಠ ವೆನಿಸಿವೆ. ಕೆಲವರು ನಿತ್ಯ ಪಾರಾಯಣ ಗ್ರಂಥವಾಗಿ ಭಾಗವತವನ್ನು ಆರಿಸಿ ಕೊಂಡು ನಿತ್ಯವೂ ಸಾಧ್ಯವಾದಷ್ಟು ಕಡೆಗೆ ಒಂದು ಶ್ಲೋಕವನ್ನಾದರೂ ಓದುವರು. ಹೀಗೇ ಓದಿದರೂ ಕೇಳಿದರೂ ಭಾಗವತ ಸಕಲಾಭೀಷ್ಟಪ್ರದವಾದುದು.

ಶ್ರೀವೇದವ್ಯಾಸ ಮಹರ್ಷಿಗಳು ಪುರಾಣ ರತ್ನವಾದ ಭಾಗವತವನ್ನು ರಚಿಸಿ ದೀಪದಂತೆ ಸಜ್ಜನರಿಗೆ ದಾರಿ ತೋರಿ ದ್ದಾರೆ. ನಿತ್ಯ ನೂತನವಾದ ಭಾಗವತವು ನಿತ್ಯದಲ್ಲಿಯೂ ಹೊಸ ಸವಿಯನ್ನು ಆನಂದ ವನ್ನು ಮಂಗಳವನ್ನು ನೀಡುತ್ತಲೇ ಇರುತ್ತದೆ. "ಸದಾ ಸೇವಾ ಶ್ರೀಮದ್ಭಾಗವತಾ ಕಥಾ ಯಸ್ಯಾಃ ಶ್ರವಣ ಮಾತ್ರೇಣ ಹರಿಶ್ಚಿತ್ತಂ ಸಮಾಶ್ರಯೇತ್"



# ಶ್ರೀ ಚೊಕ್ಕನಾಥ ಸ್ವಾಮಿ ದೇವಸ್ಥಾನ

– ಶ್ರೀಮತಿ. ಮಾಲಾಪ್ರಸಾದ್
81053 65307

ನಮ್ಮ ಹಿಂದೂ ಧರ್ಮ, ಸನಾತನ ಧರ್ಮ ತುಂಬಾ ಪ್ರಾಚೀನವಾದದ್ದು. ನಮ್ಮ ಭಾರತದಲ್ಲಿ ತುಂಬಾ ಪ್ರಾಚೀನವಾದ ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿರುವ ಅನೇಕ ದೇವಾಲಯಗಳಿವೆ. ಹೀಗೆ ತುಂಬಾ ಪ್ರಾಚೀನವಾದ ನಮ್ಮ ಬೆಂಗಳೂರಿನ ದೊಮ್ಮಲೂರಿನಲ್ಲಿರುವ ಶ್ರೀಚೊಕ್ಕನಾಥ ಸ್ವಾಮಿ ದೇವಸ್ಥಾನದ ಮಹಿಮೆಯನ್ನು ತಿಳಿಯೋಣ. ನಮ್ಮ ಬೆಂಗಳೂರು ಉದ್ಯಾನನಗರ, ಸಿಲಿಕಾನ್ ಸಿಟಿಯೇ ಅಲ್ಲದೇ ದೇವಸ್ಥಾನಗಳ ಆಗರವೂ ಆಗಿದೆ. ಶ್ರೀಚೊಕ್ಕನಾಥ ಸ್ವಾಮಿ ದೇವಸ್ಥಾನಕ್ಕೆ ಬೆಂಗಳೂರಿನ ತುಂಬಾ ಸುಂದರವಾದ ದೇವಸ್ಥಾನವೆಂಬ ಹೆಗ್ಗಳಿಕೆಯೂ ಇದೆ.

ಇಲ್ಲಿ ಕಲಿಯುಗದೈವ ಶ್ರೀ ವೆಂಕಟೇಶ್ವರನು ಭೂದೇವಿ, ಶ್ರೀದೇವಿ ಸಮೇತ ಶ್ರೀಚೊಕ್ಕನಾಥಸ್ವಾಮಿಯಾಗಿ ದರ್ಶನ ನೀಡುತ್ತಾನೆ. ಇಲ್ಲಿನ ವಿಗ್ರಹಗಳನ್ನು ನೇಪಾಳದ ಗಂಡಕಿ ನದಿಯಿಂದ ತಂದ ಸಾಲಿಗ್ರಾಮಕಲ್ಲಿನಿಂದ ಕೆತ್ತಲಾಗಿದೆ. ಈ ದೇವಾಲಯವು ಸಂಪೂರ್ಣವಾಗಿ ವಿಷ್ಣುವಿಗೆ ಅರ್ಪಿತವಾಗಿದೆ. ಶ್ರೀಚೊಕ್ಕನಾಥನ ಸ್ವಾಮಿ ವಿಗ್ರಹವನ್ನು ಅತಿ ಎತ್ತರವಾದ ಸ್ಥಳದಲ್ಲಿ ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಪ್ರಾಚ್ಯ ಗೋಡೆಗಳ ಮೇಲೆ ದ್ರಾವಿಡ ಭಾಷೆಯಲ್ಲಿ ಬರೆದಿರುವ ಶಿಲಾ ಶಾಸನಗಳ ಪ್ರಕಾರ ಇಲ್ಲಿನ ದೇವರ ಹೆಸರು ಚಿಕ್ಕ ಪೆರುಮಾಳ್ ಎಂದಿದೆ. ಊರಿನ ಹೆಸರು ತೊಂಬಲೂರು ಎಂದೂ ಬರೆಯಲಾಗಿದೆ. ಅದು ಇಂದಿನ ದೊಮ್ಮಲೂರು ಆಗಿದೆ. ಈ ಶಾಸನಗಳ ಪ್ರಕಾರ ಈ ದೇವಾಲಯವನ್ನು ಚೋಳರು ಕ್ರಿ.ಶ. 1200 ರಲ್ಲಿ ನಿರ್ಮಿಸಿದ್ದಾರೆ.

ಈ ದೇವಸ್ಥಾನವನ್ನು ಶಕುಂತಲಮ್ಮ,ಕೇಶವಾಚಾರ್ಯರು ಜೀವನೋದ್ಧಾರ ಮಾಡಿದ್ದಾರೆ. ದೇವಾಲಯದ ಪ್ರಾಂಗಣದ ಸುತ್ತಲೂ ವಿವಿಧ ರೀತಿಯ ಶಿಲ್ಪಗಳು ಮತ್ತು ಅಲಂಕಾರಿಕ ಚಿತ್ರಣಗಳು ಕಂಡು ಬರುತ್ತವೆ. ಇಲ್ಲಿ ವಿಜಯನಗರ ಶೈಲಿಯ ನವರಂಗ ಹಾಗೂ ಕಂಬಗಳನ್ನು ಕಾಣಬಹುದು. ಸ್ತಂಭಗಳು ಕೋಲಾಟ ದೃಶ್ಯಗಳು ಸುಗ್ರೀವ ಮತ್ತು ವಾಲಿಯ ಕಾಳಗ ದೃಶ್ಯಗಳು ಹಾಗೂ ದೇವತೆಗಳ ನಡುವಿನ ಕಾಳಗ ದೃಶ್ಯಗಳನ್ನು ಬಿಂಬಿಸುತ್ತವೆ.ದೇವಾಲಯದ ಮುಂಭಾಗದಲ್ಲಿರುವ ಸ್ತಂಭಗಳ ಮೇಲೆ ಮಹಾವಿಷ್ಣುವಿನ ದಶಾವತಾರಗಳನ್ನು ಕೆತ್ತಲಾಗಿದೆ. 1947 ಆಗಸ್ಟ್ 15 ರಂದು ಭಾರತಕ್ಕೆ ಸಿಕ್ಕ ಸ್ವಾತಂತ್ರ್ಯ ಸಂಭ್ರಮವನ್ನು ದೇವಸ್ಥಾನದ ಮುಂಭಾಗದಲ್ಲಿರುವ ಧ್ವಜಸ್ತಂಭದ ಮೇಲೆ ಇಲ್ಲಿನ ಗ್ರಾಮಸ್ಥರು ತ್ರಿವರ್ಣ ಧ್ವಜವನ್ನು ಹಾರಿಸಿದ್ದಾರೆ. ಇದಕ್ಕೆ ಸಂಬಂಧಪಟ್ಟ ತೈಲ ಚಿತ್ರ ದೇವಸ್ಥಾನದ ಮುಂಭಾಗದಲ್ಲಿದೆ.

ಇನ್ನು ಶ್ರೀಚೊಕ್ಕನಾಥ ಸ್ವಾಮಿ ದೇವಾಲಯದ ಸ್ಥಳ ಪುರಾಣವನ್ನು ತಿಳಿಯೋಣ, ಮೂಲ ಶಾಸನಗಳ ಪ್ರಕಾರ ಒಬ್ಬ ಮುನಿಶ್ರೇಷ್ಠರು ಈ ಸ್ಥಳದಲ್ಲಿ ಕಠಿಣ ತಪಸ್ಸನಾಚರಿಸಿ ಭಗವಾನ್ ಶ್ರೀ ಮಹಾವಿಷ್ಣುವಿನ ಅನುಗ್ರಹವನ್ನು ಪಡೆದರು. ಭಗವಂತನು ಈ ಮುನಿಶ್ರೇಷ್ಠರು ತಪಸ್ಸು ಮಾಡಿದ ಈ ಜಾಗವು ಪುಣ್ಯಸ್ಥಳವೆಂದು ಭಕ್ತಾದಿಗಳು ಸೇವೆಸಲ್ಲಿಸಿ ಭಗವಂತನ ಕೃಪೆಗೆ ಪಾತ್ರರಾಗಲಿ ಎಂದು ಇಲ್ಲಿ ತನ್ನ ವಿಗ್ರಹವನ್ನು ಪ್ರತಿಷ್ಠಾಪಿಸಲು ಆದೇಶಿಸಿದನು. ಮೂಲ ವಿಗ್ರಹವು ಗ್ರಾಮದ ಎತ್ತರ ಪ್ರದೇಶದಲ್ಲಿ ಪ್ರತಿಷ್ಠಾಪನೆ ಮಾಡಿರುವುದರಿಂದ ಬ್ರಹ್ಮಾಂಡ ಶಕ್ತಿಯ ಪ್ರಕಾಶವನ್ನು ಪಡೆಯುತ್ತದೆ. ಇದರಿಂದ ಪ್ರಾಣಿಕ್ ಶಕ್ತಿ ಅಥವಾ ಕಾಸ್ಮಿಕ್‌ಎನರ್ಜಿ ಆಕರ್ಷಿಸಲ್ಪಟ್ಟು ಭಕ್ತಾದಿಗಳಿಗೆ ಬೇಕಾದ ಧನಾತ್ಮಕ ಗುಣವನ್ನು ಎಲ್ಲಾ ಎಂಟು ದಿಕ್ಕುಗಳಲ್ಲಿಯೂ ಎಲ್ಲಾ ಸಮಯದಲ್ಲಿಯೂ ಪಸರಿಸುತ್ತಾ ಇದೆ.

ದೇವಾಲಯವೂ ಪೂರ್ವಾಭಿಮುಖವಾಗಿ ನಿರ್ಮಿಸಲಾಗಿದೆ. ಮೊದಲಿಗೆ ವಿಘ್ನ ವಿನಾಶಕ ಗಣೇಶನನ್ನು ದರ್ಶಿಸಬಹುದು. ದೇವಸ್ಥಾನದ ಬಲಭಾಗಕ್ಕೆ ಆಂಜನೇಯ ಸ್ವಾಮಿ ಬಲವಾಗಿ ನಿಂತಿದ್ದಾನೆ.

ಫೆಬ್ರವರಿ ಮೊದಲನೇ ವಾರದಿಂದ ಮಾರ್ಚ್ ಮೊದಲನೇ ವಾರದವರೆಗೂ ಹಾಗೂ ಆಗಸ್ಟ್ ಕೊನೆಯ ವಾರದಿಂದ ಸೆಪ್ಟೆಂಬರ್ ಮೊದಲನೇ ವಾರದವರೆಗೂ ಸೂರ್ಯನು ಉದಯಿಸಿದಾಗ ಸೂರ್ಯನ ಕಿರಣಗಳು ವಿಗ್ರಹದ ಮೇಲೆ ನೇರವಾಗಿ ಬೀಳುವುದರಿಂದ ಪ್ರಾಣಿಕ್ ಶಕ್ತಿ ಈ ಸಮಯದಲ್ಲಿ ಹೆಚ್ಚು, ಹೆಚ್ಚಾಗಿ ಆಕರ್ಷಿಸಲ್ಪಡುತ್ತದೆ.

ಈ ಸಮಯದಲ್ಲಿ ಶ್ರೀಚೊಕ್ಕನಾಥ ಸ್ವಾಮಿಯ ದರ್ಶನ ತುಂಬಾ ಶುಭದಾಯಕವಾದದ್ದು. ಭಕ್ತಾದಿಗಳು ಯಾರು ದೇವಸ್ಥಾನದ ಪ್ರದಕ್ಷಿಣೆ ಮಾಡುತ್ತಾರೋ ಅವರಿಗೆ ಧನಾತ್ಮಕ ಗುಣಗಳು ಹೆಚ್ಚಾಗುವುದರಿಂದ ಆಯಸ್ಸು ವೃದ್ಧಿಯಾಗುತ್ತದೆ. ರೋಗಗಳಿಂದ ಗುಣಮುಖವಾಗಿ ಆರೋಗ್ಯವಂತರಾಗುತ್ತಾರೆ. ಅವರು ಮನಸ್ಸಿನಲ್ಲಿ ನೆನೆಸಿರುವ ಸಂಕಲ್ಪಗಳು ಸಿದ್ಧಿಯಾಗುತ್ತವೆ.ಧನ್ಯಾತ್ಮಕ ಗುಣದಿಂದ ಮನಸ್ಸು ಶಾಂತವೂ, ನಿಶ್ಚಲವೂ ಆಗುತ್ತದೆ. ಸಂತೋಷ ಪ್ರೇಮ,ಸೌಹಾರ್ದ,ಸಹಕಾರ,ಸಹಾನುಭೂತಿ, ಮೈತ್ರಿ, ಸಹನೆ, ಅಹಿಂಸೆ, ಮೊದಲಾದವು ಧನಾತ್ಮಕ ಗುಣಗಳು, ದ್ವೇಷ, ಅಸೂಯೆ, ಜಗಳ, ಹಿಂಸೆ, ಮದ, ಮೋಹ, ಮಾತ್ಸರ್ಯ ಋಣಾತ್ಮಕ ಗುಣಗಳು, ಧನಾತ್ಮಕ ಗುಣಗಳು ಹೆಚ್ಚಾದಂತೆ ಋಣಾತ್ಮಕ ಗುಣಗಳು ನಶಿಸಿ ಹೋಗುತ್ತವೆ. ಇಡೀ ಪ್ರಪಂಚದಲ್ಲಿಯೇ ಕಾಸ್ಮಿಕ್ ಶಕ್ತಿಯನ್ನು ಹೊಂದಿರುವಂತಹ ಒಂದೇ ಒಂದು ದೇವಸ್ಥಾನವೆಂದರೆ ಬೆಂಗಳೂರಿನ ಶ್ರೀ ದೊಮ್ಮಲೂರಿನಲ್ಲಿರುವ ಶ್ರೀ ಚೊಕ್ಕನಾಥ ಸ್ವಾಮಿ ದೇವಸ್ಥಾನ.

ಇಲ್ಲಿ ಶ್ರೀ ಚೊಕ್ಕನಾಥ ಸ್ವಾಮಿಗೆ ಪ್ರತಿ ನಿತ್ಯವೂ ಅಭಿಷೇಕ ಮಾಡಲಾಗುತ್ತದೆ. ಶನಿವಾರಗಳಲ್ಲಿ ವಿಶೇಷವಾಗಿ ಪಂಚಾಮೃತ ಅಭಿಷೇಕವನ್ನು ಮಾಡುತ್ತಾರೆ. ಪ್ರತಿನಿತ್ಯವೂ ಅಭಿಷೇಕದ ಸಮಯದಲ್ಲಿ ಚೊಕ್ಕನಾಥಸ್ವಾಮಿ ವಿಗ್ರಹದ ಎದುರುಗಡೆ ಹೋಮ ಮಾಡಲಾಗುತ್ತದೆ. ಇದರಿಂದ ಈ ದೇವಸ್ಥಾನದಲ್ಲಿ ಇನ್ನಷ್ಟು ಧನಾತ್ಮಕ ಗುಣಗಳು ಹೆಚ್ಚು. ವಿಗ್ರಹದಿಂದ ಹೊರಹೊಮ್ಮುವ ಕಾಸ್ಮಿಕ್ ಶಕ್ತಿಯು 12 ಜಾಗಗಳಲ್ಲಿ ಬೀಳುತ್ತದೆ. ಅದರಲ್ಲಿ ಮೂರು ಜಾಗಗಳು ಗರ್ಭಗುಡಿಯಲ್ಲಿ ಒಳಗಡೆಯೇ ಇದೆ.

ಇನ್ನು 9 ಜಾಗಗಳನ್ನು ದೇವಸ್ಥಾನದ ಪ್ರಾಂಗಣದಲ್ಲಿ ಗುರುತು ಮಾಡಿದ್ದಾರೆ. ನಾವು ಪ್ರದಕ್ಷಿಣೆ ಹಾಕುವಾಗ ಆ 9 ಜಾಗಗಳಲ್ಲಿಯೂ ಒಂದೊಂದು ನಿಮಿಷ ನಿಂತುಕೊಂಡು ದೇವರನ್ನು ಧ್ಯಾನ ಮಾಡಬೇಕು.

ಅಲ್ಲಿರುವ ಕಾಸ್ಮಿಕ್ ಶಕ್ತಿಯು ನಮ್ಮ ದೇಹದಲ್ಲಿ ಪ್ರವೇಶಿಸಿ ಅನಾರೋಗ್ಯವನ್ನು ದೂರ ಮಾಡುತ್ತದೆ. ಸ್ವತಹ ನಾವು ಕಾಸ್ಮಿಕ್ ಶಕ್ತಿಯನ್ನು ಅನುಭವಿಸಬಹುದು.

ವೈಕುಂಠ ಏಕಾದಶಿ, ದ್ವಾದಶಿ, ನವರಾತ್ರಿ ಸಮಯಗಳಲ್ಲಿ ವಿಶೇಷವಾದ ಪೂಜೆ ಸಲ್ಲಿಸಲಾಗುತ್ತದೆ. ಮಾರ್ಚ್‌ನಲ್ಲಿ ವಿಜೃಂಭಣೆಯಿಂದ ಶ್ರೀ ಚೊಕ್ಕನಾಥ ಸ್ವಾಮಿಗೆ ಉತ್ಸವ ನಡೆಯುತ್ತದೆ.

ಶ್ರೀಚೊಕ್ಕನಾಥ ಸ್ವಾಮಿ ದೇವಸ್ಥಾನ ಅದ್ಭುತವಾದ ದೇವಸ್ಥಾನ. ಪ್ರಚಾರದ ಕೊರತೆಯಿಂದಾಗಿ ಈ ದೇವಸ್ಥಾನದ ಬಗ್ಗೆ ಸಾಕಷ್ಟು ಜನರಿಗೆ ತಿಳಿದಿಲ್ಲ. ಈ ದೇವಸ್ಥಾನಕ್ಕೆ ಭೇಟಿ ನೀಡಿದರೆ ನಾವು ಜನ್ಮ ಜನ್ಮಗಳಲ್ಲಿ ಮಾಡಿದ ಪಾಪ ಕರ್ಮಗಳು ಸವೆಯುತ್ತವೆ ಎಂದು ನಂಬಿಕೆ. ನಮ್ಮಲ್ಲಿರುವ ಒಂಬತ್ತು ಚಕ್ರಗಳು ಸಕ್ರಿಯಗೊಳ್ಳುತ್ತವೆ. ಒಮ್ಮೆ ಈ ದೇವಸ್ಥಾನಕ್ಕೆ ಭೇಟಿ, ನೀಡಿ ಶ್ರೀಚೊಕ್ಕನಾಥ ಸ್ವಾಮಿಯ ಕೃಪೆಗೆ ಪಾತ್ರರಾಗಿ ಆರೋಗ್ಯವಂತರಾಗಿ ಜನ್ಮ ಸಾರ್ಥಕ ಮಾಡಿಕೊಳ್ಳಿ ಗೋವಿಂದ! ಗೋವಿಂದ!

**ಭಕ್ತರು ದೇವಸ್ಥಾನದಲ್ಲಿ ಮೌನವನ್ನು ಆಚರಿಸಬೇಕು. ಜೊತೆಗೆ " ಓಂ ನಮೋ ವೇಂಕಟೇಶಾಯ" ಎಂದು ನಾಮಸ್ಮರಣೆಯನ್ನು ಧ್ಯಾನಿಸಬೇಕು. ಕ್ಯೂಲೈನ್‌ನಲ್ಲಿ ಹೋಗುವಾಗ ಗೋವಿಂದ ನಾಮಸ್ಮರಣೆಯನ್ನು ಮಾಡಬೇಕು. ಬೇರೆಯವರನ್ನು ಸಂಬೋಧನೆಯನ್ನು ಮಾಡುವಾಗ ಗೋವಿಂದಾ ಎಂದು ಸಂಬೋಧನೆಯನ್ನು ಮಾಡೋಣ. ಇದರಿಂದ ಯಾವಾಗಲೂ ದೇವರ ಸ್ಮರಣೆಯಲ್ಲಿ ಇರಬಹುದು.**

# ಆಂಡಾಳ್ ದೇವಿಯ ಭಕ್ತಿ ಗೀತೆ ತಿರುಪ್ಪಾವೈ



– ಡಾ.ಎನ್.ಕೆ. ರಾಮಶೇಷನ್

82123 62865

ಶ್ರೀವೈಷ್ಣವ ದ್ರಾವಿಡ ಸಂತರಾದ 12 ಆಳ್ವಾರರಲ್ಲಿ ಆಂಡಾಳ್ ಅಥವಾ ಗೋದಾದೇವಿ ತಮಿಳುನಲ್ಲಿ ಕೋದೈ ಎಂದರೆ ನೀಳವಾದ ಕಪ್ಪು ಕೇಶ ರಾಶಿ ಉಳ್ಳವಳು. ಒಬ್ಬಳು ಆಳ್ವಾರರೆಂದೇ ಪರಿಗಣಿತಳಾಗಿ ದ್ದಾಳೆ ಹಾಗೂ ಆಂಡಾಳ್ ಹಾಡಿರುವ 30 ಪದ್ಯಗಳ ತಿರು ಪ್ಪಾವೈ ಒಂದು ಶ್ರೇಷ್ಠ ಭಕ್ತಿಗೀತೆ ಎಂದೆ ಸುಪ್ರಸಿದ್ಧ. ತಿರುಪ್ಪಾವೈ 30 ಪದ್ಯಗಳ ಭಕ್ತಿ ಕಾವ್ಯಕ್ಕೆ ಎಷ್ಟೋ ವಿದ್ವಾಂಸರು ವ್ಯಾಖ್ಯಾನ ಮಾಡಿದ್ದಾರೆ ತಮಿಳು, ತೆಲುಗು ಹಾಗೂ ಸಂಸ್ಕೃತ ಕನ್ನಡಗಳಲ್ಲಿ

ತಿರುಪ್ಪಾವೈ ಎಂದರೆ ಕನ್ನಡದಲ್ಲಿ ಸಿರಿ ನೋಂಪಿ, ಶ್ರೀಕೃಷ್ಣ ಸೇವಾವ್ರತ ಎಂದೆಲ್ಲಾ ಅರ್ಥವಿದೆ. ಶ್ರೀ ವೈಷ್ಣವ ರಲ್ಲಿ ಯಾವುದೇ ವ್ರತಾಚರಣೆ ಇಲ್ಲ, ಆದರೆ ತಿರುಪ್ಪಾವೈಯನ್ನು ವ್ರತ ಎಂದೇ ಭಾವಿಸುತ್ತಾರೆ. ಧನುರ್ಮಾಸ (ಮಾಗಿಕಾಲ ಹೇಮಂತ ಋತು) ಡಿಸೆಂಬರ್ ತಿಂಗಳಲ್ಲಿ ಜನವರಿ ಸಂಕ್ರಾಂತಿ ತನಕ ವ್ಯಾಪಿಸಿರುವ ಗೀತಕಾವ್ಯ. ಶ್ರೀಕೃಷ್ಣ ಗೀತಾಚಾರ್ಯಮಾಸಾನಾಮ್ ಮಾರ್ಗಶೀರ್ಶೋಸ್ಮಿಎಂದು ಸಾರಿದ್ದಾನೆ. ಅಂದರೆ ಮಾರ್ಗಶಿರ ಮಾಸ ದಲ್ಲಿ ತಿರುಪ್ಪಾವೈ ಆಂಡಾಳ್ ಹಾಡಿರುವಂತೆ ಮುಪ್ಪದಂತಪ್ಪಾಮೇ 30 ದಿನಗಳು ಪಠಿಸುವುದು ಪದ್ಧತಿ.





ಮಾಗಿಯ ಚಳಿ ಕೊರತೆ ಮುಂಜಾವಿಗೂ ಮೊದಲೇ ಆಂಡಾಳ್ ಹಾಡಿರುವಂತೆ ಶಿತ್ತಮ್ ಶಿರುಹಾಲೇ ವಂದ್ ಉನ್ನೈ ಚೇವಿತ್ತ್ ಉನ್ ಪೊತ್ತಾ ಮರೈ ಆಡಿಯೇ ಪೋತ್ತುಮ್ ಪೊರುಳ್ ಕೇಳಾಯ್, ಪ್ರತಿನಿತ್ಯ ಶಿರು ಹಾಲೇ ಎಂದರೆ ಬೆಳಗು ನಾಲ್ಕು, ನಾಲ್ಕುವರೆ ಸಮಯದಲ್ಲಿ ಎಚ್ಚೆತ್ತು ಶ್ರೀಮನ್ನಾರಾಯಣನನ್ನು ಸ್ಮರಿಸುತ್ತಾ ಸ್ನಾನ ಮಾಡಿ ಸಂಧ್ಯಾದಿ ಕರ್ಮ ಆಚರಿ ಸಿದ ನಂತರ ದೇವತಾರಾಧನೆಗೆ ಒಂದು ಹೂ ಆಗಿ ತಿರುಪ್ಪಾವೈ ಪಠಿಸುವಿಕೆ. ಮೂರು ನಾಲ್ಕುವರೆಗಿನ ಈ ಘಳಿಗೆ ಪ್ರತ್ಯೂಷ ಸಮಯ ಸತ್ವಗುಣ ಪ್ರಧಾನ ಇರುವ ಕಾಲ ಬ್ರಾಹ್ಮೀಮುಹೂರ್ತ ಯಾವುದೇ ದೈವ ಪ್ರೀತ್ಯರ್ಥ ಕಾಲಕ್ಕೂ ಉತ್ತಮ ಫಲ ಲಭಿಸು ತ್ತದೆ ಎಂದು ಋಷಿ ಹಿರಿಯರು ಹೇಳಿದ್ದಾರೆ ನಾವೆಲ್ಲರೂ ಈ ಕ್ರಮ ಅಂದರೆ ತಿರುಪ್ಪಾವೈ ಹಾಡಿದರೆ ಫಲಪ್ರಾಪ್ತಿ.ಬದುಕಿಗೂ ಸಾಂತ್ವನ 'ನೆಮ್ಮದಿ' ಸಂತೋಷ ಮಾಗಿ ಕೊರೆತದ ಜೊತೆಗೆ ಪ್ರತಿನಿತ್ಯವೂ ತಯಾರಿಸುವ ಪೊಂಗಲ್ ಹುಗ್ಗಿ ಪ್ರಸಾದ ನೈವೇದ್ಯ, ಕೊರೆ ಯುವ ಚಳಿಗೂ ಪೊಂಗಲ್ ಸವಿಯುವು ದಕ್ಕೂ ಸೊಗಸು, ಸೊಬಗು ಸೊಗಡು, ಹೆಸರು ಬೇಳೆಯ ಹುಗ್ಗಿ ಶರೀರದಲ್ಲಿನ ಪಿತ್ತವನ್ನು ಹೋಗಿಸುತ್ತದೆ. ತುಪ್ಪದ ಜಿಡ್ಡು

ಶರೀರದಲ್ಲಿ ಚಳಿಯಿಂದ ಹೊರಟು  ಹೋಗಿರುವ ಅಂಶವನ್ನು ಪೂರೈಸುತ್ತದೆ. ತಿರುಪ್ಪಾವೈಗೀತವನ್ನು ಕುರಿತು ವ್ಯಾಪಕವಾಗಿ ತಿಳಿಸಲು ಈ ಕಿರು ಲೇಖನದಲ್ಲಿ ಆಗದು. ಪದ್ಯ ಹಾಡುವಾಗ ಅದರ ಹೊರಗಿನ ಅರ್ಥಕ್ಕೆ ವ್ಯಾಪದೇಶ ಎಂದೂ ಒಳ ಅರ್ಥ ಪುರಾಣಗಳ ಮಾಹಿತಿ ದೇವರ ಅವತಾರಗಳನ್ನು ಕುರಿತ ವಿವರವೆಲ್ಲ ಸ್ವಾಪ ದೇಶ  ಎಂದು ವಿಸ್ತಾರವಾಗಿ ತಿಳಿಸುತ್ತಾರೆ. ಇದರಿಂದ ಆಂಡಾಳ್ ತಿರುಪ್ಪಾವೈ ಒಂದು ಶ್ರೇಷ್ಠ ಭಕ್ತಿಗೀತೆ ಎನ್ನಬೇಕು.

ಆಂಡಾಳ್ ದೇವಿಯು ತನ್ನ ಭಕ್ತಿಯಿಂದ ಭಗವಂತನನ್ನೇ ತನ್ನ ಪತಿಯಾಗಿ ಸ್ವೀಕರಿಸಿದಳು ಎಂಬುದು ಯೋಗದ ವಿಶೇಷ ಪ್ರಕ್ರಿಯೆ ಶ್ರೀರಂಗದ  ಶ್ರೀರಂಗನ ಸನ್ನಿಧಿಯಲ್ಲಿ ಆಕೆ ಲೀನಳಾದದ್ದು. ಗೋದೆಯ ತಂದೆ ಪೆರಿಯಾಳ್ವಾರಿಗೆ ಸಂತೋಷ ಹಾಗೂ ಮಗಳು ಭಗವಂತನಲ್ಲೇ ಲೀನಳಾದಳಲ್ಲ ಎಂಬ ಅಚ್ಚರಿ.

ಆಂಡಾಳ್ ತಂದೆ ಪೆರಿಯಾಳ್ವಾರರೂ ಮಹಾದೈವಭಕ್ತರು ಸಾತ್ವಿಕರು.  ಶ್ರೀರಂಗಂ ಕ್ಷೇತ್ರ ಸಮೀಪದ ಶ್ರೀವಿಲ್ಲಿಪುತ್ತೂರಿನಲ್ಲಿ ವಾಸಿಸುತ್ತಾ ಅಲ್ಲಿರುವ ವಟಪತ್ರಶಾಯಿ/ಆಲದೆಲೆಯ ಮೇಲೆ ಮಲಗಿರುವ ಬಾಲಕೃಷ್ಣನನ್ನೆ ಧ್ಯಾನಿಸುತ್ತಾ ಪೂಜಿಸುತ್ತಾ ಹಾಗೆಯೇ ಅರ್ಚನೆಯನ್ನು ಮಾಡುತ್ತಿದ್ದರು. ಒಂದು ತುಳಸಿ ತೋಟವನ್ನು ಬೆಳೆಸಿ ಪ್ರತಿನಿತ್ಯ ದೇವರನ್ನು ತುಳಸಿ ಹಾಗೂ ಹೂಗಳಿಂದ ಅಲಂಕರಿಸಿ ತಮ್ಮ ಪಾಶುರಗಳನ್ನು ಹಾಡುತ್ತಿದ್ದರು. ಒಂದು ದಿನ ತುಳಸಿ  ತೋಟದಲ್ಲಿ ಓಡಾಡುವಾಗ ಅಲ್ಲಿಯೇ ಗಿಡದ ಪಾತಿಯಲ್ಲಿ ಒಂದು ಸುಂದರ ಹೆಣ್ಣು ಮಗು ಮಲಗಿದೆ ಆಶ್ವರ್ಯ ಮಗುವನ್ನು ಕೊಂಡೊಯ್ದು ಬೆಳೆಸಿದರು ಅವಳಿಗೆ ಆಂಡಾಳ್ ಭೂದೇವೀ ಇತ್ತ ಕೊಡುಗೆ ಪರಮಾತ್ಮನನ್ನೇ ಭಕ್ತಿಯಿಂದ ಆಳುವ ಪುಣ್ಯವಂತೆ ಎಂದೇ ಆಳ್ವಾರ್ ಭಾವಿಸಿ  ಸಲಹಿದ್ದು ಹಾಗೂ ಆಕೆಗೆ ಎಲ್ಲ ಒಳ್ಳೆಯ ಕಥೆ ಪುರಾಣ ಭಗವಂತನ ವಿಚಾರ ಎಲ್ಲವನ್ನು ತಿಳಿಸಿದ್ದು ಕ್ರಮೇಣ ಗೋದಾದೇವಿ ದೇವರನ್ನೇ ಮದುವೆ ಆಗುತ್ತೇನೆ  ಎಂದು ತಂದೆಗೆ ತಿಳಿಸಿದಳು. ಆಳ್ವಾರರಿಗೆ ಇದು ಆಗುವುದೇ ಎಂಬ ಆಶ್ಚರ್ಯ  ಪೆರಿಯಾಳ್ವಾರರಿಗೆ  ಹೂ ಕಟ್ಟುವ ಕಾರ್ಯ ಮಗಳೇ ನಿರ್ವಹಿಸುತ್ತಾ  ಬಂದಳು, ಆದರೆ ಆದದ್ದಿಷ್ಟು ಹೂ ಮಾಲೆ, ತುಳಸಿಮಾಲೆ ಕಟ್ಟಿ ಅದು ಸುಂದರವಾಗಿದೆಯೇ, ದೇವರಿಗೆ ಇಷ್ಟ ಆಗುವುದೇ  ಎಂದುಕೊಂಡು ತಾನೇ ಏಕೆ ಮೊದಲು ಮುಡಿದು ನಂತರ ತನ್ನ  ಪ್ರೀತಿಯ ದೇವರಿಗೆ ಸಮರ್ಪಿಸ ಬಾರದೇಕೆ ಎನ್ನಿಸಿತು, ಆಳ್ವಾರರಿಗೆ ಇದು ತಿಳಿಯದು. ಒಂದು ದಿನ ಹೂವು, ತುಳಸಿ ಮಾಲೆಯನ್ನು ಮುಡಿಸುವಾಗ ಒಂದು ನೀಳವಾದ ಕೂದಲು ಕಾಣುವುದೇ!

ಆಳ್ವಾರರಿಗೆ ಅಚ್ಚರಿ ಏನೋ ಹೊಳೆದು ಒಂದು ದಿನ ಬೇಗನೇ ಬಂದು ನೋಡುತ್ತಾರೆ. ಆಂಡಾಳ್ ತಾನು ಮೊದಲು ಮುಡಿದ ಹೂವನ್ನು ದೇವರಿಗೆ ಬುಟ್ಟಿಯಲ್ಲಿಟ್ಟು ನಿವೇದಿಸುತ್ತಿದ್ದಾಳೆ! ಅವರಿಗೆ ತುಂಬಾ ವ್ಯಥೆಯಾಯಿತು.  ಆ ದಿನ ನೈವೇದ್ಯ ಮಾಡಲಿಲ್ಲ  ಮೌನದಿಂದ ಇದ್ದರು ಮಗಳಿಗೂ ತಂದೆಯ ನೋವು ತಾನು ಮಾಡಿದ್ದು ತಪ್ಪು ಎಂದೆನ್ನಿಸಿ ಸುಮ್ಮನೆ ಇದ್ದಳು. ಆಶ್ಚರ್ಯ ಕನಸಿನಲ್ಲಿ ಶ್ರೀರಂಗದ ರಂಗ ದೇವರು ಮೈದೋರಿ ನಿಮ್ಮ ಮಗಳು ಅರ್ಪಿಸಿದ ಹೂವು ನನಗೆ ಬಹಳ ಪ್ರಿಯ. ಇನ್ನು ಮುಂದೆ ಹಾಗೆ ಮಾಡಿರಿ  ಆಳ್ವಾರರೇ ಎಂದು ಅಂತರ್ಧಾನನಾದ.



ಅಂದಿನಿಂದ ಆಂಡಾಳ್‌ದೇವಿಗೆ ಶೂಡಿಕುಡುತ್ತ ನಾಚ್ಚಿಯಾರ್ ಹೂವನ್ನು ಮೊದಲು ತಾನು ಮುಡಿದು ಅನಂತರ ದೇವರಿಗೆ ನೀಡಿದ ಶ್ರೇಷ್ಠಳು ಎಂದೇ ಹೆಸರಾಯಿತು. ಕ್ರಮೇಣ  ಆಕೆಗೆ ಮದುವೆ ಮಾಡುವುದು ಹೇಗೆ? ಭಗವಂತ ಶ್ರೀರಂಗನಾಥನೇ ಕನಸಿನಲ್ಲಿ ಆಳ್ವಾರರಿಗೆ ಆದೇಶ ವಿತ್ತ ಮದುವೆ ದಿಬ್ಬಣದಲ್ಲಿ ಆಂಡಾಳ್ ಅನ್ನು ವಧುವಿನ ಹಾಗೆ ಶೃಂಗರಿಸಿ ತನ್ನ ಸನ್ನಿಧಿಗೆ ಕರೆತನ್ನಿರಿ ಎಂಬುದಾಗಿ ಹೇಳಿ ಮುಂದಿನದು ನೀವೇ ಗಮನಿಸುವಿರಂತೆ  ಎಂದು ಹೇಳಿ ಅಂತರ್ಧಾನನಾದ. ಇದು ಹೇಗೆ ಎಂದು ವರ್ಣಿಸಲಾಗದು ನಡೆದದ್ದು ಇಷ್ಟು ಶ್ರೀರಂಗಕ್ಕೆ ದೇವಾಲಯ  ಸನ್ನಿಧಿಗೆ  ಮೆರವಣಿಗೆಯಲ್ಲಿ ವಧುವಾಗಿ ಬಂದ ಆಂಡಾಳ್ ತಂದೆ ಪೆರಿಯಾಳ್ವಾರ್ ಎಲ್ಲರೂ ನೋಡುತ್ತಿದ್ದಂತೆಯೇ ದೇವರ ಪಲ್ಲಂಗವನ್ನೇರಿ ಲೀನಳಾದದ್ದು ಯೋಗದ ವಿಶೇಷ ಪ್ರಕ್ರಿಯೆ ಇದು.

ಈ ಅಲೌಕಿಕ ಘಟನೆ ನಡೆದು ಅನೇಕ ಶತಮಾನಗಳು ಆಗಿವೆ. ಆಂಡಾಳ್ ಹಾಡಿರುವ ತಿರುಪ್ಪಾವೈ ಸುಂದರ ಗೀತೆಯಲ್ಲಿ  ಒಂದೇ ಪಾಶುರ ನಾವು ಇಲ್ಲಿ ಉದಾಹರಿಸುತ್ತಿದ್ದೇವೆ. ಶಿತ್ತ ಮ್  ಶಿರುಹಾಲೇ ವಂದ್ ಉನ್ನೈ ಚೇವಿತ್ತ್ ಉನ್ ಪೊತ್ತಾಮರೈ ಆಡಿಯೇ ಪೋತ್ತು ಮ್  ಪೊರುಳ್ ಕೇಳಾಯ್ ಪೆಟ್ರಮ್ಮೇಯ್ ತುಣ್ಣುಮ್ ಕುಲತ್ತಿಲ್ ಪಿರಂದ್ ನೀ ಕುತ್ತೇ ವಳ್ ಎಂಗಳ್ಳೈ ಕೊಳ್ಳಾಮಲ್ ಪೋಹಾದ್ ಇತ್ತೈಪರೈ ಅಂನ್ರು ಕಾಣೇ ಗೋವಿಂದಾ ಎಟ್ರೈಕ್ಕುಂ ಏಳೇಳುಪಿರವಿಕ್ಕು ಉನ್ನ್ ತಂನ್ನೋಡು  ಉತ್ತೋ ಮೇಯಾವೊಮ್ ಉನಕ್ಕೇನಾಮ್ ಆಳ್ ಚೈವೋಮ್ ಮತ್ತೈನಂ ಕಾಮಂಗಳ್ ಮಾತ್ರೈಲೋರೆಂಬಾವಾಯ್. ಮುಂಜಾವಿನಲ್ಲಿ ನಿನ್ನ ಹೊಂದಾವರೆಯಂಥ ಪಾದ ಸೇವಿಸುತ್ತೇನೆ. ಗೋವಿಂದಾ ನಮ್ಮೆಲ್ಲರ ಪಾಪಗಳನ್ನು ಕ್ಷಮಿಸಿ ಕಾಪಾಡು ತಂದೆ ಎಂಬುದಾಗಿ ಪ್ರಾರ್ಥಿಸುತ್ತಾಳೆ.

ಆಂಡಾಳ್ ಹಾಡಿರುವ ತಿರುಪ್ಪಾವೈ ನಿಜವಾಗಿಯೂ ಭಕ್ತಿ ಗೀತಾ, ಭಕ್ತಿ ಕಾವ್ಯ ಶಾಶ್ವತವಾಗಿ ನಿಲ್ಲುವಂಥದ್ದು.

# ಭಗವದ್ಗೀತೆ ಅದು ಜೀವದ ಭಾವಗೀತೆ

-ಶ್ರೀಮತಿ. ಕೆ.ವಿ. ಪದ್ಮಾವತಿ



‘ಭಗವದ್ಗೀತೆ’ ನಮ್ಮೊಳಗಿನ ಜೀವಕ್ಕೆ ಅಥವಾ ನಮ್ಮೊಳವಾದ ಜೀವಕ್ಕೆ ಭಾವ ತುಂಬಿತು. ಜೀವಕ್ಕೆ ಬೇಕಾದ ಸವಿಯನ್ನು ಪರಿಚಯಿಸಿತು. ಹೊರಬವಣೆಯಲ್ಲಿ ಬೇಯುತ್ತಿದ್ದ ಜೀವಗಳಿಗೆ ‘ಹಾಯ್ ! ತಂಪು ತಂಪು’ ಎನ್ನುವಂತಹ ಜೀವ ಜಲವನ್ನು ಸುರಿಸಿತು.ತನಗೆ ತನ್ನ ಪರಿಚಯವನ್ನು ನೀಡಿತು. ಮರೆತ ಗುರಿಯನ್ನು ನೆನಪಿಸಿತು, ಕಾಣದ ದಾರಿಗೆ ಕೈದೀವಿಗೆಯಾಯಿತು. ಹಾದಿಯಿಲ್ಲದಲ್ಲಿ ಮಹಾಮಾರ್ಗವನ್ನು ನಿರ್ಮಿಸಿತು. ದಾರಿಯ ಮುಳ್ಳುಗಳನ್ನು ಸುಮವಾಗಿಸಿತು. ಕೆಡುಕಿನ ಕಲ್ಲನ್ನು ಒಳಿತಿನ ಬೀಜ ಮೊಳಕೆಯೊಡೆಯುವ ಸಾರವತ್ತಾದ ಮಣ್ಣನ್ನಾಗಿಸಿತು.

ಅದೊಂದು ಯುದ್ಧಭೂಮಿ. ಗೆಲುವಿನ ತೀವ್ರ ಹಂಬಲದೊಂದಿಗೆ ಎರಡೂ ಪಕ್ಷದಲ್ಲಿ ಸೇನಾ ಜಮಾವಣೆಯಾಗಿದೆ. ಅದೇನು ಸಾಮಾನ್ಯ ಸಮರವಲ್ಲ. ಎರಡು ವ್ಯಕ್ತಿಗಳ ಎರಡು ಕುಟುಂಬಗಳ ಅಥವಾ ಎರಡು ದೇಶಗಳ ನಡುವಣ ಸಂಘರ್ಷವಲ್ಲ ಅದು ಇಡೀ ಜಗತ್ತಿಗೆ ಜಗತ್ತೇ ಎರಡು ಬಣವಾಗಿ ನಿಂತ ಮಹಾಯುದ್ಧ.

ಯುದ್ಧಾರಂಭದ ಘೋಷಣೆಯಾಗುತ್ತದೆ. ಇನ್ನೇನು ಮುಂದಿನ ಕ್ಷಣದಲ್ಲಿ ಶಸ್ತ್ರಾಸ್ತ್ರಗಳು ಬೆಂಕಿಯ ಮಳೆ ಸುರಿಸಬೇಕು. ಅದಕ್ಕಾಗಿ ಒಂದು ಪಕ್ಷದ ಸಮರವೀರ, ಇಡೀ ರಣಾಂಗಣ ಕೇಂದ್ರ ಬಿಂದುವಾದ ಸಮರವೀರ,ತನ್ನ ಯುದ್ಧ ವಾಹನವನ್ನು ಸೈನ್ಯದ ಮುಂಚೂಣೆಗೆ ಕೊಂಡೊಯ್ಯಲು ಸಾರಥಿಗೆ ಸೂಚಿಸುತ್ತಾನೆ.

ಇನ್ನೇನು ಆತ ಬಾಣದ ಮಳೆಗೆರೆಯಲು ಶಸ್ತ್ರವನ್ನು ಮೇಲೆತ್ತುತ್ತಾನೆ ಎಂದು ಕೊಳ್ಳುವಾಗ ಅಚ್ಚರಿಯೊಂದು ಸಂಭವಿಸುತ್ತದೆ. ಅಪ್ರತಿಮ ಯೋಧ ಶಸ್ತ್ರತ್ಯಾಗ ಮಾಡಿಬಿಡುತ್ತಾನೆ. ನಾನು ಯುದ್ಧ ಮಾಡಲಾರೆ ಎನ್ನುತ್ತಾನೆ, ತನ್ನ ವಾಹನವನ್ನು ನಡೆಸುವಾತನನ್ನು ಪ್ರಶ್ನಿಸತೊಡಗುತ್ತಾನೆ, ಅವನು ಉತ್ತರಿಸತೊಡಗುತ್ತಾನೆ, ನಡೆಸಿದವ ಗುರುವಾಗುತ್ತಾನೆ, ನಡೆದವ ಶಿಷ್ಯನಾಗುತ್ತಾನೆ.

ಅವರಿಬ್ಬರ ಆ ಯುದ್ಧಭೂಮಿಯ ಮಾತುಕತೆ ಸಹಸ್ರ ಸಹಸ್ರ ಸಂವತ್ಸರಗಳ ಅನಂತರವೂ ನಿತ್ಯನೂತನವಾಗಿಯೇ ಉಳಿದು ಬಿಡುತ್ತದೆ. ಹೌದು! ನೀವಂದುಕೊಂಡಂತೆ ಇದು ಭಗವದ್ಗೀತೆ ಕತೆ.

ಹೀಗೆ ಸಾಧ್ಯವೇ? ಆಶ್ರಮದಲ್ಲಿಯೋ,ಗುರುಕುಲದಲ್ಲಿಯೇ, ಜ್ಞಾನಕೇಂದ್ರದಲ್ಲಿಯೋ ತಂಪಾಗಿ ಕುಳಿತಾಗ ನಡೆಯಬಹುದಾದ ಜೀವನ ನಿಷ್ಕರ್ಷೆ ಸಾವಿನ ಬಯಲಲ್ಲಿ ನಡೆಯಬಹುದೇ? ಬಹುದೇ, ಬಾರದೇ ಎನ್ನಲೆಲ್ಲಿ ಅವಕಾಶ? ನಡೆದದ್ದಂತೂ ಇತಿಹಾಸ ಕಂಡ ಸತ್ಯ. ಆ ಸತ್ಯ ಇಂದಿಗೂ ಪಥ್ಯ ನಾಳೆಗೂ ನಿತ್ಯ ಇದು ಭಗವದ್ಗೀತೆಯ ವೈಶಿಷ್ಟ್ಯ.

‘ಭಗವದ್ಗೀತೆ’ ಯ ಹುಟ್ಟು ವಿಶಿಷ್ಟ ಸಂದರ್ಭದಲ್ಲಿ ಎಂದ ಮಾತ್ರಕ್ಕೆ ಅದು ಇಂದಿಗೆ ಪ್ರಸ್ತುತವಾಗಬೇಕ ಎಂದೇನೂ ಇಲ್ಲವಲ್ಲ! ಇಂದು ಅದರ ಕುರಿತು ಮಾತನಾಡಹೊರಡುವುದು ಗತ ಇತಿಹಾಸದ ಚರ್ವಿತ ಚರ್ವಣಕ್ಕಾಗಿಯಲ್ಲ. ನಮ್ಮಜ್ಜ ಹತ್ತೂರನ್ನು ಅಳುತ್ತಿದ್ದರು ಎಂದರೆ ನಮಗಾಗುವ ಲಾಭವೇನು? ನಮ್ಮ ಬದುಕಿನ ಬೇಕು- ಬೇಡಗಳಿಗೆ ಅದು ಉಪಯುಕ್ತವಾದರೆ ಅದರ ಕುರಿತು ಮಾತನಾಡಬೇಕು. ಇಲ್ಲವಾದರೆ ಸುಮ್ಮನೇಕೆ ಮಾತು? ಗೀತೆ ಇಂದಿಗೂ ಪ್ರಸ್ತುತ ನಾಳೆಗೂ ಬೇಕಾದದ್ದೇ ಯಾಕೆಂದರೆ ಭಗವದ್ಗೀತೆ’ ಅದು ಜೀವದ ಭಾವಗೀತೆ ಅಂತರಂಗದ ಭಾವ ವೀಣೆಯನ್ನು ಮೀಟುವ ವೈಣಿಕ ಹೊರ ಬದುಕಿನೊಂದಿಗೆ ಒಳವನ್ನು ನೇಯ್ದು ಸುಂದರ ಮಾಲಿಕೆ. ಇದೇ ಅದು ಎಂದಿಗೂ ಬೇಕಾದದ್ದು ಅನ್ನುವುದಕ್ಕೆ ಕಾರಣ.

ಹತಾಶನಾಗಿ ಕುಳಿತಿದ್ದ ಅರ್ಜುನ ಎದ್ದುನಿಂತು ಜೀವನ ರಣಾಂಗಣಕ್ಕೆ ಅಭಿಮುಖನಾದದ್ದು ಇದೇ ಕಾರಣಕ್ಕೆ ಸಂಬಂಧದ ಭ್ರಮೆಯನ್ನು ಅದು ಕಿತ್ತೊಗೆಯಿತು; ಹಾಗೆಂದು ಅರ್ಜುನ ಎಲ್ಲ ಸಂಬಂಧಗಳನ್ನೂ ಕಿತ್ತೊಗೆದ ಕೆಟ್ಟವ ಆಗಲಿಲ್ಲ. ಬದುಕು ಹುಸಿಯೆಂದಿತು. ಹೀಗೆಂದು ಅರ್ಜುನ ಬಿಲ್ಲನ್ನು ಬಿಸುಟು ಕಾಡಿನ ದಾರಿ ಹಿಡಿಯಲಿಲ್ಲ. ಕಾರ್ಯದ ಯಶಸ್ಸು ನಿನ್ನದಲ್ಲ ಎಂದಿತು ಆದರೆ ಯುದ್ಧ ಮಾಡುವುದಿಲ್ಲ ಎಂದವ ಕಾದಾಡಿದ. ಇದು ಗೀತೆಯ ಹಿರಿಮೆ. ಅದು ನಶ್ವರದೊಳಗಿನ ಶಾಶ್ವಸತೆಯನ್ನೂ, ಶಾಶ್ವತದೊಳಗಿನ ನಶ್ವರತೆಯನ್ನೂ ಕಣ್ಣೆದುರು ನಿಲ್ಲಿಸುತ್ತದೆ. ಇದರಿಂದಾಗಿ ಅರ್ಜುನ ಸಂಬಂಧಿಗಳಾದ ಕೌರವರ ಮೇಲೆ ಧಾಳಿಯನ್ನೂ ಮುಂದುವರಿಸಿದ ಲೋಕದ ಸಂಬಂಧವನ್ನೂ ಉಳಿಸಿಕೊಂಡ ಅಭಿಮನ್ಯು ಅಳಿದಾಗ ಕಣ್ಣೀರು ಹರಿಯದೇ ಇರಲಿಲ್ಲ ಮಹಾಪ್ರಸ್ಥಾನಕ್ಕೆ ಹೊರಟಾಗ ಕಾಲಬುಡದಲ್ಲಿದ್ದ ಸಮಗ್ರ ಭೂಮಂಡಲದ ಐಶ್ವರ್ಯವೂ ಕಾಲ ಕಸವಾಯಿತು.

ಬದುಕಿಗೆ ಬೇಕಾದದ್ದು ಇದೇ. ಬದುಕನ್ನು ಕಟ್ಟಿ ಕೊಂಡಿರಬೇಕು ಬಿಟ್ಟಂತೆಯೂ ಇರಬೇಕು. ಅದು ಮನುಷ್ಯನ ಇಂದಿನ ಸಮಸ್ಯೆಗಿರುವ ಏಕೈಕ ಪರಿಹಾರ. ಇಂದಿನ ಎಂದೇಕೆ? ಎಂದೆಂದಿನ ಮನುಷ್ಯನ ಸಮಸ್ಯೆಗೂ ಇದೇ ಪರಿಹಾರ. ಯಾಕೆಂದರೆ ಮನುಷ್ಯನ ಸಮಸ್ಯೆಯೇ ಅದು. ಆತ ಎಲ್ಲವನ್ನೂ ಕಟ್ಟಿಕೊಂಡಿದ್ದಾನೆ. ತಾನೇ ಎಲ್ಲವನ್ನೂ ಮಾಡು ತ್ತಿದ್ದೇನೆ ಎಂದು ಕೊಂಡಿದ್ದಾನೆ. ತನ್ನ ಯಶಸ್ಸಿಗೆ ಸಂಪತ್ತೆಲ್ಲ ತನಗಾಗಿಯೇ ಇದೆ ಎಂದು ಕೊಂಡಿದ್ದಾನೆ.ಇದೆಲ್ಲದರ ಪರಿಣಾಮವಾಗಿ ಏನೆಲ್ಲ ಬೇಕು ಎಂದು ಬಯಸುತ್ತಾನೆ. ಬಯಸಿದ್ದನ್ನು ಪಡೆದುಕೊಳ್ಳಲು ಮಾಡ ಬಾರದ್ದನ್ನೆಲ್ಲ ಮಾಡುತ್ತಾನೆ. ದ್ವೇಷಿಸುತ್ತಾನೆ, ಕಡಿಯುತ್ತಾನೆ, ಕೊಲ್ಲುತ್ತಾನೆ, ಭೂಮಿಯನ್ನೇ ಅಗೆಯುತ್ತಾನೆ. ಗಾಳಿಯನ್ನೂ ಮಲಿನಗೊಳಿಸುತ್ತಾನೆ. ನೀರಿಗಾಗಿ ಕಚ್ಚಾಡುತ್ತಾರೆ. ಆಕಾಶದಲ್ಲೂ ಗಡಿರೇಖೆ ಎಳೆಯುತ್ತಾನೆ ಇದು ತಾನೇ ಇಂದಿನ ಸಮಸ್ಯೇ ! ಸಮಾಜಚಿಂತಕರು ಚಿಂತಿತರಾಗಿರುವುದು ಇದಕ್ಕಾಗಿಯೇ ತಾನೇ ! ಭಗವದ್ಗೀತೆ ಇದೆಲ್ಲಕ್ಕೆ ಪರಿಹಾರ ನೀಡುತ್ತದೆ.

ಜಗತ್ತಿಗೂ ವ್ಯಕ್ತಿಗೂ ಇರುವ ಸಂಬಂಧವನ್ನೂ ವಿಶದಪಡಿಸುತ್ತದೆ. ವ್ಯಕ್ತಿಯ ಸೀಮಿತತೆಯನ್ನು ತೋರಿಸಿ ಕೊಡುತ್ತದೆ ತಾನು ಅಸೀಮನಾಗುವುದನ್ನೂ ಹೇಳಿಕೊಡುತ್ತದೆ. ಆಸೆಗೆ ಸ್ಥಳ ತೋರಿಸುತ್ತದೆ. ವಿಶೇಷವೆಂದರೆ ಯಾವುದೂ ನಿನ್ನದಲ್ಲ ಯಾವುದಕ್ಕೂ ನೀನು ಕಾರಣ ಅಲ್ಲ ಎನ್ನುತ್ತಲೇ ಎಲ್ಲವೂ ನಿನ್ನದೇ ಎಲ್ಲವೂ ನೀನೇ, ಹಾಗಾಗಿ ಕರ್ತವೂ ಮಾಡು ಎನ್ನುತ್ತದೆ. ಎಲ್ಲವೂ ನಿನ್ನದೇ ಕರ್ಮ ಮಾಡು, ಯಾವುದು ನಿನ್ನದಲ್ಲ, ಫಲದ ಅಪೇಕ್ಷೆ ಬೇಡ ಎನ್ನುತ್ತ ಯಶಸ್ಸಿನ ಮಹಾಮಂತ್ರವನ್ನು ಉಪದೇಶಿಸುತ್ತದೆ. ಇದು ಮನುಷ್ಯನಿಗೆ ಬೇಕಾದ ಅರಿವು. ಈ ವಿವೇಕ ಬದುಕನ್ನು ಆಳಿದರೆ ಬದುಕಿನ ಒತ್ತಡ ಇನ್ನಿಲ್ಲವಾಗುತ್ತದೆ. ಜೀವಲೋಕದ ಮೇಲೆ ಆದಮ್ಯ ಪ್ರೀತಿ ಹುಟ್ಟುತ್ತದೆ, ಸಾಮರಸ್ಯ ಮೂಡಿಸುತ್ತದೆ. ಹೀಗಾದಾಗ ಜಗತ್ತು ಶಾಂತಿಯ ಬಯಲಾದೀತು. ಸೌಖ್ಯದ ಅರಮನೆಯಾದೀತು.

ಗ್ರಂಥವೊಂದಕ್ಕೆ 800 ವರ್ಷಗಳಿಂದ ನಿತ್ಯ ಪೂಜೆ ಸಲ್ಲುತ್ತಿರುವ ಅಪೂರ್ವ ನಿದರ್ಶನ ಇಲ್ಲಿದೆ.ಇದು ಕಳೆದ ಸುಮಾರು 800 ವರ್ಷಗಳಿಂದ ಶ್ರೀ ಶ್ರೀಪಾದರಾಜ ಮಠದ ಗುರುಪರಂಪರೆಯು ಶ್ರದ್ಧೆ, ಭಕ್ತಿ ಮತ್ತು ಜತನದಿಂದ ಕಾಪಾಡಿಕೊಂಡು ಬಂದ ಅತ್ಯಮೂಲ್ಯ ಗೀತಾ ಭಾಷ್ಯ ಟೀಕೆ (ಭಾವ ಪ್ರಕಾಶಿಕ) ಗ್ರಂಥದ ಚಿತ್ರ. ಇದನ್ನು ಸಂಸ್ಥಾನದ ಆಸ್ತಿ ಎಂದು ವರ್ಣಿಸಿದರೆ ಉತ್ಪ್ರೇಕ್ಷೆಯಲ್ಲ. ಶ್ರೀ ಶ್ರೀಪದ್ಮನಾಭತೀರ್ಥರು ಸ್ವಹಸ್ತದಿಂದ ಓಲೆ ಗರಿಯಲ್ಲಿ ಬರೆದ ಅತ್ಯಂತ ಪ್ರಾಚೀನ ಭಕ್ತಿ ಭಾವಗೀತೆಯ ಮೂಲಕೃತಿ ಇದು. ಶ್ರೀಪಾದರಾಜ ಮಠದ ಆರಾಧ್ಯದೈವ ಶ್ರೀಗೋಪೀನಾಥನ ಭವ್ಯ ವಿಗ್ರಹದೊಂದಿಗೆ ಇದಕ್ಕೆ ಕಳೆದ ಎಂಟು ಶತಮಾನಗಳಿಂದ ಪ್ರತಿದಿನ ಆಸ್ಥಾನ ಪೂಜೆ ಸಲ್ಲುತ್ತಿದೆ. ಎರಡು X ನಾಲ್ಕು (2X4) ಇಂಚಿನ ಈ ಗ್ರಂಥವನ್ನು ಪೂಜೆಯ ನಂತರ ಭಕ್ತಾದಿಗಳಿಗೆ ತೋರಿಸಿ ಬಂಗಾರದ ಸಂಪುಟದಲ್ಲಿಡುವುದು ಸಂಸ್ಥಾನದ ಸಂಪ್ರದಾಯ.

ಶ್ರೀಪದ್ಮನಾಭತೀರ್ಥರು, ಶ್ರೀಮದಾಚಾರ್ಯರ ಸಾಕ್ಷಾತ್ ಶಿಷ್ಯರು. ಪೂರ್ವಾಶ್ರಮದಲ್ಲಿ ಶೋಭನಭಟ್ಟ ಎಂಬ ಹೆಸರಿನಿಂದ ಪ್ರಸಿದ್ಧರಾದ ಖ್ಯಾತವಿದ್ವಾಂಸರು. ಚತುರ್ದಶ ವಿದ್ಯೆಗಳಲ್ಲಿ ತಲಸ್ಪರ್ಶಿ ಪಾಂಡಿತ್ಯ ಪಡೆದವರು. ತಾರ್ಕಿಕ ಶಿಖಾಮಣಿ ಎನಿಸಿದವರು. ಶ್ರೀಮದಾಚಾರ್ಯರ ಅಪಾರ ವಿದ್ವತ್ತಿಗೆ ಹೃದಯತೆರೆದು, ತಾತ್ವಿಕ ತಲೆಬಾಗಿ ಶಿಷ್ಯತ್ವ ಸ್ವೀಕರಿಸಿದ ಜ್ಞಾನಿ.

ಶ್ರೀಮದಾನಂದತೀರ್ಥರು ರಚಿಸಿದ ಬ್ರಹ್ಮಸೂತ್ರ ಭಾಷ್ಯವನ್ನು ಆಚಾರ್ಯರ ಮುಖದಿಂದಲೇ ಪ್ರಥಮ ಶ್ರೋತೃವಾಗಿ ಕೇಳಿದವರು. ದ್ವೈತ ಸಿದ್ಧಾಂತವನ್ನು ಶಿರಸಾಸ್ವೀಕರಿಸಿ, ಅದರ ಪ್ರಸಾರಕ್ಕೆ ಕಂಕಣಬದ್ಧರಾಗಿ, ಮೊದಲ ಪ್ರಸಾರಕರೂ ಆದವರು. ಶ್ರೀನರಹರಿತೀರ್ಥರು ತಿಳಿಸಿದಂತೆ ಶ್ರೀಮದಾಚಾರ್ಯ ವಿರಚಿತ ಶ್ರೀಬ್ರಹ್ಮಸೂತ್ರಭಾಷ್ಯದ ಪ್ರಥಮ ಟೀಕಾಕಾರರು ಇವರು.

ಕಣ್ವತೀರ್ಥದಲ್ಲಿ ಶ್ರೀಮದಾಚಾರ್ಯರು ಶೋಭನಭಟ್ಟರಿಗೆ ಪರಮಹಂಸಾಶ್ರಮವನ್ನಿತ್ತು ಶ್ರೀಪದ್ಮನಾಭತೀರ್ಥರೆಂದು ವಿಶ್ವಕ್ಕೆ ಪರಿಚಯಿಸಿದರು. ಗೀತಾಭಾಷ್ಯ ಶ್ರೀಮನ್ಮಧ್ವಾಚಾರ್ಯರು ಮೊಟ್ಟ ಮೊದಲ ಭಾಷಾಕೃತಿ ಅದಕ್ಕೆ ರಚಿತವಾದ ಪ್ರಪಥಮ ಟೀಕೆ ಶ್ರೀ ಪದ್ಮನಾಭತೀರ್ಥರ ಗೀತಾ ಭಾಷ್ಯಟೀಕೆಯ ಹಿರಿಮೆ.

### ಭಗವಂತನ ನಾಲ್ನುಡಿ

ಭಾರತೀಯ ಸನಾತನಧರ್ಮದ ಒಟ್ಟು ಸಾರವನ್ನೆಲ್ಲವನ್ನೂ ಭಗವದ್ಗೀತೆಯಲ್ಲಿ ನೋಡಬಹುದು.ಇದು ಮಹರ್ಷಿ ವ್ಯಾಸರಿಂದ ರಚಿತವಾಗಿರುವ ಮಹಾಭಾರತದ ಭೀಷ್ಮಪರ್ವದ 24 ನೆಯ ಅಧ್ಯಾಯದಿಂದ 42 ನೆಯ ಅಧ್ಯಾಯದವರೆಗೆ ಹರಡಿಕೊಂಡಿವೆ. ಗೀತೆಯಲ್ಲಿ ಏಳುನೂರು ಶ್ಲೋಕಗಳಿದ್ದು 18 ಅಧ್ಯಾಯಗಳಲ್ಲಿ ವ್ಯಾಪಿಸಿಕೊಂಡಿದೆ.

ಗೀತೆ ಎಂದರೆ ಹಾಡು ಎಂದು ಅರ್ಥ. ಗೀತೆ ಎಂದರೆ ಭಗವಂತನಾದ ಶ್ರೀ ಕೃಷ್ಣನಿಂದ ಹಾಡಲ್ಪಟ್ಟ, ಹೇಳಲ್ಪಟ್ಟ ಉಪದೇಶದ ಹಾಡೇ ಈ ಭಗವದ್ಗೀತೆ. ಗೀತೆಗೆ ನಮ್ಮ ಪರಂಪರೆಯು ಉಪನಿಷತ್ತಿನ ಸ್ಥಾನವನ್ನು ನೀಡಿದೆ.

ಗೀತೆಯ 18 ಅಧ್ಯಾಯಗಳು 1. ಅರ್ಜುನ ವಿಷಾದ ಯೋಗ, 2. ಸಾಂಖ್ಯಯೋಗ, 3. ಕರ್ಮಯೋಗ, 4.ಜ್ಞಾನ ಕರ್ಮಸನ್ಯಾಸಯೋಗ, 5.ಸನ್ಯಾಸಯೋಗ, 6.ಧ್ಯಾನಯೋಗ, 7.ಜ್ಞಾನವಿಜ್ಞಾನಯೋಗ, 8.ಅಕ್ಷರಬ್ರಹ್ಮಯೋಗ, 9.ರಾಜವಿದ್ಯಾಗುಹ್ಯಯೋಗ,10. ವಿಭೂತಿ ಯೋಗ, 11.ವಿಶ್ವರೂಪ ದರ್ಶನಯೋಗ,12.ಭಕ್ತಿಯೋಗ 13.ಕ್ಷೇತ್ರ ಕ್ಷೇತ್ರಜ್ಞ ಯೋಗ, 14. ಗುಣತ್ರಯವಿಭಾಗಯೋಗ, 15.ಪುರುಷೋತ್ತಮ ಯೋಗ, 16.ದೈವಾಸುರುಸಂಪದ್ವಿಭಾಗಯೋಗ, 17. ಶ್ರದ್ಧಾತ್ರಯ ವಿಭಾಗಯೋಗ, 18.ಮೋಕ್ಷಸನ್ಯಾಸಯೋಗ.

ಭಗವದ್ಗೀತೆಗೆ ಶಂಕರಾಚಾರ್ಯರು ಸೇರಿದಂತೆ ಹಲವಾರು ಆಚಾರ್ಯರು ಭಾಷ್ಯಗಳನ್ನು ರಚಿಸಿದ್ದಾರೆ. ವೇದಾಂತದರ್ಶನದಲ್ಲಿ ಪ್ರಸ್ಥಾನತ್ರಯಗಳಲ್ಲಿ ಮನಸೋತಿರುವ ಹಲವಾರು ವ್ಯಾಖ್ಯಾನಗಳನ್ನು ರಚಿಸಿದ್ದಾರೆ. ಗೀತೆಯ ಪ್ರಭಾವ ಕೇವಲ ನಮ್ಮದೇಶಕಷ್ಟೇ ಸೀಮಿತವಾಗಿಲ್ಲ. ವಿದೇಶಗಳ ಹಲವಾರು ದಾರ್ಶನಿಕರೂ, ಚಿಂತಕರೂ ಗೀತೆಯ ವಿಷಯ ಗಾಂಭೀರ್ಯಕ್ಕೆ ಮನಸೋತಿದ್ದಾರೆ.



# ಈಶಾವಾಸ್ಯ ಉಪನಿಷತ್ತು



- ಪ್ರಭಂಜನ ಗುತ್ತಲ್

ದಶೋಪನಿಷತ್ತುಗಳಲ್ಲಿ ಶ್ರೀ ಹರಿಯ ಮಂಗಳ ಮಹಿಮೆಯನ್ನು ವೇದಪುರುಷನು ಹೇಗೆ ಚಿತ್ರಿಸಿರುತ್ತಾನೆಂಬುವುದನ್ನು ಯಥಾ ಮತಿ ಚಿಂತನೆಯ ವಿಷಯವನ್ನಾಗಿ ಮಾಡಿಕೊಳ್ಳೋಣ. ಪರಬ್ರಹ್ಮ ಜ್ಞಾನವನ್ನು ಉಪದೇಶಿಸುವುದೇ ಉಪನಿಷತ್ತುಗಳ ಮುಖ್ಯೋದ್ದೇಶ, ಈಶಾವಾಸ್ಯ ಉಪನಿಷತ್, ಮೂರ್ತಿಯಲ್ಲಿ ಚಿಕ್ಕದಾದರೂ (ಕೇವಲ 30 ಮಂತ್ರಗಳು) ಕೀರ್ತಿಯಲ್ಲಿ ಹಿರಿದಾದುದು. ಈ ಉಪನಿಷತ್ ಶ್ರೀಹರಿಯು ಸರ್ವತ್ರ ವ್ಯಾಪ್ತನು ಸರ್ವಾಂತರ್ಯಾಮಿಯು, ಸರ್ವಜಗತ್ಪ್ರವರ್ತಕನು, ಸರ್ವಸೃಷ್ಟಿಕರ್ತನು, ಸರ್ವಸಂಹಾರಕನು, ಮತ್ತು ಸರ್ವಜ್ಞನೆಂದು ಬೋಧಿಸುತ್ತದೆ.

ಆಚಾರ್ಯಮಧ್ವರು ದಶೋಪನಿಷತ್ತುಗಳಿಗೂ ಭಾಷ್ಯವನ್ನು ರಚಿಸಿರುತ್ತಾರೆ. ಈ ಭಾಷ್ಯಾಂತರ್ಗತ, ಆದ್ಯಂತ ಮಂಗಳಶ್ಲೋಕಗಳಲ್ಲಿ ಶ್ರೀಹರಿಗುಣಗಳನ್ನು ಛಾಯಾ ಚಿತ್ರದಂತೆ ಹೃನ್ಮನಗಳಲ್ಲಿ ಮೂಡಿ ಮೋದ ಕೊಡುವಂತೆ ಹಾಡಿರುತ್ತಾರೆ.

ನಿತ್ಯಾನಿತ್ಯಜಗದ್ಧಾತ್ರೇ ನಿತ್ಯಾಯ ಜ್ಞಾನಮೂರ್ತಯೇ।
ಪೂರ್ಣಾನಂದಾಯ ಹರಯೇ ಸರ್ವಯಜ್ಞಭುಜೇ ನಮಃ॥
ಯಸ್ಮಾದ್ ಬ್ರಹ್ಮೇಂದ್ರರುದ್ರಾದಿದೇವತಾನಾಂ ಶ್ರಿಯೋಽಪಿ ಚ॥
ಜ್ಞಾನಸ್ಫೂರ್ತಿಃ ಸದಾ ತಸ್ಮೈ ಹರಯೇ ಗುರವೇ ನಮಃ॥

ಚೇತನಾಚೇತನ ಜಗತ್ಪೋಷಕನೂ, ಅನಿತ್ಯತ್ವ, ದೇಹ ಹಾನಿ, ದುಃಖಪ್ರಾಪ್ತಿ ಮತ್ತು ಅಪೂರ್ಣತಾಗಳೆಂಬ ಚತುರ್ವಿಧನಾಶರಹಿತನೂ, ಜ್ಞಾನಾನಂದಾದಿ ದೇಹವುಳ್ಳವನೂ, ಸಂಪೂರ್ಣ ಸುಖರೂಪಿಯೂ, ಸಕಲ ಯಜ್ಞಫಲಗಳನ್ನು ಭುಂಜಿಸತಕ್ಕವನೂ ಆದ ಶ್ರೀಹರಿಯೇ ನಿನಗೆ ಅನಂತ ನಮಸ್ಕಾರಗಳು, ಯಾರಿಂದ (ಯಾವ ಪರಮಾತ್ಮನಿಂದ) ಬ್ರಹ್ಮ, ರುದ್ರ, ಇಂದ್ರಾದಿ ಸಮಸ್ತ ದೇವತೆಗಳೂ ಹಾಗೂ ಶ್ರೀಮಹಾಲಕ್ಷ್ಮೀದೇವಿಯೂ ಸಹ ವಿಶೇಷ ಜ್ಞಾನಾವಿರ್ಭಾವವನ್ನು ಸರ್ವದಾ ಹೊಂದುತ್ತಾರೆಯೋ ಅಂತಹ ಜ್ಞಾನೋಪದೇಶಕನಾದ (ಗುರುವೂ ಆದ) ಶ್ರೀಹರಿಗೆ ಅನಂತ ನಮಸ್ಕಾರಗಳು ಆಚಾರ್ಯ ಮಧ್ವರು ಪ್ರತಿಪಾದಿಸಿರುವ ಶ್ರೀಹರಿಯ ಗುಣಗಳು ಎಷ್ಟು ಅಪ್ಯಾಯಮಾನವಾಗಿ ಹೃದಯಾಂತರಾಳವನ್ನು ಹೊಕ್ಕು ಅಂತಃಕರಣದ ಭಕ್ತಿ ರೂಪ ಹೊರಸೂಸಿ ಭಾವುಕರಲ್ಲಿ (ಅಧಿಕಾರಿಯಲ್ಲಿ) ಶ್ರೀಹರಿಭಕ್ತಿಯನ್ನು ಉದ್ಬೋಧನಗೊಳಿಸಿ, ಮೈ ರೋಮಾಂಚನವಾಗುವಂತೆ ಮಾಡುವುದೆಂದು ಅನುಭವಿಸಿಯೇ ತಿಳಿಯಬಹುದು.

ಉಪನಿಷತ್ತಿನ ಪ್ರಥಮ ಮಂತ್ರ ಹೀಗಿದೆ.

ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್
ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯಸ್ವಿದ್ಧನಂ ॥

ಈ ಒಂದು ಮಂತ್ರವು ಶ್ರೀಹರಿಯ ಮಹಾ ಮಹಿಮೆಯನ್ನು ಉದ್ಘೋಷಿಸುತ್ತದೆ. ಈ ಜಗತ್ತು ಶ್ರೀಹರಿಯ ಆವಾಸ

ಸ್ಥಾನ ಅದರಲ್ಲಿ ಅವನು ಅಂತರ್ಗತನಾಗಿ ಅಣುರೇಣು ತೃಣಕಾಷ್ಠಗಳಲ್ಲಿ ಪರಿಪೂರ್ಣನಾಗಿರುತ್ತಾನೆ. ಪ್ರಕೃತಿಯ ಆಶ್ರಯವನ್ನು ಹೊಂದಿರುವ ಈ ಜಗತ್ತಿಗೆ ಶ್ರೀ ಹರಿಯೇ ಸರ್ವಾಧಾರನು, ಅಂದರೆ ಅವನೊಬ್ಬನೇ ಸರ್ವಸ್ವತಂತ್ರ. ಇತರ ಸಕಲ ವಸ್ತುಗಳು ಅಸ್ವತಂತ್ರ ಮತ್ತು ಅವನ ಅಧೀನ.

ಸ್ವತಂತ್ರ ಪ್ರಭುವಾದ ಶ್ರೀಹರಿಯ ಇಚ್ಛಾನುಸಾರ ದೊರಕಿದುದರಲ್ಲಿ, ಅಂದರೆ ಅವನು ಕೊಟ್ಟಿದ್ದರಿಂದ ಜೀವನು ಸಂತುಷ್ಟನಾಗಿರಬೇಕು.

ಉಪನಿಷತ್ ಮುಂದೆ ಹೇಳುತ್ತದೆ. ಪರಬ್ರಹ್ಮ ಸ್ವರೂಪವು ನಿರ್ಭಯತೆಯಿಂದ ಪೂರ್ಣವಾದುದು, ಅದು ಸ್ವತಂತ್ರವಾದುದು, ಪ್ರಧಾನವಾದುದು, ವಾಯು ವೇಗ ಮನೋವೇಗಗಳನ್ನು ಮೀರಿದುದು. ರಮಾ ಬ್ರಹ್ಮಾದಿಗಳೂ ಸಹ ಬ್ರಹ್ಮಸ್ವರೂಪವನ್ನು (ಶ್ರೀಹರಿಯನ್ನು) ಸಾಕಲ್ಯೇನ ತಿಳಿಯಲಾರರು, ಅವನು ಸನಾತನ ಸ್ವಭಾವತಃ ಸರ್ವಜ್ಞ ಶಿಖಾಮಣಿಯು. ಅವನು ಅಚಿಂತ್ಯ ಶಕ್ತಿಯುತನೂ, ಸರ್ವವ್ಯಾಪ್ತನೂ ಆದುದರಿಂದ ಒಂದು ಕಡೆ ಇದ್ದುಕೊಂಡೇ ಓಡುವವನನ್ನು ಅತಿಕ್ರಮಿಸುತ್ತಾನೆ. ಇಂತಹ ಪರಬ್ರಹ್ಮನಲ್ಲಿ ಮುಖ್ಯಪ್ರಾಣದೇವನು ಸಕಲ ಪ್ರಾಣಿಗಳು ಮಾಡಿದ ಸರ್ವಕರ್ಮಗಳನ್ನೂ ಅರ್ಪಿಸುತ್ತಾನೆ.

ಆದ್ದರಿಂದ ಸ್ವತಂತ್ರತ್ವ ಸರ್ವಗತತ್ವ ಮತ್ತು ಸರ್ವವ್ಯಾಪ್ತಿತ್ವಗಳು ಪರಬ್ರಹ್ಮನ ಸ್ವರೂಪಲಕ್ಷಣಗಳು ಆದುದರಿಂದಲೇ ಸಕಲ ಚೇತನಾಚೇತನ ಜಗತ್ತು ಶ್ರೀಹರಿಯ ವಶದಲ್ಲಿರುತ್ತದೆ ಮತ್ತು ಅವನಿಗೆ ಹೆದರುತ್ತದೆ. ಅವನು ಮಾತ್ರ ಯಾರಿಗೂ ಹೆದರುವುದಿಲ್ಲ. ಅವನೇ ಸ್ವತಂತ್ರ ಸಾರ್ವಭೌಮನು. ಅವನು ದ್ವೇಷಿಗಳಿಗೆ ದೂರ, ಭಕ್ತರಿಗೆ ಬಹಳ ಹತ್ತಿರ.

ಜಗತ್ತಿನ ಒಳಹೊರಗೆ ಸರ್ವತ್ರ ವ್ಯಾಪಿಸಿ, ಜೀವರು ಮಾಡುವ ಪುಣ್ಯಪಾಪಾದಿ ಕರ್ಮಗಳಿಗೆ ಪ್ರೇರಕನಾಗಿರುತ್ತಾನೆ. ಆದುದರಿಂದಲೇ ಸಕಲ ಚರಾಚರ ಪ್ರಪಂಚಕ್ಕೆ ಆಶ್ರಯನೂ, ನಿಯಾಮಕನೂ ಆಗಿರುತ್ತಾನೆ.

ಹೀಗೆ ಶ್ರೀ ಹರಿಯು ಸಕಲ ಭೂತಾಶ್ರಯನಾಗಿ ಸರ್ವಾಂತರ್ಗತನಾಗಿ ಸರ್ವತ್ರ ವ್ಯಾಪ್ತನಾದುದರಿಂದ ಸರ್ವ ಪ್ರೇರಕನೆಂಬ ಸುದೃಢ ಜ್ಞಾನವುಳ್ಳ ಅಧಿಕಾರಿಯು ತನ್ನ ರಕ್ಷಣೆಗಾಗಿ ಪಯತ್ನ ಪಡುವುದೇ ಇಲ್ಲ ಶ್ರೀಹರಿಯೇ ಸರ್ವ ರಕ್ಷಕನೆಂದು ನಿರ್ಭಯವಾಗಿರುವನು. ಅನಾದಿಕಾಲದಿಂದ ಸರ್ವ ಪ್ರಾಣಾಧಾರಕನಾಗಿ, ಸರ್ವತ್ರ ನೆಲಸಿರುವ ಶ್ರೀ ಹರಿಯ ರೂಪಗಳು ಪರಸ್ಪರ ಅಭಿನ್ನವಾದವುಗಳು, ಅಂದರೆ ಅವನು ಸ್ವಗತ ಭೇದವಿವರ್ಜಿತನು.

ಶ್ರೀಹರಿಯ ಮಹಿಮೆಯನ್ನು ವೇದಪುರುಷನು ಹೀಗೆ ವರ್ಣಿಸುತ್ತಾನೆ,

ಸ ಪರ್ಯಗಾಚ್ಛು ಕ್ರಮಕಾಯಮವ್ರಣಮ್।
ಅಸ್ನಾವಿರಂ ಶುದ್ಧಮಪಾಪವಿದ್ಧಮ್॥
ಕವಿರ್ಮನೀಷೀ ಪರಿಭೂಃ ಸ್ವಯಂಭೂಃ।
ಯಾಥಾತಥ್ಯತ್ಯೋಽರ್ಥಾನ್ ವ್ಯದಧಾಚ್ಛಾಶ್ವತೀಭ್ಯಃ ಸಮಾಭ್ಯಃ॥

ಈ ವೇದಮಂತ್ರದ ಪ್ರತಿಯೊಂದು ಅಕ್ಷರವೂ ಶ್ರೀ ಹರಿಯ ಅಸದೃಶ ಗುಣಗಳನ್ನು ಪ್ರಕಾಶಪಡಿಸುತ್ತದೆ. ಪರ ಬ್ರಹ್ಮಾಖ್ಯ ಶ್ರೀಹರಿಯು ಶುಕ್ರಂ=ಶೋಕರಹಿತನು, ಸಪ್ತಧಾತುಗಳಿಂದ ನಿರ್ಮಿತವಾದ ಪಾಪಭೂಯಿಷ್ಠ ಸ್ಥೂಲ ದೇಹರಹಿತನು, ಶುದ್ಧಂ=ಸ್ವತಜಗತ್ತನ್ನು ಪವಿತ್ರಗೊಳಿಸುವವನು ಮತ್ತು ತಾನೂ ಪರಮಪವಿತ್ರನಾಗಿರುವವನು.

ಹೀಗೆ ಉಪನಿಷತ್ಪ್ರತಿಪಾದ್ಯನಾದ ಶ್ರೀಹರಿಯ ಮಹಾ ಮಹಿಮೆಯನ್ನು ನಿರೂಪಣೆ ಮಾಡಿ ಶ್ರೀಮದಾನಂದತೀರ್ಥ ಭಗವತ್ಪಾದರು ಅಂತ್ಯಮಂಗಳವನ್ನು ಹಾಡಿ ಶ್ರೀಹರಿ ಗುಣಗಳನ್ನು ಮತ್ತೆ ಸ್ತುತಿಸುತ್ತಾರೆ.

ಪೂರ್ಣಶಕ್ತಿ ಚಿದಾನಂದ ಶ್ರೀತೇಜಃ ಸ್ಪಷ್ಟಮೂರ್ತಯೇ
ಮಮಾಭ್ಯಧಿಕಮಿತ್ರಾಯ ನಮೋ ನಾರಾಯಣಾಯ ತೇ ॥

ದೇವನೇ ! ನೀನು ನನಗೆ ನಿರತಿಶಯೋಪಕಾರಿಯೋ ಸ್ವಾಮಿ ಅತಿಶಯ ಪ್ರೀತಿ ವಿಷಯನೋ, ದೇವ, ಸರ್ವಗುಣ ಸಂಪೂರ್ಣನೂ, ಸರ್ವದೋಷವಿವರ್ಜಿತನೂ ಆದ ನಿನಗೆ ಅನಂತಾನಂತ ಸಾಷ್ಟಾಂಗ ನಮಸ್ಕಾರಗಳು, ದೇವ ದೇವ,





ಧಾರಾವಾಹಿ

# ಶ್ರೀ ವೆಂಕಟೇಶ್ವರ ಸ್ವಾಮಿ ಆಲಯ

## ತಿರುಮಲೆಯ ಆಲಯ ವಿವರ

### ವಿಮಾನಪ್ರದಕ್ಷಿಣ :

ಎರಡನೇ ಪ್ರಾಕಾರ ಗೋಡೆಗಳು, ಒಳಗೋಪುರ ಹಾಗೂ ಗರ್ಭಗುಡಿಯನ್ನು ಆವರಿಸಿರುವ ಮೊದಲ ಪ್ರಾಕಾರದ ಗೋಡೆಗಳ ನಡುವೆಯಿರುವ ಆಯತಾ ಕೃತಿಯ ಸ್ಥಳವಿದು. ಒಳಗೋಪುರದ ನಂತರದ ಹಾಗೂ ತಿರುಮಾಮಣಿ ಮಂಟಪದ ನಡುವಿನ ಅಗಲ 18 ಅಡಿಗಳೂ ಇಲ್ಲ. ಮುಖ್ಯ ವಿಮಾನವನ್ನು ಹೊಂದಿದ ಕಟ್ಟಡದೊಡನೆಯೇ ಹಲವಾರು ಕಲ್ಲಿನ ನಿರ್ಮಾಣಗಳನ್ನೂ, ಗುಡಿಗಳನ್ನೂ, ಮಂಟಪಗಳನ್ನೂ, ವಿಮಾನಪ್ರದಕ್ಷಿಣೆಯನ್ನೂ ಒಳಗೆ ಹೊಂದಿದ್ದು,ಮುಖ್ಯ ಆಲಯದ ಹೊರಗೆ ತುಸುವೇ ಸ್ಥಳಾಕಾಶವಿದೆ. ಅಂಗ ಪ್ರದಕ್ಷಿಣೆಯನ್ನು ಮಾಡುವ ಹರಕೆ ಹೊತ್ತಿರುವ ಭಕ್ತರು ಈ ಪ್ರದಕ್ಷಿಣಾಪಥದಲ್ಲಿಯೇ ಅಂಗಪ್ರದಕ್ಷಿಣೆ ಮಾಡುವರು.

ವಿಮಾನ ಪ್ರದಕ್ಷಿಣೆಯ ಹೊರಸುತ್ತಿನಲ್ಲಿರುವ ಮಂಟಪಗಳಲ್ಲಿ ವಿಜಯನಗರದ ಕಾಲದ ಮಾದರಿ ಕಂಬಗಳಿದ್ದು, ಸುಂದರವಾದ ಕಂಸ,ಪೂತನಿ,ಬಿಲ್ಲಿನಕನ್ಯೆ, ಕೋತಿ, ಒರಳಿಗೆ ಕಟ್ಟಿದ ಕೃಷ್ಣ - ಮುಂತಾದ ಶಿಲ್ಪಗಳಿವೆ. ಈ ಮಂಟಪಗಳಲ್ಲಿ ಪಶ್ಚಿಮ ಮಂಟಪಗಳಲ್ಲಿ ವೇದಪಾರಾಯಣ ಮಾಡುವರು. (ಇದೀಗ ಇಲ್ಲಿ ಯಾತ್ರಿಕರ ಕಾಣಿಕೆಗಳನ್ನು ಲೆಕ್ಕಿಸುವ ಪರಕಾಮಣಿ ನಡೆಯುತ್ತದೆ. ಮಂಟಪಗಳನ್ನು ಗಾಜಿನ ಕೋಣೆಗಳನ್ನಾಗಿ,ಹವಾನಿಯಂತ್ರಿತವಾಗಿಸಲಾಗಿದೆ. ಇದರಿಂದಾಗಿ ಯಾತ್ರಿಕರು ಪ್ರದಕ್ಷಿಣಾಪಥದಲ್ಲಿ ನಡೆಯುವಾಗ ಮಂಟಪದ ಹೊರಗಿನಿಂದ,ಒಳಗಡೆ ಹಣವೆಣಿಸುವ ಕಾರ್ಯವನ್ನು ನೋಡಬಹುದು-ಅನುವಾದಕ) ಈ ಮಂಟಪಗಳಲ್ಲಿಯೇ ಹಲವಾರು ಕೋಣೆಗಳ ವಿಂಗಡನೆಯಾಗಿ,ದೀಪಗಳ ಕೋಣೆ, ಪಲ್ಲಕ್ಕಿ ಕೋಣೆ-ಮೊದಲಾದವುಗಳು ಉಂಟಾಗಿವೆ. ಉತ್ತರದ ಕಡೆಯಲ್ಲಿ ವಿಮಾನ ವೆಂಕಟೇಶ್ವರ ಸ್ವಾಮಿ ದರ್ಶನ ಪೀಠದ ನಂತರ ಸ್ವಾಮಿಯ ಹುಂಡಿಯ ಎದುರು ಇರುವ ಸಂಕೀರ್ತನಾಭಂಡಾರ ವಿಶೇಷವಾಗಿ ಗಮನ ಸೆಳೆಯುತ್ತದೆ. ಕಾರಣ ಇಲ್ಲಿ ಅನ್ನಮಾಚಾರ್ಯರ ಸಂಕೀರ್ತನೆಗಳನ್ನು ಕೆತ್ತಿದ ತಾಮ್ರ ಪಟಗಳನ್ನು ಸಂಗ್ರಹಿಸಿದ್ದು. ಈ ಗೋಡೆಗಳ ಬಾಗಿಲ ಮೇಲೆ ಅನ್ನಮಾಚಾರ್ಯರ ವಿಗ್ರಹವನ್ನು ಕೆತ್ತಲಾಗಿದೆ.

### ಶ್ರೀ ವರದರಾಜ ಆಲಯ:

ಗೋಪುರದ್ವಾರದ ಮೂಲಕ ಒಳಬಂದ ಕೂಡಲೇ ಗೋಪುರದಿಂದ ಏಳು ಅಡಿ ದಕ್ಷಿಣಕ್ಕೆ ಪೂರ್ವದ ಪ್ರಾಕಾರದ ಗೋಡೆಯಿಂದ ಎರಡು ಅಡಿ ದೂರದಲ್ಲಿ 20 ಅಡಿ ಉದ್ದ ಹಾಗೂ 15 ಅಡಿ ಅಗಲದ ಶ್ರೀ ವರದರಾಜಸ್ವಾಮಿ ಆಲಯವಿದೆ. ಎತ್ತರವಾದ ಅಧಿಷ್ಠಾನದಲ್ಲಿ ಅಂತರಾಳ,ಗರ್ಭಗೃಹ, ಗರ್ಭಗೃಹದ ಮೇಲಿನ ವಿಮಾನಗಳೊಡನೆ ಕೂಡಿದ ಆಲಯವಿದು. ವೇಸರ ಶೈಲಿಯಲ್ಲಿದೆ. ಗರ್ಭಗೃಹದ ಗೋಡೆಗಳು ನಾಲ್ಕು ಗೋಡೆಗಂಬಗಳಿಂದ ಕೂಡಿವೆ. ದ್ವಾರದಲ್ಲಿ ಎರಡು ಗೋಡೆಗಂಬಗಳಿದ್ದು,ನಾಸಿಕಾಲಂಕೃತ ಕಪೋತದಿಂದ ಕೂಡಿದ್ದು ಸಿಂಹಲಲಾಟವಿದೆ.

### ಪೋಟ್ಟು ಕೊಠಡಿ:

ವರದರಾಜಸ್ವಾಮಿ ಆಲಯದ ದಕ್ಷಿಣದಲ್ಲಿ ಎರಡೂವರೆ ಅಡಿ ಎತ್ತರದ ತಳಹದಿಯಲ್ಲಿ 61 ಅಡಿ ಉದ್ದ 30 ಅಡಿ ಅಗಲದ ಮುಖ್ಯ ಅಡುಗೆಯ ಮನೆಯಿದೆ. ಆಲಯದ ಎಲ್ಲ ನೈವೇದ್ಯಗಳೂ ಅಡಿಗೆಯಾಗುವುದು ಇಲ್ಲಿಯೇ. ಈಗಲೂ ಇಲ್ಲಿ ಕೇವಲ ಮಣ್ಣಿನ ಪಾತ್ರೆಗಳು ಬಳಕೆಯಲ್ಲಿವೆ. ಬಾಗಿಲಿನಿಂದ ಒಳ ಹೊಕ್ಕರೆ ಒಂದು ಕಿರಿದಾದ ಮಂದಿರದಲ್ಲಿ ಮಡಪಲ್ಲಿ ನಾಚ್ಚಿಯಾರ್ ಎಂಬ ಬಕುಳಾದೇವಿಯ ವಿಗ್ರಹವಿರುವುದು. ಈಕೆ ಶ್ರೀನಿವಾಸನ ತಾಯಿಯಾಗಿದ್ದು ಅಡುಗೆಯ ಮನೆಯಲ್ಲಿನ ಆಗುಹೋಗುಗಳನ್ನು ನೋಡಿಕೊಳ್ಳುವಳೆಂಬ ಪ್ರತೀತಿಯಿದೆ.

### ಬಂಗಾರದ ಬಾವಿ:

ಪೋಟ್ಟು ಕೋಣೆಯ ಈಚೆಗೆ ಅಂಗಳದಲ್ಲಿ ಬಂಗಾರದ ಬಾವಿ ಎಂದು ಪ್ರಸಿದ್ಧವಾಗಿರುವ ಬಾವಿಯಿದೆ. ಆಲಯಕ್ಕೂ, ಅಲ್ಲಿನ ಅಡುಗೆ ಮನೆಗೂ ಬೇಕಾಗುವ ನೀರನ್ನು ಇಲ್ಲಿಂದ

ಕಲ್ಲಿನ ಕಾಲುವೆಗಳ ಮೂಲಕ ಹರಿಯುವಂತೆ ಮಾಡಲಾಗಿದೆ. ಪವಿತ್ರವಾದ ಈ ಬಾವಿಯ ಸ್ಥಳವು ಆಗಮನಿರ್ದೇಶಿತವಾದದ್ದು. ಇಲ್ಲಿನ ನೀರು ಸರಬರಾಜು ಪದ್ಧತಿ,ಅಂದಿನ ವಿಜಯನಗರದ ರಾಜಧಾನಿ ಹಂಪೆಯಲ್ಲಿನ ನೀರಿನ ಸರಬರಾಜು ವ್ಯವಸ್ಥೆಯನ್ನು ನೆನಪಿಗೆ ತರುತ್ತದೆ. ಈಗ ಬಳಕೆಯಲ್ಲಿದೆ ವಿಜಯನಗರ ಸಾಮ್ರಾಜ್ಯಕಾಲದ ಅಪೂರ್ವ ಪದ್ಧತಿಯಿದು. (ಈಗ ಈ ಬಾವಿಯ ನೀರನ್ನು ಬಳಸಲಾಗುತ್ತಿಲ್ಲ. ಇಲ್ಲಿನ ನೀರನ್ನು ಶುದ್ಧೀಕರಿಸುವ ಕಾರ್ಯ ಇದೀಗ ನಡೆದಿದೆ - ಅನುವಾದಕ.)

**ಕಲ್ಯಾಣ ಮಂಟಪ :**

ವಿಮಾನ ಪ್ರದಕ್ಷಿಣಾಪಥದಲ್ಲಿ ಬಂಗಾರದ ಬಾವಿಯಿಂದ ಮುಂದುವರಿದರೆ ಎಡಕ್ಕೆ ನೈಋತ್ಯದ ಮೂಲೆಯಲ್ಲಿ ತನ್ನ ಶಿಲ್ಪಸೌಂದರ್ಯದಿಂದ ಖ್ಯಾತವಾಗಿರುವ ಕಲ್ಯಾಣ ಮಂಟಪವಿದೆ. 80 ಅಡಿ ಉದ್ದ ಹಾಗೂ 36 ಅಡಿ ಅಗಲವಿರುವ ಈ ಮಂಟಪವು ವಾಸ್ತು ಶಿಲ್ಪದ ವಿವರದಲ್ಲಿ ಹೊರಗಡೆ ಇರುವ ತಿರುಮಲರಾಯ ಮಂಟಪವನ್ನು ಹೋಲುತ್ತದೆ. ಇದರ ಪಶ್ಚಿಮದ ಕೋಣೆಯಲ್ಲಿ ಕಪ್ಪುಗ್ರಾನೈಟ್ ಶಿಲೆಯಿಂದ ಮಾಡಿದ ಒಂದು ಚಿಕ್ಕ ಅಂತರ್ ಮಂಟಪವಿದ್ದು ಇದರ ನಾಲ್ಕು ಮೂಲೆಯಲ್ಲೂ, ಮೂರು ಮೂರು ಒಳಗಂಬಗಳನ್ನು ಹೊಂದಿದ ನಾಲ್ಕು ಕಂಬಗಳಿವೆ. ಇದರ ಹಿಂದೆ ಎತ್ತರವಾದ ಯಾಗಶಾಲೆಯಿದೆ.

ಇಲ್ಲಿನ ಕಂಬಗಳು ವೈವಿಧ್ಯಮಯವಾಗಿ ಚೌಕಾಕಾರ ಹಾಗೂ ಷಡ್ಭುಜಾಕಾರದಲ್ಲಿದ್ದು ಕುಸುರಿ ಕೆಲಸದ ಬೋದಿಗೆಗಳನ್ನು ಹೊಂದಿವೆ. ನಾಲ್ಕು ಕಂಬಗಳ ಒಳ ಮಂಟಪವು ಕಪ್ಪು ಶಿಲೆಯಲ್ಲಿ ಅತ್ಯಂತ ನಯವಾದ ಕುಸುರಿ ಕೆಲಸವನ್ನು ಪ್ರಕಟಿಸಿದೆ. ಮೇಲುಛಾವಣಿಯಲ್ಲಿ ಕೆತ್ತಿರುವ ನೃತ್ಯಗಾರ್ತಿಯರು, ಕಂಬಗಳ ಎಲ್ಲ ಮುಖಗಳಲ್ಲೂ ತುಂಬಿರುವ ಕಿರು ಶಿಲ್ಪಗಳೂ ಒಂದು ರೀತಿಯ ಶಿಲ್ಪ ಮಾಧುರ್ಯವನ್ನುಂಟು ಮಾಡಿದೆ. ಹೊಯ್ಸಳರ ಕಾಲದ ಪ್ರಸಿದ್ಧ ಕೆತ್ತನೆಯಿಂದ ಪ್ರಭಾವಿತವಾಗಿರುವಂತಿದೆ- ಇಲ್ಲಿನ ಶಿಲ್ಪದ ಕುಸುರಿ ಗೆಲಸ.

ಕಲ್ಯಾಣ ಮಂಟಪವೂ ಅದರೊಳಗಿನ ಅಂತರ್ ಮಂಟಪವೂ ಅಸಂಖ್ಯ ಉಬ್ಬು ಶಿಲ್ಪಗಳನ್ನು ಹೊಂದಿದ್ದು, ತ್ರಿವಿಕ್ರಮ, ಸುದರ್ಶನ,ಷೋಡಶಕರ ನರಸಿಂಹ,ಹಯಗ್ರೀವ- ಮೊದಲಾದವರ ಶಿಲ್ಪಗಳು ಅತ್ಯುತ್ತಮವಾಗಿವೆ.

ಬ್ರಹ್ಮೋತ್ಸವದ ಧ್ವಜಾರೋಹಣದಿಂದ ಮೊದಲುಗೊಂಡು ದೀಪಾವಳಿಯವರೆಗೆ ಮಲೆಯಪ್ಪಸ್ವಾಮಿಯು ಗರ್ಭಗುಡಿಯನ್ನು ಬಿಟ್ಟು ಇಲ್ಲಿನ ಮಂಟಪದಲ್ಲಿರುತ್ತಾನೆ. ಇದರಂತೆಯೇ ಡಿಸೆಂಬರ್ ತಿಂಗಳಲ್ಲಿನ 20 ದಿನ ನಡೆಯುವ ಅಧ್ಯಯನೋತ್ಸವ ಕಾಲದಲ್ಲೂ ಇಲ್ಲೇ ನೆಲೆಸುವನು. ಉತ್ಸವಗಳಲ್ಲಿನ ಆಸ್ಥಾನಗಳೂ ಇಲ್ಲಿಯೇ ನಡೆಯುತ್ತವೆ.(ಈಗ ಈ ಕಲ್ಯಾಣಮಂಟಪದಲ್ಲಿ ಹುಂಡಿಯ ಚಿಲ್ಲರೆಯನ್ನು ಬೇರ್ಪಡಿಸಿ ಎಣಿಸುವ ಪರಕಾಮಣಿ ನಡೆಯುತ್ತದೆ.ಭಕ್ತರು ಸ್ವಾಮಿದರ್ಶನ ಪಡೆದನಂತರ ತೀರ್ಥ ಶಠಾರಿಯನ್ನು ಪಡೆದು ಇದನ್ನು ಸುತ್ತಿಕೊಂಡು ಪ್ರದಕ್ಷಿಣಾಪಥದ ಹಿಂಭಾಗಕ್ಕೆ ಬರುವಾಗ ಈ ಪರಕಾಮಣಿಯನ್ನೂ ನೋಡಬಹುದು-ಅನುವಾದಕ)

**ರಾಮಾನುಜ ಮಂದಿರ :**

ವಿಮಾನ ಪ್ರದಕ್ಷಿಣಾಪಥದಲ್ಲಿನ ಉತ್ತರದಲ್ಲಿನ ಸಂಕೀರ್ತನ ಭಂಡಾರದ ಬದಿಯಲ್ಲಿ ಶ್ರೇಷ್ಠ ಶ್ರೀವೈಷ್ಣವ ಆಚಾರ್ಯ ಪುರುಷರಾದ ರಾಮಾನುಜರ ಮಂದಿರವಿದೆ. ಈ ಆಲಯದಲ್ಲಿ ಯಾವುದೇ ಸ್ವತಂತ್ರವಾದ ಪೂಜೆ ನಡೆಯದಿದ್ದರೂ ಮೂಲವರಿಗೆ ಸಮರ್ಪಿಸಿದ ಎಲ್ಲ ಪ್ರಸಾದಗಳಲ್ಲಿಯೂ ಪ್ರಥಮವಾದ ಒಂದು ಪಾಲು ಈ ಆಲಯದಲ್ಲಿ ಆಚಾರ್ಯರಿಗಾಗಿ ನೀಡಲಾಗುವುದು. ವಿಶೇಷ ಉತ್ಸವಗಳ ದಿನಗಳಲ್ಲಿ ಆಚಾರ್ಯರಿಗೆ ವಿಶೇಷವಾದ ಗೌರವವನ್ನು ಸಮರ್ಪಿಸಲಾಗುವುದು; ಕಾರಣವೆಂದರೆ ಈ ಆಲಯದ ಪೂಜಾ ವ್ಯವಸ್ಥೆಯನ್ನು ತಿದ್ದಿ ನೇರ್ಪುಗೊಳಿಸಿದವರಲ್ಲಿ ಆಚಾರ್ಯರು ಬಹುಮುಖ್ಯವಾಗಿರುವುದು.

ರಾಮಾನುಜರ ಮಂದಿರದ ವಾಸ್ತುಶಿಲ್ಪವನ್ನು ಗಮನಿಸಿದರೆ ಇದನ್ನು ಹದಿಮೂರನೇ ಶತಮಾನದಲ್ಲಿ ನಿರ್ಮಿಸಿರಬಹುದೆಂದು ತೋರುತ್ತದೆ. ಪ್ರವೇಶ ದ್ವಾರದ ಪಕ್ಕದ ಗೋಡೆಯ ಮೇಲೆ ಪಾಂಡ್ಯರಾಜ ಚಿಹ್ನವಾದ ಎರಡು ಮೀನು ಹಾಗೂ ಗಾಳವನ್ನು ಕೆತ್ತಲಾಗಿದೆ. ಪ್ರಾಯಶಃ ಪಾಂಡ್ಯರಾಜರ ಅಧೀನನಾಗಿ ಯಾದವರಾಯನು ಆಳುತ್ತಿರುವಾಗ ಈ ಮಂದಿರದ ನಿರ್ಮಾಣವಾಗಿರಬೇಕು. ಆದರೆ ಮಂದಿರದ ಮುಂದಿನ ಮುಖ ಮಂಟಪವನ್ನು ಒಂದೆರಡು ಶತಮಾನಗಳ ನಂತರ ವಿಜಯನಗರದರಸರ ಕಾಲದಲ್ಲಿ ನಿರ್ಮಿಸಿರಬಹುದು.

ಆಚಾರ್ಯ ರಾಮಾನುಜರನ್ನು ಪೂಜಾರ್ಹರನ್ನಾಗಿಸಿ ಅವರಿಗಾಗಿ ಒಂದು ಮಂದಿರದ ನಿರ್ಮಾಣವಾದದ್ದು, ಅವರು ತಿರುಮಲೆ-ತಿರುಪತಿಗಳಿಗೆ ಮಾಡಿದ ಅತ್ಯಂತ ಹೆಚ್ಚಿನ ಸೇವೆಯಿಂದಲೇ ಎನ್ನಬಹುದು. ಪರಂಪರೆಯ ಪ್ರಕಾರ ತಿರುಮಲೆ ತಿರುಪತಿಗಳಲ್ಲಿನ ರಾಮಾನುಜ ಮಂದಿರಗಳ ನಿರ್ಮಾಣ ಈ ಶ್ರೇಷ್ಠ ಆಚಾರ್ಯರು ವೈಕುಂಠವಾಸಿಗಳಾದ ಸ್ವಲ್ಪಕಾಲದಲ್ಲಿಯೇ ನಡೆಯಿತು. ರಾಮಾನುಜರಿಗೆ ಸ್ವಾಮಿ ತೀರ್ಥವನ್ನೂ ಪ್ರಸಾದವನ್ನೂ ನಿತ್ಯವೂ ನೀಡುವ ವೈಖಾನಸ ಅರ್ಚಕರ ಹಾದಿಯಲ್ಲಿ ರಾಮಾನುಜಾಚಾರ್ಯರ ಪಾಂಚರಾತ್ರಾಗಮ ಪೂಜಾಪದ್ಧತಿಯೇನೂ ಅಡ್ಡಬರಲಿಲ್ಲ.

**ನರಸಿಂಹಸ್ವಾಮಿ ಆಲಯ:**

ವಿಮಾನ ಪ್ರದಕ್ಷಿಣಾಪಥದ ಈಶಾನ್ಯ ಮೂಲೆಯಲ್ಲಿ ಎತ್ತರವಾದ ತಳಗಟ್ಟಿನಲ್ಲಿ ಕಂಬಗಳಿರುವ ಅಂಗಳದಲ್ಲಿ ಈ ಆಲಯವಿದೆ. ಒಂದು ನಯವಾದ ಕಲ್ಲಿನ ಮಂಟಪದಲ್ಲಿದ್ದು ಪ್ರಾಯಶಃ 15 ನೇ ಶತಮಾನದಲ್ಲಿ ನಿರ್ಮಿತವಾಗಿರಬೇಕು. ಇಲ್ಲಿನ ಕಂಬಗಳ ಮೇಲೆ ನೃತ್ಯದ ಆಸಕ್ತಿದಾಯಕ ನಮೂನೆಗಳನ್ನು ಕಾಣಬಹುದು.

ಕ್ರಿ.ಶ.1469 ರ ಒಂದು ಶಾಸನದಲ್ಲಿ (ಅತಿ ಪ್ರಾಚೀನವಾದ ಉಲ್ಲೇಖ) ಈ ದೈವವನ್ನು ಆಳಗಿಯಸಿಂಗರ್ ಎಂದು ಕರೆದು ಇವರಿಗೆ ಮಾಡಿದ ನಿವೇದನೆಯ ಬಗ್ಗೆ ಹೇಳಲಾಗಿದೆ. (70-ಎ.ತಿ.ತಿ.)ಇನ್ನೊಂದು ಶಾಸನವು ಧನುರ್ಮಾಸದ 30 ದಿನಗಳಲ್ಲಿ, ವಸಂತ ಪಂಚಮಿಯಂದು,ಶ್ರೀರಾಮ ನವಮಿಯ ದಿನದಂದು ಹಾಗೂ ತಿರುಕ್ಕೊಡಿತಿರುನಾಳ್ ಉತ್ಸವದ 7ನೆಯ ದಿನದಂದು ಮಾಡತಕ್ಕ ನಿವೇದನೆಯ ಬಗ್ಗೆ ತಿಳಿಸುತ್ತದೆ.(280 ತಿ.ತಿ.) ಇನ್ನೊಂದು ವಸಂತ ಪಂಚಮಿಯ ನೈವೇದ್ಯದ ಬಗ್ಗೆ ಹೇಳುತ್ತದೆ.(599-ತಿ.ತಿ.)ಕಂದಾಡೈ ರಾಮಾನುಜ ಅಯ್ಯಂಗಾರ್ಯನು ಈ ದೇವರಿಗೆ ತಿರುಮಂಜನಕ್ಕಾಗಿ ಹಾಗೂ ಪಂಗುಣಿ ಅಮಾವಾಸ್ಯೆ ಮತ್ತು ವಸಂತ ಪೂರ್ಣಿಮೆಯ ದಿನಗಳಲ್ಲಿ ನಿವೇದನಕ್ಕೆ ಒದಗಿಸಿದ. (70 ತಿ.ತಿ.)

ಮೊದಲಿಗೆ ಮತ್ತೆರಡು ಕೋಣೆಗಳು-ಚಂದನ ಕೋಣೆ ಹಾಗೂ ಪರಿಮಳ ಕೋಣೆ-ಇದ್ದವಾದರೂ ಈಗ ಇವೆರಡೂ ಇಲ್ಲ.

**ಮುಖ್ಯಾಲಯದ ಸಂಕೀರ್ಣ ನಿರ್ಮಾಣ :**

ಗರ್ಭಗೃಹವನ್ನೊಳಗೊಂಡ ಮುಖ್ಯಾಲಯವು ಹಲವು ನಿರ್ಮಿತಿಗಳನ್ನು ಒಳಗೊಂಡ ಸಂಕೀರ್ಣವಾಗಿದೆ. ಪೂರ್ವದಲ್ಲಿ ತಿರುಮಾಮಣಿ ಮಂಟಪದಿಂದ ಆರಂಭವಾಗಿ ಅನುಕ್ರಮವಾಗಿ ಬಂಗಾರದ ಬಾಗಿಲು, ಸ್ನಪನ ಮಂಟಪ,ರಾಮರ್ ಮೇಡೈ. ಸಾಯಣ ಮಂಟಪ, ಗರ್ಭಗೃಹವನ್ನು ಸೇರುವುದು. ಈ ಸ್ಥಳದ ಒಂದು ಭಾಗ ಉತ್ತರ ದಕ್ಷಿಣಗಳಲ್ಲಿ ಮುಕ್ಕೋಟಿ ಪ್ರದಕ್ಷಿಣದಿಂದ ಆವೃತವಾಗಿ ಒಳಗಡೆ ಚಿತ್ರಗಳಿಲ್ಲದ ದಪ್ಪ ಗೋಡೆಗಳಿಂದ ಆಗಿದೆ. ಮುಕ್ಕೋಟಿ ಪ್ರದಕ್ಷಿಣದ ಉತ್ತರದ ಗೋಡೆ ಸ್ವಲ್ಪ ಉಬ್ಬಕ್ಕಿದ್ದು ಹೆಚ್ಚು ಸ್ಥಳವನ್ನು ಆಕ್ರಮಿಸಿದೆ. ಪ್ರದಕ್ಷಿಣೆಯ ಎರಡೂ ಪಾರ್ಶ್ವಗಳಲ್ಲಿ ಪೂರ್ವಕ್ಕೆ ಸ್ನಪನ ಮಂಟಪ,ತಿರುಮಾಮಣಿ  ಮಂಟಪಗಳು ಮುಂದೆ ಚಾಚಿಕೊಂಡಿವೆ. ಹೀಗಾಗಿ ಉತ್ತರದಿಂದ ನೋಡಿದರೆ ಗುಡಿಯು ಮೂರು ಭಾಗಗಳಾಗಿ  ಕಂಡು ಬರುವುದು.

**ತಿರುಮಾಮಣಿ ಮಂಟಪ:**

ಉತ್ತರ ದಕ್ಷಿಣದ ಕಂಬಗಳ ಮೂರು ಭಾಗವಾಗಿದ್ದು ಮಧ್ಯ ಭಾಗವು ಇತರ ಎರಡು ವಿಭಾಗಗಳಿಗಿಂತ ದೊಡ್ಡದಾಗಿರುವ ಬಯಲು ಮಂಟಪವಿದು. ಮುಂದಿನ ಮತ್ತು ಹಿಂದಿನ ಭಾಗಗಳು ಉಪಾನ, ಪಟ್ಟ, ಪದ್ಮಗಳ, ತ್ರಿಪಟ್ಟಗಳು ಮಟ್ಟಸವಾಗಿ ಹರಡಿದ ಅಧಿಷ್ಠಾನದ ಮೇಲಿದ್ದು ಮತ್ತೊಂದು ಕಡೆ ಗೋಡೆಗಂಬಗಳಿಂದ, ಕಪೋತಗಳಿಂದ ಅಲಂಕೃತವಾಗಿದ್ದು ಸಿಂಹಲಲಾಟ,ನಾಸಿಕಗಳಿಂದ ಕೂಡಿದೆ. ಮಧ್ಯದಲ್ಲಿನ ಕಪೋತದ ಮೇಲೆ ಒಂದು ಅಲಂಕಾರ ಪಟ್ಟಿಕೆಯೂ ಮಕರಗಳ ಸಾಲೂ ಕಂಡುಬರುತ್ತವೆ. ಮಧ್ಯದ ವಿಭಾಗದಲ್ಲಿನ ಕಂಬಗಳಲ್ಲಿ ಎರಡು ಒಳಗಂಭಗಳ ನಡುವೆ ಕೋಷ್ಠಗಳಿವೆ.

ಈ ಮಂಟಪದ ಅತಿ ಪೂರ್ವದಲ್ಲಿ ಸ್ವಾಮಿಯತ್ತ ಮುಖ ಮಾಡಿದ ಗರುಡ ಮಂಟಪವಿದೆ. ಈ ಗರುಡ ಮಂಟಪದ ಹೊರ ಗೋಡೆಯ ಮೇಲೆ ಶಯನಭಂಗಿಯಲ್ಲಿ ವಿಷ್ಣುವಿದ್ದಾನೆ. ತಿರುಮಾಮಣಿ ಮಂಟಪದ ಪಶ್ಚಿಮದ ಕೊನೆಯ ಬಂಗಾರದ ಬಾಗಿಲಿನ ಎದುರಿಗಿರುವ ಈ ಗರುಡ ಮಂಟಪವು ಒರಟಾದ ನಿರ್ಮಾಣವಾಗಿದೆ.

- ಮುಂದುವರೆಯುತ್ತದೆ

**ಅಕ್ಟೋಬರ್ 2024 ತಿಂಗಳ ಪದಪ್ರಶ್ನೆಯ ಉತ್ತರಗಳು**

01. ವ್ಯಾಸರಾಯರು
02. ಜಂಬೂಸವಾರಿ
03. ಶ್ರೀನಿವಾಸನು
04. ಅಕ್ಕಮಾಂಬ
05. ತೆರತೀಯಗರಾದ
06. ಬಾಗೇಪಲ್ಲಿ
07. ಆರು ಅಡಿ
08. ಶಿಲೆಯ ರೂಪದಿಂದ
09. 9 ದಿನಗಳು
10. ಅಡಿಪಡಿ
11. ಗುಂಡ್ಲಪೇಟೆ
12. 9 ದಿನಗಳು
13. ರಾವಣನು
14. ನರಿ
15. ವಿಷ್ಣುವಿಗೆ



# ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಬ್ರಹ್ಮೋತ್ಸವಗಳು

28-11-2024 ರಿಂದ 06-12-2024 ರ ವರೆಗೆ

| ದಿನಾಂಕ | ವಾರ | ಹಗಲು | ರಾತ್ರಿ |
|---|---|---|---|
| 28-11-2024 | ಗುರುವಾರ | ತಿರುಚ್ಚಿ ಉತ್ಸವ, ಧ್ವಜಾರೋಹಣ | ಚಿಕ್ಕಶೇಷವಾಹನ |
| 29-11-2024 | ಶುಕ್ರವಾರ | ದೊಡ್ಡಶೇಷವಾಹನ | ಹಂಸವಾಹನ |
| 30-11-2024 | ಶನಿವಾರ | ಮುತ್ತಿನಚಪ್ಪರವಾಹನ | ಸಿಂಹವಾಹನ |
| 01-12-2024 | ಭಾನುವಾರ | ಕಲ್ಪವೃಕ್ಷವಾಹನ | ಹನುಮದ್ವಾಹನ |
| 02-12-2024 | ಸೋಮವಾರ | ಪಲ್ಲಕಿ ಉತ್ಸವ, ವಸಂತೋತ್ಸವ | ಗಜವಾಹನ |
| 03-12-2024 | ಮಂಗಳವಾರ | ಸರ್ವಭೂಪಾಲವಾಹನ, ಸ್ವರ್ಣರಥೋತ್ಸವ | ಗರುಡವಾಹನ |
| 04-12-2024 | ಬುಧವಾರ | ಸೂರ್ಯಪ್ರಭವಾಹನ | ಚಂದ್ರಪ್ರಭವಾಹನ |
| 05-12-2024 | ಗುರುವಾರ | ರಥೋತ್ಸವ | ಅಶ್ವವಾಹನ |
| 06-12-2024 | ಶುಕ್ರವಾರ | ಚಕ್ರಸ್ನಾನ, ಪಂಚಮೀ ತೀರ್ಥ | ಧ್ವಜಾವರೋಹಣ |

## ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಪುಷ್ಪಯಾಗ

| | | |
|---|---|---|
| 07-12-2024 | ಶನಿವಾರ | ಪುಷ್ಪಯಾಗ |












ತಿರುಮಲೆ ತಿರುಪತಿ ದೇವಸ್ಥಾನಗಳು

# ಧರ್ಮಕರ್ತರ ಮಂಡಲಿ

ತಿರುಮಲೆ ತಿರುಪತಿ ದೇವಸ್ಥಾನಗಳ ನೂತನ ಧರ್ಮಕರ್ತರ ಮಂಡಲಿಯನ್ನು 2024, ನವೆಂಬರ್ ತಿಂಗಳಲ್ಲಿ ಆಂಧ್ರಪ್ರದೇಶ ರಾಷ್ಟ್ರ ಸರ್ಕಾರವು ನಿಯಮಿಸಿದ ನೂತನ ಧರ್ಮಕರ್ತರ ಮಂಡಲಿ



ಶ್ರೀ. ಬಿ.ಆರ್.ನಾಯ್ಡು
ತಿ.ತಿ.ದೇ., ಆಡಳಿತ ಮಂಡಳಿಯ
ಅಧ್ಯಕ್ಷರು



ಶ್ರೀ ಜೆ. ನೆಹರು
ಎಂ.ಎಲ್.ಎ.
ಸದಸ್ಯರು



ಶ್ರೀಮತಿ ವಿ. ಪ್ರಶಾಂತಿ ರೆಡ್ಡಿ
ಎಂ.ಎಲ್.ಎ.
ಸದಸ್ಯರು



ಶ್ರೀ ಎಂ.ಎಸ್.ರಾಜು
ಎಂ.ಎಲ್.ಎ.
ಸದಸ್ಯರು




ಶ್ರೀಮತಿ ಡಾ॥ ಪನಬಾಕ ಲಕ್ಷ್ಮಿ
ಸದಸ್ಯರು



ಶ್ರೀ ಎನ್. ನರಸಿರೆಡ್ಡಿ
ಸದಸ್ಯರು




ಶ್ರೀ ಜೆ.ಪೂರ್ಣ ಸಾಂಬಶಿವರಾವ್
ಸದಸ್ಯರು



ಶ್ರೀ ಎನ್. ಸದಾಶಿವರಾವ್
ಸದಸ್ಯರು



ಶ್ರೀ ವಿ.ಕೃಷ್ಣಮೂರ್ತಿ
ಸದಸ್ಯರು



ಶ್ರೀ ಎ. ಮುನಿ ಕೋಟೇಶ್ವರ ರಾವ್
ಸದಸ್ಯರು



ಶ್ರೀ ಎಮ್. ರಾಜಶೇಖರ್ ಗೌಡ
ಸದಸ್ಯರು



ಶ್ರೀ ಜೆ. ಕೃಷ್ಣಮೂರ್ತಿ
ಸದಸ್ಯರು




ಶ್ರೀ ಆರ್.ಎನ್. ದರ್ಶನ್
ಸದಸ್ಯರು

# ನೂತನ ಧರ್ಮಕರ್ತರ ಮಂಡಲಿ ಸದಸ್ಯರು



ಶ್ರೀ ವಿ.ಎಂ. ಶಾಂತಾರಾಮ್
ಸದಸ್ಯರು



ಶ್ರೀ ಪಿ.ರಾಮಮೂರ್ತಿ
ಸದಸ್ಯರು



ಶ್ರೀಮತಿ ಟಿ. ಜಾನಕಿದೇವಿ
ಸದಸ್ಯರು



ಶ್ರೀ ಬಿ. ಮಹೇಂದರ್ ರೆಡ್ಡಿ
ಸದಸ್ಯರು



ಶ್ರೀಮತಿ ಎ. ರಂಗಶ್ರೀ
ಸದಸ್ಯರು



ಶ್ರೀ ಬಿ. ಆನಂದಸಾಯಿ
ಸದಸ್ಯರು




ಶ್ರೀಮತಿ ಸುಚಿತ್ರಾ ಎಲ್ಲಾ
ಸದಸ್ಯರು



ಶ್ರೀ ಎಸ್. ನರೇಶ್ ಕುಮಾರ್
ಸದಸ್ಯರು




ಶ್ರೀ ಡಾ॥ ಆದಿತ್ ದೇಸಾಯಿ
ಸದಸ್ಯರು




ಶ್ರೀ ಸೌರಭ್ ಹೆಚ್. ಬೋರಾ
ಸದಸ್ಯರು



ಶ್ರೀ ಜಿ. ಭಾನುಪ್ರಕಾಶ್ ರೆಡ್ಡಿ
ಸದಸ್ಯರು



ಶ್ರೀ ಎಸ್.ಸತ್ಯನಾರಾಯಣ, ಐ.ಎ.ಎಸ್.,
ಆಂ. ಪ್ರ.ಹಿಂದೂ ಧಾರ್ಮಿಕ ದತ್ತಿ ಇಲಾಖೆ
ಆಯುಕ್ತರು (ಕಂದಾಯ)
ಕಾರ್ಯದರ್ಶಿ(ಎಫ್.ಎ.ಸಿ.)
ಎಕ್ಸ್-ಅಫಿಷಿಯಾ ಸದಸ್ಯರು



ಶ್ರೀ ಜೆ.ಶ್ಯಾಮಲರಾವ್,ಐ.ಎ.ಎಸ್.,
ತಿ.ತಿ.ದೇ.,
ಕಾರ್ಯನಿರ್ವಹಣಾಧಿಕಾರಿ
ಎಕ್ಸ್-ಅಫಿಷಿಯಾ ಸದಸ್ಯರು



06-11-2024 ರಂದು ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಸ್ವಾಮಿಯವರ ಆಲಯದಲ್ಲಿ ಶ್ರೀ ಬಿ.ಆರ್. ನಾಯ್ಡುರವರು ಪ್ರಮಾಣ ಸ್ವೀಕಾರ ಮಾಡಿದರು, ನಂತರ ಸ್ವಾಮಿಯವರ ದರ್ಶನ ಪಡೆದರು



06-11-2024 ರಂದು ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಶ್ರೀ ಬಿ.ಆರ್.ನಾಯ್ಡುರವರ ಪ್ರಮಾಣ ಸ್ವೀಕಾರದ ನಂತರ ರಂಗನಾಯಕ ಮಂಟಪದಲ್ಲಿ ಸ್ವಾಮಿಯವರ ಪ್ರಸಾದವನ್ನು ಅಧ್ಯಕ್ಷಕ ದಂಪತಿಗಳಿಗೆ ನೀಡುತ್ತಿರುವ ತಿ.ತಿ.ದೇ.,ಕಾರ್ಯನಿರ್ವಹಣಾಧಿಕಾರಿ ಶ್ರೀ ಜೆ. ಶ್ಯಾಮಲ ರಾವ್, ಐ.ಎ.ಎಸ್., ರವರು, ತಿ.ತಿ.ದೇ.,ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಿ.ವೆಂಕಯ್ಯಚೌದರಿ, ಐ.ಆರ್.ಎಸ್., ರವರು



07-11-2024 ರಂದು ತಿರುಮಲೆಯಲ್ಲಿರುವ ಕಾಕುಲ ಮಾನುದಿಬ್ಬ ಡಂಪಿಂಗ್‌ಯಾರ್ಡ್ ಅನ್ನು ತಿ.ತಿ.ದೇ., ಸಿಬ್ಬಂದಿಯರೊಂದಿಗೆ ಪರಿಶೀಲಿಸುತ್ತಿರುವ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಬಿ.ಆರ್. ನಾಯ್ಡು ರವರು,



08-11-2024 ರಂದು ತಿರುಮಲೆಯಲ್ಲಿರುವ ಧರ್ಮಗಿರಿ ವೇದ ವಿಜ್ಞಾನ ಪೀಠವನ್ನು ಸಂದರ್ಶಿಸಿದ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಬಿ.ಆರ್. ನಾಯ್ಡು ರವರನ್ನು ಸ್ವಾಗತಿಸುತ್ತಿರುವ ಪ್ರಿನ್ಸಿಪಲ್ ರವರು




08-11-2024 ರಂದು ತಿರುಮಲೆಯಲ್ಲಿರುವ ಪೆದ್ದಜೀಯರ್ ರವರ ಮಠವನ್ನು ಸಂದರ್ಶಿಸಿದ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಬಿ.ಆರ್. ನಾಯ್ಡು ರವರಿಗೆ ಮಂಗಳಾಶಾಸನ ಪೂರ್ವಕವಾಗಿ ಆಶೀರ್ವದಿಸುತ್ತಿರುವ ಶ್ರೀಶ್ರೀಶ್ರೀ ಪೆದ್ದ ಜೀಯರ್ ಸ್ವಾಮಿಯವರು



08-11-2024 ರಂದು ತಿರುಮಲೆಯಲ್ಲಿರುವ ಎಸ್.ವಿ. ಗೋ ಶಾಲೆಯನ್ನು ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಬಿ.ಆರ್. ನಾಯ್ಡು ರವರು ಸಂದರ್ಶಿಸಿ ಗೋ ಮಾತೆಯ ಸೇವೆಯಲ್ಲಿ ಪಾಲ್ಗೊಂಡರು. ಈ ಕಾರ್ಯಕ್ರಮದಲ್ಲಿ ಎಸ್.ವಿ. ಗೋ ಶಾಲೆಯ ನಿರ್ದೇಶಕರು ಡಾ॥ ಹರನಾಥ ರೆಡ್ಡಿ ಯವರು ಪಾಲ್ಗೊಂಡರು

# ಕುಕ್ಕೆ ಸುಬ್ರಹ್ಮಣ್ಯದಲ್ಲಿ ಜಾತ್ರೆಯ ಸಂಭ್ರಮ



ಪಶ್ಚಿಮಘಟ್ಟಗಳ ತಪ್ಪಲಿನಲ್ಲಿ ತಣ್ಣಗೆ ಮಲಗಿರುವ ಕುಕ್ಕೆ ಶ್ರೀಸುಬ್ರಹ್ಮಣ್ಯದಲ್ಲಿ ಷಷ್ಠಿ ಮಹೋತ್ಸವದ ಸಂಭ್ರಮ ಆರಂಭವಾಗಿದೆ. ಸರ್ಪಸಂಸ್ಕಾರ, ನಾಗಪ್ರತಿಷ್ಠೆ ಮುಂತಾದವುಗಳಿಗೆ ಹೆಸರಾಗಿರುವ ಈ ಕ್ಷೇತ್ರಕ್ಕೆ ಲಕ್ಷಾಂತರ ಮಂದಿ ಭಕ್ತರು ನಾಡಿನ ಒಳಗೂ ಹೊರಗೂ ಇದ್ದಾರೆ. ಕರ್ನಾಟಕ ಸರ್ಕಾರಕ್ಕೆ ಅತ್ಯಧಿಕ ಆದಾಯ ತಂದು ಕೊಡುವ ಈ ದೇವಾಲಯದ ಉತ್ಸವಕ್ಕೆ ಈಗ ಭಕ್ತಾಧಿಗಳ ಮಹಾಪೂರ. ಸುಬ್ರಹ್ಮಣ್ಯ ಗ್ರಾಮ ಮಲೆನಾಡಿನ ಗರ್ಭಸ್ಥಾನ ಎನ್ನಬಹುದು. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೂರ್ವ ಭಾಗದಲ್ಲಿದೆ. ಈ ಊರು ಕೊಡಗು, ಹಾಸನ ಜಿಲ್ಲೆಗಳೊಂದಿಗೆ ಗಡಿಯನ್ನು ಹೊಂದಿದೆ. ಸುತ್ತಲೂ ತಲೆ ಎತ್ತಿ ನಿಂತಿರುವ ಸಹ್ಯಾದ್ರಿ ಬೆಟ್ಟಗಳ ನಿತ್ಯ ಹರಿದ್ವರ್ಣ ಕಾಡುಗಳು ಕ್ಷೇತ್ರವನ್ನು ಬಳಸಿ ಹರಿಯುವ ಪುಣ್ಯನದಿ ಕುಮಾರಧಾರೆ. ಸುಬ್ರಹ್ಮಣ್ಯ ನೆಲೆನಿಂತಿರುವ ಈ ಕ್ಷೇತ್ರ ವಿಶೇಷ ಮೆರಗನ್ನು ನೀಡಿದೆ.

ನಿಸರ್ಗದತ್ತವಾದ ಪ್ರಕೃತಿ ಸೌಂದರ್ಯದ ಮೇರುವೆನಿಸಿದ ಕುಮಾರ ಪರ್ವತದ ತಪ್ಪಲು. ಗ್ರಾಮ್ಯ ವಾತಾವರಣ ಘನವಾದ ಪೌರಾಣಿಕ ಹಿನ್ನೆಲೆಯ ಇಂಥ ಪವಿತ್ರ ಸಾನಿಧ್ಯದಲ್ಲಿ ವಾಸುಕೀ ಸಮೇತನಾಗಿ ಶ್ರೀ ಸುಬ್ರಹ್ಮಣ್ಯನು ನೆಲೆ ನಿಂತ ತಾಣವೇ ಕುಕ್ಕೆ ಸುಬ್ರಹ್ಮಣ್ಯ. ಸಕಲ ದೋಷ ನಿವಾರಕನಾಗಿ ದಿನನಿತ್ಯ ಅಸಂಖ್ಯಾತ ಭಕ್ತಾದಿಗಳಿಂದ ಪ್ರಧಾನ ದೇವತೆಯಾಗಿ ಭಕ್ತ ಸಮುದಾಯವನ್ನು ಹರಸುತ್ತಿದ್ದಾನೆ.

ದುಷ್ಟ ರಾಕ್ಷಸರ ದಮನಕ್ಕಾಗಿ ಜನ್ಮವೆತ್ತಿದ್ದ ಕುಮಾರ ಸ್ವಾಮಿಯು ತಾರಕ, ಸಿಂಹವಕ್ರ, ಗಜಸ ಮತ್ತು ಶೂರ ಪದ್ಮಾಸುರನನ್ನು ಯುದ್ಧದಲ್ಲಿ ಸಂಹರಿಸಿ, ಸಕಲ ರಾಕ್ಷಸ ಕುಲವನ್ನು ನಾಶಮಾಡಿ ಗಣೇಶ. ವೀರಬಾಹು ಪ್ರಮುಖರಾದ ಸೋದರರ ಸಹಿತನಾಗಿ ಕುಮಾರ ಪರ್ವತಕ್ಕೆ ಆಗಮಿಸಿದನು. ದೇವತೆಗಳ ಒಡೆಯನಾದ ಇಂದ್ರನು ತನ್ನ ಮಗಳಾದ ದೇವಸೇನೆಯನ್ನು (ಚಂಪಾ) ಮದುವೆಯಾಗುವಂತೆ ಷಣ್ಮುಖ ಸ್ವಾಮಿಯನ್ನು ಪ್ರಾರ್ಥಿಸಿದಾಗ ಆತ ಸಂತೋಷದಿಂದ ಒಪ್ಪಿ ಮಾರ್ಗಶಿರ ಶುದ್ಧ ಷಷ್ಠಿಯ ದಿನ ಕುಮಾರಧಾರ ತೀರ್ಥದ ತಟದಲ್ಲಿ ವಿವಾಹವಾಗುತ್ತಾನೆ.

**ಶ್ರೀಮತಿ. ಸುಮಚಂದ್ರಶೇಖರ್**

### ತೇರಿನ ಊರಲ್ಲಿ ಸಡಗರ

ಕುಕ್ಕೆ ಸುಬ್ರಹ್ಮಣ್ಯದಲ್ಲಿ ಕಾರ್ತಿಕ ಬಹುಳ ದ್ವಾದಶಿಯಿಂದ ಜಾತ್ರೆ ಆರಂಭಗೊಂಡು ಮಾರ್ಗಶಿರ ಶುದ್ಧ ದ್ವಾದಶಿಯಂದು ಕೊಪ್ಪರಿಗೆ ಇಳಿಯುವುದರೊಂದಿಗೆ ಜಾತ್ರೆ ಮುಕ್ತಾಯ. ಕಾರ್ತಿಕ ಬಹುಳ ಏಕಾದಶಿಯಂದು ಸುಬ್ರಹ್ಮಣ್ಯ ದೇವರ ಗರ್ಭಗುಡಿಯೊಳಗಿನಿಂದ ಮೂಲ ಮೃತ್ತಿಕೆಯನ್ನು ಭಕ್ತಿ ಶುದ್ಧಿಯಿಂದ ತರಲಾಗುವುದು. (ಹುತ್ತದ ಮಣ್ಣು) ಮೃತ್ತಿಕೆಯೇ ಇಲ್ಲಿ ಮೂಲ ಪ್ರಸಾದವಾಗಿರುವುದು ವಿಶೇಷವಾಗಿದೆ.

ಮರುದಿನದಿಂದ ಧಾರ್ಮಿಕ ಆಚರಣೆಗಳು ಆರಂಭಗೊಳ್ಳುತ್ತವೆ. ಮುಂದಿನ 15 ದಿನಗಳಲ್ಲಿ ಕೊಪ್ಪರಿಗೆ ಅನ್ನ ಭಕ್ತರಿಗೆ ಮಹಾಪ್ರಸಾದ. ಕಾರ್ತಿಕ ಅಮಾವಾಸ್ಯೆಯಂದು ಲಕ್ಷದೀಪೋತ್ಸವ. ಅನಂತರ ಪಾಡ್ಯ, ಬಿದಿಗೆ, ತದಿಗೆ, ಚೌತಿ ದಿನಗಳಲ್ಲಿ ಚಂದ್ರಮಂಡಲ ರಥೋತ್ಸವ, ಅಶ್ವವಾಹನ, ಮಯೂರ ವಾಹನೋತ್ಸವ, ಚೌತಿಯಂದು ಹೂವಿನ ತೇರಿನ ರಥೋತ್ಸವ, ಪಂಚಮಿಯಂದು ಪಂಚಮಿ ರಥೋತ್ಸವ ಷಷ್ಠಿದಿನ ಪ್ರಾತಃಕಾಲದ ನಿಶ್ಚಿತ ಶುಭ ಮುಹೂರ್ತದಲ್ಲಿ ಸುಬ್ರಹ್ಮಣ್ಯ ದೇವರ ಹಾಗೂ ಉಮಾಮಹೇಶ್ವರ ದೇವರ ಸಮೇತ ಉತ್ಸವ ಹೊರಟು ಸುಬ್ರಹ್ಮಣ್ಯ ಸ್ವಾಮಿಯು ಬ್ರಹ್ಮರಥದಲ್ಲಿಯೂ, ಉಮಾಮಹೇಶ್ವರ ದೇವರು ಪಂಚಮಿ ರಥದಲ್ಲೂ ರಥಾರೋಹಣವಾಗಿ ಅರ್ಧ ಬೀದಿಯವರೆಗೆ ಪಯಣಿಸಿ ಮತ್ತೆ ಸ್ವಸ್ಥಾನಕ್ಕೆ ಮರಳುತ್ತಾರೆ. ಷಷ್ಠಿಯ ಮರುದಿನ ಕುಮಾರಧಾರಾ ನದಿಯಲ್ಲಿ ಶ್ರೀದೇವರ ಅವಭೃತೋತ್ಸವ, ನೌಕಾವಿಹಾರ ನಡೆಯುತ್ತದೆ. ಬೀದಿಯಲ್ಲಿ ಉತ್ಸವ ಆರಂಭವಾದಂದಿನಿಂದ ಕುಮಾರಧಾರಾ ನದಿಯಿಂದ ದೇವಳದವರೆಗೆ ಉರುಳು ಸೇವೆ (ಬೀದಿ ಮಡೆಸ್ನಾನ) ನಡೆಯುವುದು ಕಾಣಬಹುದಾಗಿದೆ. ಚೌತಿ ಹಾಗೂ ಪಂಚಮಿ ರಥೋತ್ಸವದಂದು ವಿಶೇಷ ಸಿಡಿಮದ್ದಿನ ಪ್ರದರ್ಶನವಿದ್ದು, ಬಾನಂಗಣದಲ್ಲಿ ಚಿತ್ತಾರ ಮೂಡಿಸಿ ಎಲ್ಲರ ಮನಸೂರೆಗೊಳ್ಳುತ್ತದೆ. ಕೊಪ್ಪರಿಗೆ ಇಳಿಯುವ ದಿನದಂದು (ದ್ವಾದಶಿ) ಜಾತ್ರೆ ಮುಕ್ತಾಯಗೊಳ್ಳುತ್ತದೆ. ಅಂದು ದೇವಳದ ಅಂಗಣದಲ್ಲಿ "ನೀರು ಬಂಡಿ ಉತ್ಸವ" ವಿಶೇಷವಾಗಿದೆ. ಹಿಂದಿನ ದಿನ ಏಕಾದಶಿಯಂದು ದೇವಳದ ಹೊರಾಂಗಣದಲ್ಲಿ ನೀರು ತುಂಬಿಸಲಾಗುವುದು. ಬಂಡಿ ಉತ್ಸವ ಮುಕ್ತಾಯಗೊಂಡ ಬಳಿಕ ತುಂಬಿಸಿದ ನೀರನ್ನು ಖಾಲಿ ಮಾಡಲಾಗುವುದು. ಇದು ಎಲ್ಲೂ ಕಂಡು ಬಾರದ ಅಪೂರ್ವ ಪದ್ಧತಿಯಾಗಿದೆ ಇಲ್ಲಿ ನಡೆಯುವ ಉತ್ಸವಾದಿಗಳಲ್ಲಿ ದೇವರನ್ನು ಪಲ್ಲಕ್ಕಿಯ ಮೇಲೆ ಕುಳ್ಳಿರಿಸಿ ಹಲವು ಪ್ರದಕ್ಷಿಣೆಗಳನ್ನು ನಡೆಸಲಾಗುತ್ತದೆ. ವರ್ಷಂಪ್ರತಿ ಬರುವ ವಾದ್ಯ ಸೆಟ್‌ನವರು, ಬ್ಯಾಂಡ್‌ನವರ ಚಂಡೆ, ಡೋಲಿನವರು ಪಲ್ಲಕ್ಕಿ ಉತ್ಸವದಲ್ಲಿ ಪಾಲ್ಗೊಂಡು ಕಣ್ಣಿನ ಜತೆಗೆ ಕಿವಿಗೂ ಇಂಪನ್ನುಂಟು ಮಾಡುತ್ತಾರೆ. ಪಲ್ಲಕಿಯ ಮುಂದೆ ದೀವಟಿಕೆ , ಕಟ್ಟಿಗೆ, ಕೋಲು, ಛತ್ರಚಾಮರ, ಮಕರ ತೋರಣಗಳು ಸಾಲಂಕೃತ ಗಜಗಮನೆ ಯಶಸ್ವಿನಿ (ದೇವಳದ ಆನೆ) ಇವುಗಳ ಇರುವಿಕೆಯಿಂದ ರಾಜವೈಭವದ ಮೆರಗು ಇಲ್ಲಿ ಕಾಣುತ್ತದೆ.

### ಸುಬ್ರಹ್ಮಣ್ಯ ನೆಲೆನಿಂತ ಇತಿಹಾಸ

ಕುಮಾರ ಸುಬ್ರಹ್ಮಣ್ಯನು ಇಲ್ಲಿ ನೆಲೆನಿಂತ ಕತೆ ರೋಚಕವಾಗಿದೆ. ಕಶ್ಯಪನಿಗೆ ಅದಿತಿಯಲ್ಲಿ ಹುಟ್ಟಿದ ಮಗ ವಜ್ರಾಂಗ. ವಜ್ರಾಂಗ ತಪಸ್ಸು ಮಾಡುತ್ತಿದ್ದಾಗ ಅವನ ಪತ್ನಿವರಾಂಗಿಗೆ ಇಂದ್ರ ಕಿರುಕುಳ ನೀಡಲಾರಂಭಿಸಿದ. ಪ್ರತೀಕಾರನಾಗಿ ವಜ್ರಾಂಗ ತಾರಕನೆಂಬ ಮಗನನ್ನು ಪಡೆಯುವನು. ತಾರಕನು ಘೋರ ತಪಸ್ಸು ಮಾಡಿ ಶಿವನಿಂದ ಏಳು ದಿನಗಳ ಕೂಸಲ್ಲದೆ ಮತ್ತೆ ಯಾರಿಂದಲೂ ಸಾವು ಬರಬಾರದೆಂದು ವರ ಪಡೆಯುತ್ತಾನೆ. ಮುಂದೆ ತಾರಕನು ದೇವತೆಗಳನ್ನೆಲ್ಲ ಹೊಡೆದೋಡಿಸಿ ದೇವೇಂದ್ರನ ಪದವಿಯನ್ನು ಕ್ರಮಿಸುವನು, ದೇವತೆಗಳೆಲ್ಲ ಬ್ರಹ್ಮನ ಮೊರೆ ಹೋಗುವರು. ಮನ್ಮಥನ ಸಹಾಯದಿಂದ ಹಿಮ

ವಂತನ ಕುಮಾರಿಯಾದ ಪಾರ್ವತಿಯನ್ನು ಈಶ್ವರನು ವರಿಸುವಂತೆ ಮಾಡುತ್ತಾರೆ. ದೇವತೆಗಳು ನಂತರ ಅಗ್ನಿಯ ಸಹಾಯದಿಂದ ರುದ್ರ ವೀರ್ಯವನ್ನು ಸಂಗ್ರಹಿಸುವರು. ಅಗ್ನಿ ಮತ್ತು ಗಂಗೆಯ ಸಹಾಯದಿಂದ ಹುಲ್ಲಿನ ಪೊದೆಯಲ್ಲಿ ಕುಮಾರನ ಜನನವಾಗುತ್ತದೆ, ಮಗು ರೋದಿಸುತ್ತಿರಲು ಷಟ್ ಕೃತ್ತಿಕೆಗಳು ಬಂದು ಆ ಶಿಶುವಿಗೆ ಸ್ತನ್ಯವನ್ನು ಕುಡಿಸುವರು. ಆರು ಮುಖಗಳಿಂದ ಹಾಲನ್ನು ಕುಡಿದ ಮಗುವು ಷಣ್ಮುಖನೆಂದು ನಾಮಧರಿಸಿತು.

ಈ ವಿಚಾರ ತಿಳಿದ ಈಶ್ವರ ಪಾರ್ವತಿಯರು ಬಂದು ಮಗುವನ್ನು ಕರೆದ್ಯೊಯ್ದರು ಕೌಮಾರಾವಸ್ಥೆಯಲ್ಲೇ ರಹಸ್ಯವಾಗಿ ಧನುರ್ವಿದ್ಯೆಯನ್ನು ಕಲಿತ ಮಗುವಿಗೆ ಪಾರ್ವತಿ ತನ್ನ ಶಕ್ತಿ ಆಯುಧವನ್ನು ಪ್ರದಾನ ಮಾಡಿದಳು. ತನ್ನ ಹುಟ್ಟಿದ ಉದ್ದೇಶ ತಿಳಿದ ಷಣ್ಮುಖ ತಾರಕ ಸಂಹಾರಕಕ್ಕಾಗಿ ಮಹೀತೀರ್ಥದಿಂದ ದೇವಸೇನಾಪತಿಯಾಗಿ ಪಟ್ಟಾಭಿಷೇಕ ಮಾಡುವರು. ವಿಷ್ಣುವಿನ ಸಲಹೆಯಂತೆ ಕುಮಾರಸ್ವಾಮಿಯು ತಾರಕನನ್ನು ಸಂಹರಿಸಿದನು.

ಕಂಟಕನಾಗಿ ಬೆಳೆದ ತಾರಕನ ಸಂಹಾರದಿಂದ ದೇವತೆಗಳೆಲ್ಲ ಸಂತೋಷಗೊಳ್ಳುವರು. ಸಹ್ಯಾದ್ರಿಯಲ್ಲಿರುವ ಸಿದ್ಧರೂ, ಮಹರ್ಷಿಗಳು, ನಾಗ ಗಣಗಳೂ ಮತ್ತು ವಾಸುಕಿಯು ಕುಟುಂಬ ಸಮೇತರಾಗಿ ಬಂದು ಕುಮಾರನಿಗೆ ನಮಿಸುವರು. ಮಹೇಂದ್ರನು ತನ್ನ ಕುಮಾರಿಯಾದ ದೇವಸೇನೆಯನ್ನು ಕುಮಾರನು ವಿವಾಹವಾಗುವಂತೆ ಕೇಳಿಕೊಳ್ಳುತ್ತಾನೆ. ಕುಮಾರಧಾರಾ ನದಿಯ ದಡದಲ್ಲಿ ಸ್ವಾಮಿಕಾರ್ತಿಕ ನಗರವನ್ನು ನಿರ್ಮಿಸಿ ದೇವಸೇನಾ ಸುಬ್ರಹ್ಮಣ್ಯನ ವಿವಾಹವನ್ನು ದೇವೇಂದ್ರನು ನೆರವೇರಿಸುವನು. ಇದೇ ದಿನವನ್ನು ಚಂಪಾಷಷ್ಠಿಯೆಂದು ಭಕ್ತರು ಆಚರಿಸಿಕೊಂಡು ಬಂದಿದ್ದಾರೆ.

ದೇವತೆಗಳ ಪ್ರಾರ್ಥನೆಯಂತೆ ಸುಬ್ರಹ್ಮಣ್ಯನು ತಾರಕನು ಮಡಿದ ಸ್ಥಳದಲ್ಲಿ ಸ್ತಂದೇಶ್ವರನನ್ನು ಪ್ರತಿಷ್ಠಾಪಿಸಿದನು. ತಮ್ಮ ಅಭೀಷ್ಟ ಈ ಕ್ಷೇತ್ರದಲ್ಲಿ ಸಿದ್ಧಿಯಾದುದರಿಂದ ಸಮಸ್ತ ದೇವತೆಗಳು ಸೇರಿ ಇಲ್ಲಿ ಸಿದ್ಧೇಶ್ವರನನ್ನು ಸ್ಥಾಪಿಸಿದರು. ಕುಮಾರಸ್ವಾಮಿ ದೇವಸೇನೆಯ ಈ ಕ್ಷೇತ್ರದಲ್ಲಿ ವಾಸುಕಿಯೊಂದಿಗೆ ವಾಸಿಸತೊಡಗಿದರು. ಪುತ್ರ ವಾತ್ಸಲ್ಯದಿಂದ ಶಿವ ಪಾರ್ವತಿಯರೂ ಇಲ್ಲಿ ನೆಲೆಸಲು ಈ ಕ್ಷೇತ್ರಕುಕ್ಕೆ ಲಿಂಗವೆಂಬ ಖ್ಯಾತಿ ಪಡೆಯಿತು ಎಂಬುದು ಕ್ಷೇತ್ರ ಚರಿತ್ರೆ ತಿಳಿಸುತ್ತದೆ. ಗಣಪತಿಯೂ ಇಲ್ಲಿ ಬಂದು ನೆಲೆಸತೊಡಗಿದನು. ಅದರಿಂದಾಗಿ ಈ ಸ್ಥಾನದ ಮಹಿಮೆ ಇನ್ನೂ ಹೆಚ್ಚಿತು. ಹಿಂದೆ ಕುಕ್ಕೆ ಎಂದೇ ಹೆಸರಾಗಿದ್ದ ಈ ಕ್ಷೇತ್ರ ಇಂದು ಸುಬ್ರಹ್ಮಣ್ಯನ ದಯೆಯಿಂದ ಕುಕ್ಕೆ ಸುಬ್ರಹ್ಮಣ್ಯವಾಗಿದೆ. ಆದರೆ, ಈ ಸ್ಥಳಕ್ಕೆ ಕುಕ್ಕೆ ಎಂಬ ಹೆಸರು ಬಂದ ಬಗ್ಗೆ ವಿಭಿನ್ನ ಹೇಳಿಕೆಗಳಿವೆ. ಈ ಕ್ಷೇತ್ರದಲ್ಲಿ ಹಿಂದೆ ಜನರು ಕುಕ್ಕೆಗಳಲ್ಲಿ ಈಶ್ವರ ಲಿಂಗವನ್ನಿಟ್ಟು ಪೂಜಿಸುತ್ತಿದ್ದರಂತೆ. ಹೀಗಾಗಿ ಈ ಊರಿಗೆ ಕುಕ್ಕೆ ಎಂದೂ ಹಾಗೂ ಇಲ್ಲಿನ ಶಿವಲಿಂಗಕ್ಕೆ ಕುಕ್ಕೆಲಿಂಗ ಎಂದು ಹೆಸರು ಬಂದಿದೆ ಎನ್ನುತ್ತಾರೆ ಕೆಲವರು. ಆದರೆ, ಕುಕ್ಕೆ ಎಂಬ ಪದಕ್ಕೆ ಹಳೆಗನ್ನಡದಲ್ಲಿ 'ಗುಹೆ' ಎಂದು ಅರ್ಥ ನೀಡುವ ಸಂಸ್ಕೃತದ 'ಕುಕ್ಷಿ' ಎಂಬ ಪದ ಪ್ರಯೋಗವಿದೆ. ಹೀಗಾಗಿ ಇದಕ್ಕೆ ಕುಕ್ಕೆ ಎಂಬ ಹೆಸರು ಬಂದಿದೆ. ಗುಹೆಯೊಳಗೆ ಶಿವಲಿಂಗ ಇರುವುದರಿಂದ ಈ ಲಿಂಗಕ್ಕೆ ಕುಕ್ಕೆ ಲಿಂಗ ಎಂಬ ಹೆಸರು ಬಂದಿದೆ ಎನ್ನುತ್ತಾರೆ ಕೆಲವರು.

ಸುಬ್ರಹ್ಮಣ್ಯ ಕ್ಷೇತ್ರ ಪೂರ್ವದಲ್ಲಿ ಕುಕ್ಕೆ ಪಟ್ಟಣವೆಂದೇ ಪ್ರಸಿದ್ಧಿಯಾಗಿತ್ತೆಂದು ಶಾಸನಗಳಿಂದಲೂ, ಗ್ರಂಥಗಳಿಂದಲೂ ತಿಳಿದು ಬರುತ್ತದೆ. ಶ್ರೀ ಆದಿ ಶಂಕರಾಚಾರ್ಯರು ದಿಗ್ವಿಜಯಕ್ಕಾಗಿ ಇಲ್ಲಿಗೆ ಬಂದು ಕೆಲವು ದಿನ ವಾಸ ಮಾಡಿದ್ದರೆಂದೂ ಆನಂದ ವಿರಚಿತ ಶಂಕರ ವಿಜಯದಲ್ಲಿ ಹೇಳಿದೆ. ಶ್ರೀ ಶಂಕರಾಚಾರ್ಯ ವಿರಚಿತ "ಸುಬ್ರಹ್ಮಣ್ಯ ಭುಜಂಗ ಪ್ರಯಾತ" ಸ್ತೋತ್ರದಲ್ಲಿ "ಭಜೇ ಕುಕ್ಕೆಲಿಂಗಂ" ಎಂದು ಈ ಕ್ಷೇತ್ರದ ಉಲ್ಲೇಖವಿದೆ. ಇಲ್ಲಿಯ ಸ್ಥಳ ಪುರಾಣ ಪ್ರಕಾರ ಅನೇಕ ದೇವ ಋಷಿಗಳು ಶಿವಲಿಂಗಗಳನ್ನು ಈ ಕ್ಷೇತ್ರದಲ್ಲಿ ಸ್ಥಾಪಿಸಿದ್ದಾಗಿ ತಿಳಿದು ಬರುತ್ತದೆ. ಇಂತಹ ಪ್ರಸಿದ್ಧ ಶಿವಲಿಂಗವನ್ನು ಉಲ್ಲೇಖಿಸುವುದೇ ಕುಕ್ಕೆ ಲಿಂಗವೆಂಬ ಶಬ್ದ ಅರ್ಥವಾಗಿರುವುದೆಂದು ತಿಳಿಯಬೇಕು. ಶ್ರೀ ಸ್ಕಂದ ಪುರಾಣದ ಸನತ್‌ಕುಮಾರ ಸಂಹಿತೆಯಲ್ಲಿ ಸಹ್ಯಾದ್ರಿ ಖಂಡದ ತೀರ್ಥ ಕ್ಷೇತ್ರದ ಮಹಿಮಾರೂಪಣದೊಳಗೆ ಶ್ರೀ ಸುಬ್ರಹ್ಮಣ್ಯ ಕ್ಷೇತ್ರವು ಧಾರಾ ನದಿಯ ತೀರದಲ್ಲಿರುವುದು ಎಂದಿದೆ. ಈ ಕ್ಷೇತ್ರವನ್ನು ಗುಪ್ತ ಕ್ಷೇತ್ರವೆಂಬುದಾಗಿಯೂ ಕರೆಯುತ್ತಾರೆ ಶ್ರೀದೇವರಿಗೆ ಅನ್ನದಾತ ಸುಬ್ರಹ್ಮಣ್ಯನೆಂದು ಹೆಸರೂ ಇದೆ.

**ಮಲೆ ಕುಡಿಯರ ನಂಟು**

ಇಲ್ಲಿನ ಬುಡಕಟ್ಟು ಜನಾಂಗವಾದ ಮಲೆ ಕುಡಿಯರಿಗೂ ಈ ದೇವರಿಗೂ ಹತ್ತಿರದ ನಂಟಿದೆ. ಊರಿನಲ್ಲಿ ಇವರನ್ನೊಳಗೊಂಡಂತೆ ಒಂದು ಕಥೆ ಕೇಳಿ ಬರುತ್ತದೆ. ಯುಗಗಳ ಹಿಂದೆ ಈ ಪ್ರದೇಶದ ಮಲೆಗಳಲ್ಲಿ ಕಾಡ್ಗಿಚ್ಚು ಹತ್ತಿಕೊಂಡಿತಂತೆ. ಬೆಂಕಿಯ ನಡುವೆ ದಿಗ್ಬಂಧನವಾಗಿದ್ದ ದೇವ ಸರ್ಪವೊಂದರ ನರಳುವಿಕೆ ಬೇಟೆಗೆಂದು ಹೋಗಿದ್ದ ಮಲೆಕುಡಿಯ ಜನಾಂಗದ ಪೂರ್ವಜರ ಕಿವಿಗೆ ಬಿದ್ದಿತಂತೆ. ಸರ್ಪದ ದಯನೀಯ ಸ್ಥಿತಿ ಕಂಡು ಅದನ್ನು ಬೆಂಕಿಯಿಂದ ರಕ್ಷಿಸಿ ತಾನು ತಂದ ಕುಕ್ಕೆಯಲ್ಲಿ ಇಟ್ಟುಕೊಂಡು ಬೆಟ್ಟದ ಕೆಳಗೆ ನಡೆಯುತ್ತಿದ್ದಾಗ ನಿನಗೆ ಭಾರವೆನಿಸಿದ ಜಾಗದಲ್ಲಿ ನನ್ನನಿಳಿಸು ಎಂಬ ಅಶರೀರವಾಣಿ ಕೇಳಿತಂತೆ ಆ ಮಾತಿನಂತೆ ಅದು ಭಾರವಾಗ ತೊಡಗಿದ ಜಾಗದಲ್ಲಿ ಇಳಿಸಲಾಯಿತು. ಆದರೆ ಆ ಸ್ಥಳ ಬೆಂಕಿಯ ಭಯದಿಂದ ಬೆಂದಿದ್ದ ಸರ್ಪಕ್ಕೆ ಕ್ಷೇಮವೆನಿಸದ ಕಾರಣ ಅದು ಅಲ್ಲಿಂದ ಸುಮಾರು ಹೆಜ್ಜೆಯ ದೂರದಲ್ಲಿ ಸುತ್ತಲೂ ನೀರು ಹರಿಯುವ ಸ್ಥಳದಲ್ಲಿ ತನ್ನನ್ನು ಬಿಡುವಂತೆ ಸೂಚಿಸಿತಂತೆ. ಸರ್ಪವನ್ನು ಮೂಲವಾಗಿ ಇಳಿಸಿದ ಸ್ಥಳವೆ 'ಆದಿ ಸುಬ್ರಹ್ಮಣ್ಯ' ಎಂದು ಪ್ರಸಿದ್ಧವಾಯಿತು. ದರ್ಪಣತೀರ್ಥ ಹಾಗೂ ಕುಮಾರಧಾರೆ ನದಿಯು ಕುಕ್ಕೆ ದೇವಸ್ಥಾನ ಪ್ರದೇಶದ ಸುತ್ತಲೂ ಹರಿದು ಹೋಗುತ್ತವೆ. ಕುಕ್ಕೆಯಲ್ಲಿ ಹೊತ್ತು ತಂದದ್ದಕ್ಕೆ ಸರ್ಪ ನೆಲೆಸಿದ ಸುತ್ತಲೂ ನೀರಿರುವ ಜಾಗ ಕುಕ್ಕೆ ಸುಬ್ರಹ್ಮಣ್ಯ ಎಂದು ನಾಮಕರಣಗೊಂಡಿದೆ ಎಂಬುದಾಗಿ ದಂತಕತೆ. ಆದಿ ಸುಬ್ರಹ್ಮಣ್ಯ ಕುಮಾರಸ್ವಾಮಿಯ ದೇವಾಲಯದಿಂದ 100 ಮೀ ದಕ್ಷಿಣಕ್ಕೆ ಇದೆ. ದರ್ಪಣ ತೀರ್ಥದ ಪಕ್ಕದಲ್ಲಿ ಈ ಗುಡಿಯ ಗರ್ಭಗೃಹದೊಳಗೆ ದೊಡ್ಡ ವಾಲ್ಮೀಕ ಹುತ್ತವು ಗೋಚರಿಸುತ್ತದೆ. ಇಲ್ಲಿ ನಿತ್ಯ ಪೂಜೆ, ನಂದಾದೀಪ, ನೈವೇದ್ಯಾದಿಗಳು ನಡೆಯುತ್ತವೆ. ಬ್ರಹ್ಮನಿಂದ ಪ್ರತಿಷ್ಠಿತವಾದ ಶಿವಲಿಂಗವೂ ಇಲ್ಲಿದೆ. ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಬಂದ ಭಕ್ತಾದಿಗಳು ಇಲ್ಲಿ ದರ್ಶನ ಲಾಭವಿಲ್ಲದೆ ಹೋದರೆ ಅವರಿಗೆ ಯಾತ್ರಾಫಲ ದೊರೆಯದೆಂಬ ಶಾಪವಿದೆ.

**ಬೆತ್ತದ ತೇರಿನ ಹಿಂದಿದೆ, ಮೂಲ ನಿವಾಸಿಗಳ ಬೆವರು**

ಕುಕ್ಕೆ ಸುಬ್ರಹ್ಮಣ್ಯ ಜಾತ್ರೆಯಲ್ಲಿ ಬಹುಪಾಲು ರಥಗಳದ್ದೇ ಆಗಿರುತ್ತದೆ. ಆದುದರಿಂದ ಈ ತೇರಿನ ಊರಿನ ಜಾತ್ರೆಗೆ ಮೂಲ ನಿವಾಸಿಗಳಾದ ಮಲೆ ಕುಡಿಯ ಜನಾಂಗದವರು ರಚಿಸುವ ಆಕರ್ಷಕ ಬೆತ್ತದ ರಥಗಳು ಭೂಷಣವಾಗಿದ್ದು, ಸಾಲಾಂಕೃತ ರಥಗಳು ಜಾತ್ರೆಯ ಸೊಬಗನ್ನು ಇಮ್ಮಡಿಗೊಳಿಸುತ್ತದೆ. ಕುಕ್ಕೆಕ್ಷೇತ್ರದ ಜಾತ್ರಾ ಮಹೋತ್ಸವಕ್ಕಾಗಿ ಮಲೆಕುಡಿಯ ಜನಾಂಗದವರು ತಮ್ಮ ಅದ್ಭುತ ಕೈಚಳದಿಂದ ತೇರನ್ನು ಸಿದ್ಧಗೊಳಿಸುವ ಕಾಯಕವನ್ನು ಹಗಲಿರುಳೆನ್ನದೆ ಶ್ರಮವಹಿಸಿ ನಡೆಸುತ್ತಾರೆ. ಶ್ರೀ ಕ್ಷೇತ್ರದಲ್ಲಿ ಮೂಲನಿವಾಸಿಗಳಾದ ಮಲೆ ಕುಡಿಯ ಜನಾಂಗಕ್ಕೆ ವಿಶೇಷ ಸ್ಥಾನವಿದೆ. ಶ್ರೀ ಕ್ಷೇತ್ರದ ಜಾತ್ರಾ ಸಮಯದಲ್ಲಂತೂ

ಇವರ ಪಾತ್ರ ಅನನ್ಯ ರಥಗಳರ್ದ್ದೇ ಇಲ್ಲಿ ಜಾತ್ರೆ ಆದುದರಿಂದ  ಇಲ್ಲಿನ ರಥಗಳನ್ನು ಅತ್ಯಂತ ವಿಶಿಷ್ಟ ಪೂರ್ಣ ಮತ್ತು ಸುಂದರವಾಗಿ ನಿರ್ಮಿಸುವ ಕೈಂಕರ್ಯವನ್ನು ತಲೆತಲಾಂತರದಿಂದ ಮಾಡಿಕೊಂಡು ಬರುತ್ತಿರುವ ಕೀರ್ತಿ ಇವರಿಗೆ ಸಲ್ಲುತ್ತದೆ. ಈಗೀಗ ಹಿರಿಯರೊಂದಿಗೆ ಯುವ ಜನಾಂಗವೂ ಕೂಡ  ಶ್ರೀದೇವರ ಈ ಸೇವೆಯಲ್ಲಿ ಭಾಗವಹಿಸುತ್ತಿರುವುದರಿಂದ ಅವರ ಸೇವಾ ಕಾರ್ಯಕ್ಕೆ ಸಾಕ್ಷಿ.

ಸುಬ್ರಹ್ಮಣ್ಯದ ಚಂಪಾಷಷ್ಠಿಗೆ ಸಿದ್ಧತೆ ನಡೆಯುವುದೇ ರಥಕ್ಕೆ ಕುಟ್ಟಿ ಹಾಕುವುದರ ಮೂಲಕ, ನಂತರ ಮೂಲನಿವಾಸಿಗಳು ಕಾಡಿಗೆ ತೆರಳಿ ರಥಕ್ಕಾಗಿ ಬೆತ್ತವನ್ನು  ಸಂಗ್ರಹಿಸುತ್ತಾರೆ ಬಳಿಕ ಬ್ರಹ್ಮರಥವನ್ನು ಕಟ್ಟಲು ಆರಂಭಿಸುತ್ತಾರೆ. ಬೆತ್ತದಿಂದಲೇ ತಯಾರಿಸುವ ಈ ರಥದ ಆಕರ್ಷಣೆಯೇ ಇವರ ಸೇವಾ ಕೈಚಳಕಕ್ಕೆ ಹಿಡಿದ ಕೈಗನ್ನಡಿಯಾಗಿ ಗೋಚರಿಸುತ್ತದೆ. ರಥದ ಮೇಲ್ಭಾಗವನ್ನು ಬೆತ್ತದಿಂದಲೇ  ನಿರ್ಮಿಸಲಾಗುತ್ತಿದ್ದು, ರಥ ಎಳೆಯಲು ಕೂಡ ಬೆತ್ತವನ್ನೇ ಬಳಸುವುದು ವಿಶೇಷ, ಉಳಿದಂತೆ ರಥಕಟ್ಟಲು ಬೆತ್ತದ ಸೀಳುಗಳನ್ನು ಉಪಯೋಗಿಸಿದರೆ,ಎಳೆಯಲು ಉಪಯೋಗಿಸುವ ಬೆತ್ತ ಮಾತ್ರ ಇಡಿಯಾಗಿರುತ್ತದೆ. ಈ ಬೆತ್ತವನ್ನು ಭಕ್ತರು ತುಂಡುಮಾಡಿ ತಮ್ಮ ಮನೆಗಳಿಗೆ ತೆಗೆದುಕೊಂಡು ಹೋಗುತ್ತಾರೆ. ಇದು  ಮನೆಯಲ್ಲಿದ್ದರೆ ಒಳಿತು ಮತ್ತು ಇದು ಔಷಧಕಾರಕ ಎಂಬ ನಂಬಿಕೆಯೂ ಇದೆ.

ಈ ರೀತಿಯಾಗಿ ಮೂಲ ನಿವಾಸಿಗಳಾದ ಮಲೆಕುಡಿಯರು ಆಕರ್ಷಕ ಶೈಲಿಯಲ್ಲಿ ರಥವನ್ನು ನಿರ್ಮಿಸಿ, ಇದಕ್ಕೆ ಬಟ್ಟೆಯ  ಪತಾಕೆಗಳಿಂದ ಸಿಂಗರಿಸುತ್ತಾರೆ. ರಥಗಳ  ಗಾಂಭೀರ್ಯತೆ, ಅದರ ಶೈಲಿ, ಆಕರ್ಷಣೆಗಳು  ಹಾಗೂ ರಥಗಳ  ವಿನ್ಯಾಸಗಳೇ ಇವರ ಅತ್ಯುತ್ತಮ ರಚನಾ ಕೌಶಲ್ಯವನ್ನು ತೆರೆದಿಡುತ್ತದೆ.

### ಪಾವನತೀರ್ಥ - ಕುಮಾರಧಾರಾ

ಈ ಕ್ಷೇತ್ರದಲ್ಲಿ  ಹರಿಯುವ ಕುಮಾರಧಾರಾ ನದಿ ಒಂದು ಪುಣ್ಯತೀರ್ಥ. ಕೃತಯುಗದಲ್ಲಿ  ಇಂದ್ರದ್ಯುಮ್ನನೆಂಬ ರಾಜನು ಭಕ್ತಿಯಿಂದ ಭೂಮಿಯ ಮೇಲೆ ಯುದ್ಧ ಮಾಡುತ್ತಿರಲು ಭೂದೇವಿಯು ಸಂತೃಪ್ತಳಾಗಿ, ಭೂಗರ್ಭದಿಂದ  ಉಕ್ಕಿ ಪ್ರವಹಿಸಿದ ಸಮಸ್ತ ತೀರ್ಥಗಳ ಸಾರವೇ ಈ ನದಿ. ಪೂರ್ವದಲ್ಲಿ ಮಹೀನದಿ  ಎಂದೂ  ತರುವಾಯ  ಧಾರಾನದಿಯೆಂದೂ,ಕುಮಾರಸ್ವಾಮಿಗೆ  ತೀರ್ಥಾಭಿಷೇಕವಾದ  ನಂತರ  ಕುಮಾರಧಾರಾ  ನದಿಯೆಂದೂ  ಖ್ಯಾತವಾಯಿತು. ಚರ್ಮವ್ಯಾಧಿಗಳು ಈ ತೀರ್ಥಸ್ನಾನದಿಂದ  ಪರಿಹಾರವಾಗುತ್ತವೆ. ಶ್ರಾವಣಮಾಸದ ಅಮಾವಾಸ್ಯೆ ಮತ್ತು  ಸಂಕ್ರಾಂತಿಯಂದು ಈ ತೀರ್ಥಸ್ನಾನ ಅತ್ಯಂತ ಪುಣ್ಯಫಲಪ್ರದವೆಂಬ ನಂಬಿಕೆ ಜನರಲ್ಲಿ ಬೆಳೆದು  ಬಂದಿದೆ. ದರ್ಪಣ ತೀರ್ಥ ಮತ್ತು ಮತ್ಸ್ಯ ತೀರ್ಥ ಇವುಗಳು ಇಲ್ಲಿನ ಇತರ ಪುಣ್ಯ ತೀರ್ಥಗಳು. ಬಿಲದ್ವಾರ ಇಲ್ಲಿನ ಇನ್ನೊಂದು ಪವಿತ್ರ ಸ್ಥಾನ. ದೇವಸ್ಥಾನ ಅರ್ಧ ಕಿ.ಮೀ. ದಕ್ಷಿಣಕ್ಕೆ ಈ ಬಿಲದ್ವಾರ ಕಾಣಿಸುತ್ತದೆ. ಪೂರ್ವಕಾಲದಲ್ಲಿ ವಾಸುಕಿಯು ಗರುಡನ ಬಾಧೆ ತಾಳಲಾರದೆ ಈ ಗುಹೆಯಲ್ಲಿ  ವಾಸವಾಗಿದ್ದನು ಎಂದು ಪ್ರತೀತಿ.

### ಸರ್ಪಸಂಸ್ಕಾರ, ನಾಗಪ್ರತಿಷ್ಠೆಯ ತವರು

ಇತಿಹಾಸ ಪ್ರಸಿದ್ಧ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಮುಖ್ಯ ಸೇವೆಯಾದ ಸರ್ಪ ಸಂಸ್ಕಾರ, ನಾಗಪ್ರತಿಷ್ಠೆ ಮಾಡಿಸುವ ಭಕ್ತರ ದಿನದಿಂದ ದಿನಕ್ಕೆ ಅಧಿಕಗೊಳ್ಳುತ್ತದೆ. ಜಾತಿ, ಮತ ಭೇದವಿಲ್ಲದೆ ಎಲ್ಲರೂ ಮಾಡುವ ವಿಶಿಷ್ಠ ಸೇವೆ ಇದು. ಸರ್ಪ ದೋಷದಿಂದಾಗಿ ದೊರೆಯುವ ವಿವಾಹ ಭಾಗ್ಯ ಮಕ್ಕಳಾಗದ ಚಿಂತೆ, ದೀರ್ಘಕಾಲದ ಕಾಯಿಲೆ, ಆರ್ಥಿಕ ನಷ್ಟ ಮೊದಲಾದ ಸಮಸ್ಯೆಗಳಿಗೆ ಸರ್ಪ ಸಂಸ್ಕಾರ, ನಾಗಪ್ರತಿಷ್ಠೆ ಸೇವೆಯಿಂದ ಪರಿಹಾರ ಆಗುತ್ತದೆ ಎಂಬುದು ಭಕ್ತ ಜನರ ನಂಬಿಕೆ, ಹಾಗಾಗಿ ಈ ಸೇವೆಯನ್ನು ಸರ್ವಧರ್ಮೀಯರೂ ನಂಬಿ ಮಾಡುತ್ತಾರೆ.

ಸರ್ಪ  ಸಂಸ್ಕಾರವೆಂದರೆ  ಎರಡು  ದಿನ  ನಡೆಸುವ  ಸರ್ಪದ  ಉತ್ತರಕ್ರಿಯೆ.  ನಾಗಪ್ರತಿಷ್ಠೆಯು ನಾಗಕುಲದ  ಅಭಿವೃದ್ಧಿಯ ಸಂಕೇತ. ಇದರಿಂದ ಭಕ್ತರ ಕುಲ ಕೂಡಾ ಅಭಿವೃದ್ಧಿಯಾಗುತ್ತದೆ ಎಂಬುದು ನಂಬಿಕೆ. ಉಪನಯನ ಸಂಸ್ಕಾರವಿರುವ ವರ್ಗದವರು ಈ ಕ್ರಿಯೆ ಮಾಡುವಂತಿಲ್ಲ, ತಂದೆಯೇ  ಅದನ್ನು ನೆರವೇರಿಸಬೇಕು. ವೃದ್ಧಾಪ್ಯ,ಅಸೌಖ್ಯಗಳಿಂದ ಅಶಕ್ತರಾಗಿದ್ದರೆ ಮಾತ್ರ  ಮಕ್ಕಳಿಂದ  ಈ  ಕ್ರಿಯೆ  ನಡೆಸಬಹುದಾಗಿದೆ. ಉಪನಯನ  ರಹಿತ  ವರ್ಗದವರು  ಈ  ಸೇವೆಯನ್ನು  ಇನ್ನೊಬ್ಬ   ಬ್ರಾಹ್ಮಣ ಕರ್ತೃವಿನ ಮೂಲಕ ನೆರವೇರಿಸಬಹುದು. ಅವರಿಗೆ ದೇವಳದ ವತಿಯಿಂದಲೇ ಕರ್ತೃಗಳನ್ನು ನಿಯೋಜಿಸಿ ಸೇವೆಯನ್ನು ಸರದಿ ಪ್ರಕಾರ ನಡೆಸಿಕೊಂಡು ಬರಲಾಗುತ್ತದೆ. ಆದರೆ ದೇವಳದಲ್ಲಿ ಮುಂದಾಗಿ ತಮ್ಮ ಹೆಸರನ್ನು ನೊಂದಾಯಿಸುವ ವ್ಯವಸ್ಥೆ ಮಾಡಲಾಗಿದೆ.



### ತೀರ್ಥ ಪ್ರಬಂಧದಲ್ಲಿ 'ಸುಬ್ರಹ್ಮಣ್ಯ ಸ್ತುತಿ'

ಆದಿ ಸುಬ್ರಹ್ಮಣ್ಯನೇ, ನಿನ್ನ ಹೃತ್ಕಮಲದೊಳಗೆ ಎಲ್ಲರ ಹೃದಯಗಳು ಅಡಕವಾಗಿದೆ ಅವೆಲ್ಲವೂ ಶ್ರೀಹರಿಗೆ ಸಮರ್ಪಣೆಯಾಗಿದೆ. ಶಾಂತನಾಗಿ ಆತನನ್ನು ಧ್ಯಾನಿಸಲು ಸಾಧ್ಯವಾಗಿದೆ. ಹೇ ಷಣ್ಮುಖನೇ ನೀನು ಶ್ರೀ ವಿಷ್ಣುತೀರ್ಥ ಮುನಿಯ ಪರಮಾಪ್ತ ಸ್ನೇಹಿತನು. ತಾರಕಾಸುರನ ಶತ್ರುವಾಗಿದ್ದೀಯ. ಶ್ರೀಕೃಷ್ಣನ ಪರಮಾಪ್ತ ಭಕ್ತನಾಗಿದ್ದೀಯ. ಸ್ಮರಣೆ ಮಾತ್ರದಿಂದಲೇ ಭಕ್ತರ ಸಂಕಷ್ಟಗಳೆಲ್ಲವನ್ನು ಕಳೆಯುವಷ್ಟರ ಮಟ್ಟಿಗೆ ಸಮರ್ಥನಿದ್ದೀಯಾ ದಯಮಾಡಿ ನಮ್ಮಮೇಲೆ ಕೃಪೆ ತೋರು. ಪರಬ್ರಹ್ಮಜ್ಞಾನವನ್ನು ದಯಪಾಲಿಸು ಎಂದು ಶ್ರೀ ವಾದಿರಾಜ ತೀರ್ಥರು ತಮ್ಮ ತೀರ್ಥಪ್ರಬಂಧ ಗ್ರಂಥದಲ್ಲಿ ಸುಬ್ರಹ್ಮಣ್ಯ ಸ್ವಾಮಿಯನ್ನು ಸ್ತುತಿಸುತ್ತಾರೆ.

### ಕೊಪ್ಪರಿಗೆ ಏರುವುದು ವಿಶೇಷ

ಕಾರ್ತಿಕ ಬಹುಳ ದ್ವಾದಶಿಯಂದು ಕುಕ್ಕೆ ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಕೊಪ್ಪರಿಗೆ ಏರುವುದರೊಂದಿಗೆ ಸಂಭ್ರಮದ ವಾರ್ಷಿಕ ಜಾತ್ರೋತ್ಸವ ಆರಂಭವಾಗುತ್ತದೆ. ಎಲ್ಲಾ ಕ್ಷೇತ್ರಗಳಲ್ಲಿ ಕೂಡಿ ಏರುವುದರ ಮೂಲಕ ಜಾತ್ರೆ ಆರಂಭವಾದರೆ, ಕುಕ್ಕೆ ಕ್ಷೇತ್ರದಲ್ಲಿ ಮಾತ್ರ ಕೊಪ್ಪರಿಗೆ ಏರುವುದರೊಂದಿಗೆ ವಾರ್ಷಿಕ ಜಾತ್ರೋತ್ಸವ ಆರಂಭಗೊಳ್ಳುವುದು ವಿಶೇಷ. ರಾಮ-ಲಕ್ಷ್ಮಣ ಎಂಬ ಹೆಸರಿನ ಜೋಡಿ ಅನ್ನದ ಕೊಪ್ಪರಿಗೆಗಳಿಗೆ ವಿಶೇಷ ಪೂಜೆ ಸಲ್ಲಿಸಿ, ಬಳಿಕ ಸುಮುಹೂರ್ತದಲ್ಲಿ ದೇವಳದ ಒಳಾಂಗಣದಲ್ಲಿರುವ ದೊಡ್ಡದಾದ ಎರಡು ಒಲೆಗಳ ಮೇಲೆ ಏರಿಸಲಾಗುವುದು. ಕೊಪ್ಪರಿಗೆಗಳಲ್ಲಿ ಅನ್ನ ಬೆಂದ ಬಳಿಕ ಅದಕ್ಕೆ ಪೂಜೆ ಸಲ್ಲಿಸಲಾಗುವುದು. ಅನ್ನದಾನ ಕ್ಷೇತ್ರವೆಂದು ಪ್ರಸಿದ್ಧವಾಗಿರುವ ಶ್ರೀಕ್ಷೇತ್ರದಲ್ಲಿ ಜಾತ್ರೆಯ ಸಂದರ್ಭದಲ್ಲಿ ನಿರಂತರ ಅನ್ನದಾನ ನಡೆಯುವುದು.

### ಚಂಪಾಷಷ್ಠಿ

ಮಾರ್ಗಶಿರ ಶುದ್ಧ ಷಷ್ಠಿಯನ್ನು ಚಂಪಾಷಷ್ಠಿ ಎಂದು ಕರೆಯಲಾಗಿದೆ. ಇದು ಸುಬ್ರಹ್ಮಣ್ಯನಿಗೆ ಅತ್ಯಂತ ಪ್ರಿಯವಾದ ದಿನ. ಈ ದಿನ ಕುಕ್ಕೆಕ್ಷೇತ್ರದಲ್ಲಿ ಶ್ರೀಸ್ವಾಮಿಯು ಸುಮುಹೂರ್ತದಲ್ಲಿ ಬ್ರಹ್ಮರಥಾರೋಹಣನಾಗುತ್ತಾನೆ. ಇದಕ್ಕಿಂತ ಮೊದಲು ಉಮಾಮಹೇಶ್ವರ ದೇವರು ಮತ್ತು ಸುಬ್ರಹ್ಮಣ್ಯ ದೇವರು ಒಂದೇ ಪಲ್ಲಕ್ಕಿಯಲ್ಲಿ ಬಂದು, ಉಮಾಮಹೇಶ್ವರ ದೇವರು ಪಂಚಮಿ ರಥದಲ್ಲಿ, ಸುಬ್ರಹ್ಮಣ್ಯ ದೇವರು ಬ್ರಹ್ಮರಥದಲ್ಲೂ ವಿರಾಜಮಾನರಾಗುತ್ತಾರೆ. ಶ್ರೀದೇವರ ಬ್ರಹ್ಮರಥಾರೋಹಣವಾದ ನಂತರ ಸುವರ್ಣವೃಷ್ಟಿಯಾಗುತ್ತದೆ.

ಈ ಸಂದರ್ಭದಲ್ಲಿ ಗರುಡನು ಬಂದು ಮೂರು ಪ್ರದಕ್ಷಿಣೆ ಹಾಕುತ್ತಾನೆ ಎಂಬ ನಂಬಿಕೆ ಇದೆ. ಮೊದಲಿಗೆ ಪಂಚಮಿ ರಥವನ್ನು ಎಳೆದರೆ ನಂತರ ಶ್ರೀಸ್ವಾಮಿಯ ಚಂಪಾಷಷ್ಠಿ ಬ್ರಹ್ಮರಥೋತ್ಸವವು ಜರುಗುತ್ತದೆ. ಭಕ್ತಾದಿಗಳು ತಮ್ಮ ಹರಕೆಯಂತೆ ಕಾಳುಮೆಣಸು, ಹಣ ಮತ್ತು ಏಲಕ್ಕಿ ಇತ್ಯಾದಿ ದವಸ ಧಾನ್ಯಗಳನ್ನು ರಥಕ್ಕೆ ಎಳೆದು ಕೃತಾರ್ಥರಾಗುತ್ತಾರೆ.

### ದೀವಟಿಗೆ ಸಲಾಂ :

ರಾಜರ ಆಳ್ವಿಕೆಯ ಪ್ರಭಾವ ಇಲ್ಲಿ ದಟ್ಟವಾಗಿತ್ತು ಎಂಬುದನ್ನು ದೇವಸ್ಥಾನದ ರಿವಾಜುಗಳು ಸ್ಪಷ್ಟಪಡಿಸುತ್ತವೆ. ಮುಸ್ಸಂಜೆಯ ಹೊತ್ತಿನಲ್ಲಿ ದೀವಟಿಗೆ ಸಲಾಂ (ಕಟ್ಟಿಗೆ ಕೋಲಿನವರು ದೀವಟಿಗೆ ಬೆಳಕಿನಲ್ಲಿ ಒಳಾಂಗಣ, ಹೊರಾಂಗಣಕ್ಕೆ ಪ್ರದಕ್ಷಿಣೆ ಬಂದು ದೇವರನ್ನು ಸ್ತುತಿಸುವುದು) ಇಲ್ಲಿ ನಿತ್ಯ ನಡೆಯುತ್ತದೆ.

### ರಥಗಳದ್ದೇ ಜಾತ್ರೆ :

ಕುಕ್ಕೆ ಸುಬ್ರಹ್ಮಣ್ಯದ ಜಾತ್ರಾ ವೈಭವಕ್ಕೆ ರಥಗಳೇ ಪ್ರಮುಖ. ಇಲ್ಲಿ ಅಸಂಖ್ಯಾತ ರಥಗಳ ಮೂಲಕವೇ ದೇವರು ಭಕ್ತರಿಗೆ ತನ್ನ ದರ್ಶನ ನೀಡುವುದರಿಂದ ಇಲ್ಲಿ ರಥಗಳದ್ದೇ ಜಾತ್ರೆ.

### ರಾಜಗಾಂಭೀರ್ಯದ ಬ್ರಹ್ಮರಥ


ಶ್ರೀಕ್ಷೇತ್ರದ ಬ್ರಹ್ಮರಥವು ಸುಮಾರು 400 ವರ್ಷಗಳಿಗಿಂತಲೂ ಹಳೆಯದು ಎಂದು ಹೇಳಲಾಗುತ್ತದೆ. ಈ ರಥವು ನಾಡಿನ ಅತ್ಯಂತ ಎತ್ತರವಾದ ತೇರುಗಳಲ್ಲಿ ಒಂದು. ಇದನ್ನು ಬೆತ್ತದಿಂದಲೇ ಕಟ್ಟುತ್ತಾರೆ. ಇದನ್ನು ಎಳೆಯಲು ಕೂಡ ಬೆತ್ತವನ್ನೇ ಬಳಸುವುದೂ ವಿಶೇಷ. ಈ ರಥದಲ್ಲಿ ರಾಮಾಯಣ, ಮಹಾಭಾರತದ ಕೆತ್ತನೆಗಳು ಮನಮೋಹಕವಾಗಿದ್ದು. ಇದನ್ನು ಹಿಂದೆ 18 ಅಂತಸ್ತುಗಳಲ್ಲಿ ಕಟ್ಟುತ್ತಿದ್ದರು.ಅದು ಏಳಕ್ಕಿಳಿದು ಈಗ ಐದಾಗಿದೆ ಎಂದು ಹೇಳಲಾಗುತ್ತದೆ.

### ನೌಕಾವಿಹಾರ ಮತ್ತು ಅವಭೃಥೋತ್ಸವ

ಪಾವನತೀರ್ಥಕುಮಾರಧಾರದಲ್ಲಿ ಕುಕ್ಕೆ ಸುಬ್ರಹ್ಮಣ್ಯ ದೇವರ ನೌಕಾವಿಹಾರ ಮತ್ತು ಅವಭೃಥೋತ್ಸವ ನಡೆಯುತ್ತದೆ. ಬೆಳಗ್ಗೆ ದೇವಳದ ದ್ವಾದಶಿ ಮಂಟಪದಲ್ಲಿ ಓಕುಳಿ ಪೂಜೆ ನಡೆದು, ನಂತರ ಓಕುಳಿ ಚಲ್ಲಾಟ, ದೇವರಿಗೆ ಓಕುಳಿ ಸಮರ್ಪಣೆ ತದನಂತರ ಭಕ್ತಾದಿಗಳಿಗೆ ಓಕುಳಿ ಪ್ರೋಕ್ಷಣೆ ಮತ್ತು ಓಕುಳಿ ಚೆಲ್ಲಾಟ ನಡೆದು ನಂತರ ಕುಮಾರಧಾರ ನದಿಯಲ್ಲಿ, ಮಾವು, ಬಾಳೆಗಳನ್ನೊಳಗೊಂಡು ತಳಿರುತೋರಣ ಮತ್ತು ಹೂವುಗಳಿಂದ ಸಿಂಗರಿಸಲ್ಪಟ್ಟ ತೆಪ್ಪದಲ್ಲಿ ಶ್ರೀಸ್ವಾಮಿಯ ನೌಕಾವಿಹಾರ ನಡೆಯುತ್ತದೆ. ತದನಂತರ ಮಂತ್ರಘೋಷಣೆದೊಂದಿಗೆ ಕ್ಷೇತ್ರದ ಅವಭೃಥೋತ್ಸವ ಸಂಪನ್ನವಾಗುತ್ತದೆ. ಅವಭೃಥೋತ್ಸವದ ಬಳಿಕ ಕುಮಾರಧಾರ ನದೀತೀರದ ಕಟ್ಟೆಯಲ್ಲಿ ಪೂಜೆ ನೆರವೇರುತ್ತದೆ.

ಅವಭೃಥೋತ್ಸವ ಮುಗಿದ ಬಳಿಕ ದೇವಳದ ದ್ವಾದಶೀ ಮಂಟಪದಲ್ಲಿ ಪೂಜೆ ಮತ್ತು ಒಳಾಂಗಣದಲ್ಲಿ ಸಮಾಪನ ಪೂಜಾ ಕಾರ್ಯಕ್ರಮ ನೆರವೇರುತ್ತದೆ.

# ಪುಣ್ಯ ಪೂರ್ವಾರ್ಜಿತ ವಿದು ಸುರಮಾನ್ಯ ಶ್ರೀ ನಿಲಯನ ದರುಶನ




- ಎಂ. ಎ. ಭರತ್

94802 63676


ಹರಿದಾಸ ಸಾಹಿತ್ಯದಲ್ಲಿ ಮಾಧ್ವಯತಿಗಳು ರಚನೆ ಮಾಡಿದ ಕೀರ್ತನೆಗಳ ಸಂಖ್ಯೆಯ ದೃಷ್ಟಿಯಿಂದ ನೋಡಿದರೆ ಶ್ರೀಮದ್‌ವಾದಿರಾಜರ ನಂತರದ ಸ್ಥಾನವನ್ನು ಶ್ರೀಮದ್ ವಿದ್ಯಾ ಪ್ರಸನ್ನ ತೀರ್ಥ ಶ್ರೀಪಾದಂಗಳವರೂ ಪಡೆದುಕೊಳ್ಳುತ್ತಾರೆ. 1899ರಲ್ಲಿ ಜನಿಸಿದ (ಶ್ರೀವಿದ್ಯಾಪ್ರಸನ್ನ ತೀರ್ಥರು ಪೂರ್ವಾಶ್ರಮದಲ್ಲಿ ಖ್ಯಾತ ನ್ಯಾಯವಾದಿಗಳಾಗಿ ಹೆಸರು ಮಾಡಿದವರು. ಸರಿಸುಮಾರು 1935 ರಲ್ಲಿ ಶ್ರೀಮದ್‌ವಿದ್ಯಾವಾರಿಧಿ ತೀರ್ಥ ಶ್ರೀಪಾದಂಗಳವರಿಂದ ಶ್ರೀಯುವ ನಾಮ ಸಂವತ್ಸರದ ಆಶ್ವಯುಜ ಮಾಸದ ಶುಕ್ಲ ಪಕ್ಷದ ಸಪ್ತಮಿ ಶನಿವಾರ ದಿನಾಂಕ 05-10-1935 ರ ಸರಸ್ವತಿ ಹಬ್ಬದ ದಿನ ಸನ್ಯಾಸವನ್ನು ಸ್ವೀಕರಿಸಿ ಶ್ರೀ 1008 ಶ್ರೀ ವಿದ್ಯಾ ಪ್ರಸನ್ನ ತೀರ್ಥರು ಎಂಬ ಅಭಿದಾನದಿಂದ ಶ್ರೀಮದ್ ವ್ಯಾಸರಾಜ ಮಠ ಸೋಸಲೆಯ 37ನೇ ಪೀಠಾಧಿಪತಿಗಳಾದರು. 35 ದಕ್ಕೂ ಹೆಚ್ಚು ಸಮಯ ವೇದಾಂತ ಸಾಮ್ರಾಜ್ಯದ ವಿದ್ಯಾ ಕರ್ನಾಟಕ ರತ್ನ ಸಿಂಹಾಸನ ಶ್ರೀಮದ್ ವ್ಯಾಸರಾಜ ಮಠ ಸೋಸಲೆಯ ಅಧಿಪತಿಗಳಾಗಿದ್ದರು.

ಶ್ರೀ ಶ್ರೀಪಾದರಾಜರು, ಶ್ರೀವ್ಯಾಸರಾಜರು, ಶ್ರೀವಾದಿರಾಜರು, ಶ್ರೀವ್ಯಾಸ ತತ್ವಜ್ಞ ತೀರ್ಥರು, ಶ್ರೀವಿದ್ಯಾ ರತ್ನಾಕರ ತೀರ್ಥರು ಉತ್ಕೃಷ್ಟವಾದ ಶಾಸ್ತ್ರ ವಿಚಾರವನ್ನು, ಸಂಪ್ರದಾಯ ಆಚರಣೆಗಳನ್ನು, ಸಾಮಾಜಿಕ ಸಭ್ಯ ನೀತಿಗಳನ್ನು ಭಗವಂತನ ಮಹಾತ್ಮೆಯನ್ನು ಸರಳ ಸುಲಭ ಕರ್ನಾಟಕ ಭಾಷೆಯಲ್ಲಿ ಕೀರ್ತನ ರೂಪದಲ್ಲಿ ಜನತೆಗೆ ನೀಡಿದ್ದಾರೆ. ಈ ಮಹಾನೀಯರುಗಳ ಸಂಪ್ರದಾಯವನ್ನೇ ಅನುಸರಿಸಿ ಶ್ರೀಮದ್‌ವಿದ್ಯಾ ಪ್ರಸನ್ನ ತೀರ್ಥರು ಪ್ರಸನ್ನ ಎಂಬ ಅಂಕಿತದಲ್ಲಿ ಕೀರ್ತನಾ ಸಾಹಿತ್ಯ ರಚನೆ ಮಾಡಿರುತ್ತಾರೆ.

ಇವರ ಸಾಹಿತ್ಯದಲ್ಲಿ ಅನೇಕ ಪ್ರಕಾರಗಳನ್ನು ನಾವು ನೋಡಬಹುದು. ಅವುಗಳನ್ನು ನಾವು ಹೀಗೆ ವಿಂಗಡಿಸಬಹುದು ಕೀರ್ತನೆಗಳು, ದೀರ್ಘ ಕೃತಿಗಳು ಮುಕ್ತಕಗಳು, ನಾಟಕಗಳು, ಧಾರ್ಮಿಕ ಸಾಮಾಜಿಕ ಲೇಖನಗಳು ಇತ್ಯಾದಿ.ಸುಮಾರು ಮುನ್ನೂರಕ್ಕು ಹೆಚ್ಚು ಕೀರ್ತನೆಗಳನ್ನು ರಚಿಸಿದ್ದಾರೆ. ಕೀರ್ತನೆಗಳಲ್ಲಿ ಭಾಗವತ ರಾಮಾಯಣ ಮಹಾಭಾರತ ಶ್ರೀನಿವಾಸ ಕಲ್ಯಾಣ, ಸಾಮಾಜಿಕ ವಿಚಾರ ಮಧ್ವಸಿದ್ಧಾಂತ ಇತ್ಯಾದಿ ವಿಚಾರಗಳು ಇವರ ಕೀರ್ತನೆಗಳಲ್ಲಿ ನೋಡಬಹುದು.ಇಡೀ ಕೀರ್ತನೆಯ ವಿಚಾರವನ್ನು ಪಲ್ಲವಿ, ಅನುಪಲ್ಲವಿಯಲ್ಲಿ ಅಡಗಿಸಿ ಇಡುವುದು. ಐತಿಹಾಸಿಕ ವಿಚಾರವನ್ನು ತಿಳಿಸುವುದು. ಕೀರ್ತನೆಯ ಕಡೆಯ ನುಡಿಯವರೆಗೂ ಕೀರ್ತನೆಯ ಉದ್ದೇಶವೇ ತಿಳಿಯದಂತೆ ರಚನೆ ಮಾಡುವುದು ಇತ್ಯಾದಿ ಅನೇಕ ವಿಶೇಷ ರಚನಾ ಕೌಶಲ್ಯವನ್ನೂ ಇವರ ಕೀರ್ತನೆಗಳಲ್ಲಿ ನೋಡಬಹುದು. ತಿರುಪತಿ ಶ್ರೀನಿವಾಸನನ್ನು ಕುರಿತು ಎರಡು ಕೀರ್ತನೆಗಳನ್ನು ರಚನೆ ಮಾಡಿದರೆ ಎರಡು ಕೀರ್ತನೆಗಳಲ್ಲಿ ಭಿನ್ನ ವಿಚಾರವನ್ನು ಪ್ರಸ್ತಾಪಿಸುತ್ತಾರೆ.ಪುಣ್ಯ ಪೂರ್ವಾರ್ಜಿತವಿದು ಸುರಮಾನ್ಯ ಶ್ರೀ ನಿಲಯನ ದರುಶನ ಬಹುಶಃ ಶ್ರೀವಿದ್ಯಾಪ್ರಸನ್ನ ತೀರ್ಥರ ತಿರುಮಲೆ ತಿರುಪತಿ ಯಾತ್ರೆ ಹಾಗೂ ಶ್ರೀನಿವಾಸನ ದರ್ಶನದ ಸಂದರ್ಭದಲ್ಲಿ ರಚನೆಯಾದ ಕೀರ್ತನೆ ಅನ್ನಿಸುತ್ತದೆ.

3 ನುಡಿಗಳ ಈ ಕೀರ್ತನೆಯಲ್ಲಿ ಶ್ರೀನಿವಾಸನ ದರುಶನ ಯಾಕೆ ಆಗುತ್ತದೆ ಎಂಬುದನ್ನು ತಮ್ಮ ಸ್ವಂತ ಉದಾಹರಣೆಯನ್ನೇ ತೆಗೆದುಕೊಂಡು ವಿವರಿಸುತ್ತಾ ಶ್ರೀನಿವಾಸನ ಭಕ್ತರಿಗೆ ಶ್ರೀನಿಧಿ ಶ್ರೀನಿವಾಸ ದರುಶನ ನೀಡುವ ಸಮಯದ ಬಗೆ ತಿಳಿಸುತ್ತಾರೆ. ಮೊದಲಿಗೆ ಶ್ರೀಪಾದರು ತಮಗೆ 2 ಕಾರಣಗಳಿಂದ ಶ್ರೀನಿವಾಸನ ದರ್ಶನವಾಯಿತು ಎಂದು ತಿಳಿಸುತ್ತಾರೆ. ಮೊದಲ ನುಡಿಯಲ್ಲಿ ಪೂಜ್ಯ ಚರಣ ಗುರುವ್ಯಾಸರಾಜ ಯತಿರಾಜ ರಚಿತ ದ್ವಿಕ್ಷಡಬ್ಧದ ಪೂಜೆಯ ಹಿಂದೆ ವ್ಯಾಸರಾಜರು ತಿರುಪತಿಯಲ್ಲಿ ಶ್ರೀ ಪಾದರಾಜರ ಸಲಹೆಯಂತೆ 12 ವರುಷ ಪೂಜೆ ಮಾಡಿದರು. ತಾವು ಅದೇ ಪೀಠದಲ್ಲಿ ಬಂದಿರುವ ಯತಿಗಳು ಅದಕ್ಕೆ ನಮಗೆ ದರ್ಶನವಾಯಿತು ಎಂದು ಮೊದಲ ಕಾರಣ ಹೇಳಿದರೆ ನಂದತೀರ್ಥ ಪರಿವಾರ ಜನರು ಇವರೆಂದು ಹರುಷದಲಿ ಮುಂದೆ ನಿಂತಿಹದು ಶ್ರೀಮದಾನಂದ ತೀರ್ಥರ ಮಧ್ವಮತಕ್ಕೆ ಸೇರಿದವರು ಎಂಬ ಎರಡನೇ ಕಾರಣವನ್ನು ನೀಡುತ್ತಾರೆ.

ಪದ್ಮಾವತಿ ವಲ್ಲಭನಿವ ಮುನಿಜನ
ಹೃದ್ಗತ ಪ್ರಕಟಾಮಿತ ಚರಿತ
ಮುಗ್ಧ ಜನರು ಪರಮಾದರ ತೋರಲು
ಸ್ನಿಗ್ಧನಾಗುವನು ಹರುಷದಲಿ
ಭದ್ರಕೆ ದೂರನು ಭಕ್ತ ಪ್ರಸನ್ನನು
ಉದ್ಧರಿಸಲು ಈ ಸದ್ಮಕೆ ಬಂದಿಹ

ಶ್ರೀ ವಿದ್ಯಾ ಪ್ರಸನ್ನ ತೀರ್ಥರು 3 ನೇ ನುಡಿಯಲ್ಲಿ ಮೇಲೆ ಹೇಳಿದ ದರ್ಶನದ ಕಾರಣಗಳನ್ನು ವಿಮರ್ಷಿಸುತ್ತ ಶ್ರೀನಿವಾಸ ತಮಗಿಂತ ಮುಂಚೆ ಅನೇಕ ಯತಿಗಳಿಗೆ ದರ್ಶನ ನೀಡಿದ್ದಾನೆ ತಮಗೂ ನೀಡಿದ್ದಾನೆ ಹಾಗೆ ಅನೇಕ ಪಂಡಿತರಿಗೆ ಪನ್ನಗಾಚಲದ ಚೆನ್ನಿಗನ ದರುಶನವಾಗಿದೆ ಹಾಗೆ ನಮಗೂ ಆಗಿದೆ ಆದರೆ ಶ್ರೀನಿವಾಸ ತನ್ನ ದರುಶನವನ್ನು ನೀಡುವುದು ಯಾವಾಗ ಅಂದರೆ ಯಾರೇ ಆದರೂ ಇಂತಹ ದೊಡ್ಡ ಪದವಿಯಲ್ಲಿ ಇದ್ದರೂ ಸಾಮಾನ್ಯ ಭಕ್ತರಂತೆ ಭಕ್ತಿ ಭಾವದಿಂದ ಅವರು ತೋರಿಸುವ ಭಕ್ತಿ ಆದರ ಸಂಯಮಗಳನ್ನು ತೋರಿಸಿದಾಗ ನಮಗೆ ಪೂರ್ವ ಪುಣ್ಯವಿದ್ದರೆ ಮಾತ್ರ ಶ್ರೀನಿವಾಸ ಪ್ರಸನ್ನನಾಗಿ ನಿಷ್ಕಪಟಿ ವೆಂಕಟೇಶನು ಭೂವೈಕುಂಠವೆಂದು ಪ್ರಸಿದ್ಧವಾಗಿರುವ ವೆಂಕಟಾಚಲಕ್ಕೆ ತಾನೇ ಕರೆಸಿಕೊಂಡು ತನ್ನ ದರುಶನವನ್ನು ನೀಡುತ್ತಾನೆ ಎಂದು ತಿಳಿಸಿದ್ದಾರೆ. ಶ್ರೀ ವಿದ್ಯಾಪ್ರಸನ್ನ ತೀರ್ಥರ ಪ್ರಸಿದ್ಧ ಕೀರ್ತನೆಗಳಲ್ಲಿ ನಾಟಕ ರಂಗದಲ್ಲಿ ನಟ ಶಿರೋಮಣಿಯೊಬ್ಬ ಎಂಬುದು ಒಂದು. ಪ್ರಸನ್ನ ತೀರ್ಥರ ಕವಿತಾ ಕೌಶಲ್ಯವನ್ನು ಈ ಕೀರ್ತನೆಯಲ್ಲಿ ನೋಡಬಹುದು. ಭವಿಷ್ಯೋತ್ತರಪುರಾಣದಲ್ಲಿ ಬರುವ ಶ್ರೀನಿವಾಸ ಕಲ್ಯಾಣದ ಕಥೆಯನ್ನು ಸಂಗ್ರಹ ರೂಪವಾಗಿ ನಿರೂಪಿಸುವ

ಕೀರ್ತನೆ ಇದು. ಕೀರ್ತನೆಯ ಅಂದಕ್ಕೆ ಕುಂದಾಗದಂತೆ ವ್ಯಂಗವನ್ನು ಬಹಳ ಸೊಗಸಾಗಿ ಇಲ್ಲಿ ದುಡಿಸಿಕೊಂಡಿದ್ದಾರೆ.

ನಾಟಕ ರಂಗದಲಿ ನಟಶಿರೋಮಣಿಯೊಬ್ಬ
ಪಟುತನದಿ ವಿಧವಿಧದ ನಟನೆಗಳ ತೋರುವನು ॥ಪ॥
ಅಘಟನಾಘಟನ ಶಕ್ತನ ಕಪಟನಾಟಕವು
ಘಟಕರಲ್ಲದ ಜನಕೆ ಎಟುಕದಾನೋಟ ॥ಅ.ಪ॥

ನಾಟಕದಲ್ಲಿ ನಟ ಶಿರೋಮಣಿ ಎನ್ನಿಸಿಕೊಳ್ಳಬೇಕಾದರೆ ಆ ವ್ಯಕ್ತಿಗೆ ಇರಬೇಕಾದ ಗುಣಗಳನ್ನು ತಿಳಿಸುತ್ತಾ, ಎಲ್ಲಾ ನಟ ಶಿರೋಮಣಿಗಳಿಗಿಂತ ಶ್ರೀನಿವಾಸನೇ ಬಹಳ ದೊಡ್ಡ ನಟ ಶಿರೋಮಣಿ ಎಂದು ನಿರೂಪಿಸುತ್ತಾ ಈ ಜಗತ್ತು ಒಂದು ನಾಟಕ ರಂಗ ಜಗನ್ನಾಥನೇ ಸೂತ್ರಧಾರಿ ಬೇಕಾದಾಗ ಬೇಕಾದ ಪಾತ್ರವನ್ನು ಸಹಾ ನಿರ್ವಹಿಸುತ್ತಾನೆ.

ಮುಖ್ಯಪಾತ್ರವು ನಮ್ಮರುಕ್ಮಿಣಿ ರಮಣನದು
ಮುಖ್ಯತಾರೆಯು ಲೋಕ ಜನನಿ ಲಕುಮಿ
ಇಕ್ಕಿದನು ಗೋರೂಪ ಚತುರಾನನನು ಮುದದಿ
ಮುಖ್ಯ ಪ್ರಾಣನೆ ತುರಗ ಮುಕ್ಕಣ್ಣ ಕರುವಾದ 1
ಸುಖಸಾರನನು ಪಡೆದು ಧನ್ಯಳಾದ ಯಶೋದೆ
ಬಕುಳೆಯೆ ತಾನಾದಳೀ ನಾಟಕದಲಿ
ಆಕಳಂಕ ಮಹಿಮನನು ಅಗಲದಿದ್ದ ಸತಿಯು
ಮುಖನೋಡಿ ಕೋಪದಲಿ ಕಲ್ಲುಗಳನೆಸೆದಳು 1

ಶ್ರೀನಿವಾಸ ಕಲ್ಯಾಣದ ಮುಖ್ಯ ಪಾತ್ರಧಾರಿಗಳ ವಿವರಣೆಯನ್ನು ಪುಟ್ಟ ಪುಟ್ಟ ವಾಕ್ಯಗಳಲ್ಲಿ ವಿವರಿಸುತ್ತಾ

ಸರ್ವತ್ರ ವ್ಯಾಪ್ತನಿಗೆ ಇರಲು ಜಗವು ಸಿಗದೆ
ಕಿರಿದ ತಾ ಹಲ್ಲುಗಳ ವರಹನಲ್ಲಿ
ಹರನ ತಾತನು ತಾನು ಸ್ಮರನ ಬಾಣದಿ ನೊಂದ
ಸುರಮೋಹಿನಿಯು ಇಂಥ ಕೊರವಂಜಿಯಾದಳು

ಎಂಬ ನುಡಿಯಲ್ಲಿ ಜಗನ್ನಾಥನಾದ ಶ್ರೀನಿವಾಸನು ತನ್ನ ಕಲ್ಯಾಣಕ್ಕೆ ತಾನೇ ನಿರ್ವಹಿಸಿದ ಪಾತ್ರಗಳ ಚಿಕ್ಕ ವಿವರಣೆಯನ್ನು ನೀಡಿದ್ದಾರೆ ಹಾಗೆ ಈ ಕಾರಣಕ್ಕೆ ಆತನನ್ನು ನಟ ಶಿರೋಮಣಿ ಎಂದು ಕರೆಯುವುದು ಎಂದು ಮತ್ತೆ ತಿಳಿಸುತ್ತಿದ್ದಾರೆ.

ಹುಟ್ಟಿಸುವ ಬೊಮ್ಮನನು ಪುಟ್ಟಶಿಶುವನೆ ಮಾಡಿ
ಹೊಟ್ಟೆಗಿಲ್ಲದೆ ಬಹಳ ಬಾಡಿ ಇರಲು
ಮೃಷ್ಟಾನ್ನವನು ಚಿನ್ನ ತಟ್ಟೆಯಲಿ ತಂದಿಡಲು
ಶ್ರೇಷ್ಠವಿದು ಜನನಿಗೆನ್ನುತ ತಿಂದು ತೇಗಿದಳು

ಈ ಜಗತ್ತಿನ ನಾಟಕ ರಂಗದ ನಿರ್ದೇಶಕ ಶ್ರೀನಿವಾಸ ನಾಟಕ ಕಾರನಾಗಿ ನಿರ್ದೇಶಕರನ್ನಾಗಿ ತನಗೆ ಬೇಕಾದ ಪಾತ್ರಗಳನ್ನು ತನಗೆ ಬೇಕಾದ ಹಾಗೆ ಮಾರ್ಪಾಡು ಮಾಡಿಕೊಂಡು ತನ್ನ ಕಲ್ಯಾಣಕ್ಕೆ ಭೂಮಿಕೆಯನ್ನು ತಯಾರಿಸಿ ತಾನೇ ಕೊರವಂಜಿಯಾಗಿ ಎಲ್ಲರನ್ನು ನಿಯಂತ್ರಿಸಿದ ವಿವರಗಳನ್ನು ಈ ನುಡಿಯಲ್ಲಿ ನೋಡಬಹುದು.

ಬಡುಕನೆದೆಗೊದೆಯಲವನಡಿಗಳಿಗೆ ಶರಣೆಂದ
ಕಡು ಕೋಪಿ ಗೋವಳನ ಕೊಡಲಿಗೊಡ್ಡಿದ ಶಿರವ
ಹಿಡಿ ಮಣ್ಣು ಪಿಂಡಗಳ ನಿತ್ತ ಚಂಡಾಲನಿಗೆ
ಸಡಗರದಿ ಲಕುಮಿಯನೇ ಕರದಲಿತ್ತ ಪ್ರಸನ್ನ

ಎಂಬ ಕಡೆಯ ನುಡಿಯಲ್ಲಿ ಇಡೀ ಶ್ರೀನಿವಾಸ ಕಲ್ಯಾಣ ಪ್ರಸಂಗವನ್ನು ಅಂದರೆ ಭೃಗು ಮಹರ್ಷಿಗಳ ಪ್ರಕರಣ, ಲಕ್ಷ್ಮಿ ವಿಯೋಗ, ಗೋಪಾಲಕನ ಕೊಡಳಿಗೆ ಶಿರವೊಡ್ಡಿದ ಶ್ರೀನಿವಾಸನ ವಿವರ, ಆಕಾಶರಾಯನ ಜನ್ಮವೃತ್ತಾಂತ, ಪದ್ಮಾವತಿಯ ಜನ್ಮರಹಸ್ಯ ಹೀಗೆ ಎಲ್ಲಾ ವಿಷಯವನ್ನು ಸ್ವಾರಸ್ಯವಾಗಿ ನಾಲ್ಕೇ ಸಾಲಿನಲ್ಲಿ ಸಂಗ್ರಹಿಸಿರುವುದು ಶ್ರೀಮದ್ ವಿದ್ಯಾ ಪ್ರಸನ್ನ ತೀರ್ಥರ ಕವಿತಾ ಪ್ರೌಢಿಮೆಗೆ ಹಿಡಿದ ಕೈಗನ್ನಡಿ ಆಗಿದೆ. 34 ವರ್ಷಗಳ ಕಾಲ ಶ್ರೀಮದ್ ವ್ಯಾಸರಾಜ ಮಠ ಸೋಸಲೆಯ ಅಧಿಪತಿಗಳಾಗಿ ಶ್ರೀ ಪ್ರಸನ್ನ ತೀರ್ಥರು ಪ್ರಸನ್ನ ಎಂಬ ಅಂಕಿತದಲ್ಲಿ 350ಕ್ಕೂ ಹೆಚ್ಚು ಕೀರ್ತನೆಗಳನ್ನು ಮುಕ್ತಗಳನ್ನು ದೀರ್ಘ ಕೃತಿಗಳನ್ನು ರಚಿಸಿದರು. ಅವರ ಕೀರ್ತನೆ ಗೆಲ್ಲಲಿ 400 ಕ್ಕೂ ಹೆಚ್ಚುಗಾದೆ ಮಾತುಗಳ ನುಡಿಗಟ್ಟುಗಳ ಸಣ್ಣ ಜನಪದ ಕೋಶವೇ ಅನಾವರಣಗೊಳ್ಳುತ್ತದೆ. ಕೇವಲ ಸಾಹಿತ್ಯ ರಚನೆ ಒಂದೇ ಅಲ್ಲದೇ ಅನೇಕ ಸಾಮಾಜಿಕ ಕಾರ್ಯಗಳನ್ನು ಮಾಡಿದ ಎಲ್ಲಾ ಕಾರ್ಯವನ್ನು ತಮ್ಮಉಪಾಸ್ಯ ಮೂರ್ತಿ ಶ್ರೀಮನ್ ಮೂಲ ಗೋಪಾಲ ಕೃಷ್ಣ ದೇವರಿಗೆ ಸಮರ್ಪಿಸಿದರು. ಸೌಮ್ಯಾನಾಮ ಸಂವತ್ಸರದ ಮಾರ್ಗಶೀರ್ಷ ಹುಣ್ಣಿಮೆ ಮಂಗಳವಾರ ದಿನಾಂಕ 23.12.1969 ರಂದು ಸೋಸಲೆಯಲ್ಲಿ ತಮ್ಮ ಪರಮ ಗುರುಗಳಾದ ಶ್ರೀಮದ್ ವಿದ್ಯಾರತ್ನಾಕರ ತೀರ್ಥರ ಸಮೀಪದಲ್ಲಿ ಬೃಂದಾವನಸ್ಥರಾಗಿ 20 ನೇ ಶತಮಾನದ ಆದರ್ಶ ಪೀಠಾಧಿಪತಿಗಳ ಸಾಲಿನಲ್ಲಿ ಅಗ್ರಮಾನ್ಯರಾದರು ಎಂದರೆ ಅತಿಶಯೋಕ್ತಿ ಆಗಲಾರದು. ಅವರ ಶಿಷ್ಯರಾದ ಶ್ರೀಮದ್ ವಿದ್ಯಾ ಪಯೋನಿಧಿ ತೀರ್ಥರು ತಮ್ಮ ಗುರುಗಳನ್ನು

ಶ್ರೀಮದ್ ಕೃಷ್ಣಪದಾಂಭೋಜ ಮಾನಸಂ ಕವಿಪುಂಗವಂ
ಶ್ರೀಮದ್ ವಿದ್ಯಾಪ್ರಸನ್ನಾಬ್ಧಿಂ ಗುರುಂ ವಂದೇ ನಿರಂತರಂ

ಎಂದು ಸ್ತುತಿಸಿದ್ದಾರೆ.

ಶ್ರೀ ವಿದ್ಯಾ ಪ್ರಸನ್ನ ತೀರ್ಥರ ಸ್ತುತಿಪ ನಾಲ್ಕಾರು ಕೀರ್ತನೆಗಳು ಸಹ ದೊರೆಯುತ್ತದೆ.

ಪ್ರಸನ್ನ ತೀರ್ಥರ ಕೃತಿಗಳನ್ನು ಅವರ ಕಾಲದಲ್ಲೇ ಶ್ರೀಗಳು ಮುದ್ರಣ ಮಾಡಿ ಪ್ರಕಾಶನ ಮಾಡಿಸಿದ್ದರು. ನಂತರ ಅವರ ಶಿಷ್ಯರಾದ ಶ್ರೀಮದ್ ವಿದ್ಯಾಪಯೋನಿಧಿ ತೀರ್ಥರು ಪಯೋನಿಧಿ ಪ್ರಕಾಶನದ ಮೂಲಕ ಪ್ರಕಾಶನ ಮಾಡಿಸಿದ್ದರು. ಶ್ರೀ ಮದ್ ವಿದ್ಯಾಪ್ರಸನ್ನ ತೀರ್ಥರ ಕೃತಿಗಳನ್ನು ತಮ್ಮ ಉಪನ್ಯಾಸಗಳ ಮೂಲಕ ಪ್ರಚಾರ ಮಾಡಿದ ಕೀರ್ತಿ ಅವರ ಪರಂಪರೆಯಲ್ಲಿ ಬಂದ ಶ್ರೀಮದ್ ವ್ಯಾಸ ರಾಜಮಠ ಸೋಸಲೆಯ 40 ನೇಯ ಪೀಠಾಧಿಪತಿಗಳು ಶ್ರೀವಿದ್ಯಾ ಮನೋಹರ ತೀರ್ಥರ ಕರ ಕಮಲ ಸಂಜಾತರಾದ ಶ್ರೀವಿದ್ಯಾವಿಜಯತೀರ್ಥ ಶ್ರೀಪಾದಂಗಳವರಿಗೆ ಸಲ್ಲುತ್ತದೆ. ಸಮಗ್ರ ದಾಸ ಸಾಹಿತ್ಯ ಸಂಪುಟಗಳಲ್ಲಿ ಶ್ರೀವಿದ್ಯಾಪ್ರಸನ್ನ ತೀರ್ಥರ ಕೀರ್ತನೆಗಳ ಸಂಪುಟವನ್ನು ಡಾ॥ ಅನಂತಪದ್ಮನಾಭರಾವ್ ಅವರು ಸಂಪಾದಿಸಿದ್ದಾರೆ.

ಶ್ರೀಮದ್ ವಿದ್ಯಾಪ್ರಸನ್ನ ತೀರ್ಥ ಶ್ರೀಪಾದಂಗಳವರ ಸಮಗ್ರ ಸಾಹಿತ್ಯ ಬಂದವರನ್ನು ಪರಿಮಳ ಗೆಳೆಯರ ಬಳಗದ ಡಾ॥ಜಯಸಿಂಹ ಅವರು ಪ್ರಸನ್ನ ಸಾಹಿತ್ಯ ಪ್ರವರ್ತಕ ಶ್ರೀ ವಿದ್ಯಾ ಪ್ರಸನ್ನ ತೀರ್ಥರು ಎಂಬ ಪುಸ್ತಕವನ್ನು ಸಂಪಾದಿಸಿ ವಿದ್ವತ್ ವಲಯಕ್ಕೆ ಶ್ರೀ ಮದ್ ವಿದ್ಯಾ ಪ್ರಸನ್ನ ತೀರ್ಥರ ಸಾಹಿತ್ಯದ ವಿರಾಟ್ ರೂಪದ ಪರಿಚಯವನ್ನು ಮಾಡಿಸಿದ್ದಾರೆ.



# ಶ್ರೀ ಅಕ್ಷೋಭ್ಯ ತೀರ್ಥರು



– ಶ್ರೀಧರ ರಾಯಸಂ

ಶ್ರೀ ಮಧ್ವಾಚಾರ್ಯರ ಶಿಷ್ಯರಾದ ಅಕ್ಷೋಭ್ಯತೀರ್ಥರು , ಶ್ರೀ ಮಧ್ವಾಚಾರ್ಯರಿಂದ ಸಂನ್ಯಾಸಾಶ್ರಮ ಸ್ವೀಕರಿಸಿ, ಅಜ- ವಿಠಲ ಮತ್ತು ಶ್ರೀದೇವಿ, ಭೂದೇವಿ ಪ್ರತಿಮೆಗಳನ್ನು ಪಡೆದ ಮಹಾನ್ ಯತಿಗಳು ಸರ್ವಜ್ಞ ಪೀಠವನ್ನು 15 ವರ್ಷ ಅಲಂಕರಿಸಿ, ದ್ವೈತ ಸಿದ್ಧಾಂತ ಪ್ರಚಾರ ಮಾಡಿ, (ಕ್ರಿ.ಶ. 1350-1365) ಶ್ರೀಜಯತೀರ್ಥರನ್ನು ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡರು. ಅನೇಕ ದ್ವೈತ್ಯ ವೇದಾಂತ ರಹಸ್ಯವನ್ನು ಬೋಧಿಸಿ, ತಮ್ಮ ವಿದ್ವತ್ತನ್ನು ಧಾರೆಯೆರೆದ ಮಹಾನ್ ಪುರುಷರು. ಅದರಂತೆ ಇವರ ಶಿಷ್ಯರಾದ, ಟೀಕಾಚಾರ್ಯರು (ಧೋಂಡೋಪಂಥ ರಘುನಾಥ) ಆಚಾರ್ಯಮಧ್ವರ ಬಹುತೇಕ ಗ್ರಂಥಗಳಿಗೆ ಟೀಕೆ ಬರೆದು ಪ್ರಸಿದ್ಧರಾದರು. “ಶ್ರೀಮನ್ನ್ಯಾಯಸುಧಾ’’ ಟೀಕಾ ಗ್ರಂಥ ಶಿಷ್ಯರಿಗೆ ಪಠಿಸಲು ಉದ್ಗ್ರಂಥವಾಗಿದೆ. ಶ್ರೀ ಜಯತೀರ್ಥರು, ತಮ್ಮ ಗುರುಗಳಾದ ಅಕ್ಷೋಭ್ಯತೀರ್ಥರನ್ನು, ಅನೇಕ ಗ್ರಂಥಗಳಲ್ಲಿ ಸ್ಮರಿಸಿ ಅವರ ತುಂಬು ಹೃದಯದ ಕರುಣೆಯನ್ನು ಕೊಂಡಾಡಿದ್ದಾರೆ.

ಮಹಾರಾಷ್ಟ್ರದ ಮಂಗಳವೇಡೆ ಪ್ರಾಂತ್ಯದ ಕೇಶವ ಭಟ್ಟರ ಪುತ್ರರಾಗಿ, ಗೋವಿಂದ ಭಟ್ಟರು ಎಂಬ ಹೆಸರಿನಿಂದ ಭಾರದ್ವಾಜ ಗೋತ್ರದಲ್ಲಿ, ಕ್ರಿ.ಶ. 1282 ರಂದು ಜನಿಸಿದರೆಂದು ಇತಿಹಾಸ ತಿಳಿಸುತ್ತದೆ. ಪದ್ಮನಾಭತೀರ್ಥರ ನಂತರ ನರಹರಿತೀರ್ಥರು, ಮಾಧವತೀರ್ಥರು, ಅಕ್ಷೋಭ್ಯತೀರ್ಥರು, ಸರ್ವಜ್ಞಪೀಠ ಅಲಂಕರಿಸಿದ ಮಹಾನ್ ಯತಿಗಳು. ಕೇಶವಭಟ್ಟರಿಗೆ ಇಬ್ಬರು ಪುತ್ರರಿದ್ದರು. ಹಿರಿಯ ಪುತ್ರ, ಧುಂಡಿರಾಜ (ಶ್ರೀ ಜಯತೀರ್ಥರ ತಂದೆ) ಮತ್ತು ಗೋವಿಂದಭಟ್ಟರು. ಗೋವಿಂದಭಟ್ಟರು (ಅಕ್ಷೋಭ್ಯತೀರ್ಥರು) ತಮ್ಮ ಪ್ರಥಮ ವಿದ್ಯಾಭ್ಯಾಸ, ದೇವಗೆ ಗ್ರಾಮದ ಗುರುಕುಲದಲ್ಲಿ ಕಲಿತರು. ಬಾಲ್ಯದಲ್ಲಿಯೇ ಧಾರ್ಮಿಕ ಗ್ರಂಥಗಳನ್ನು ಓದುವ ಶ್ರದ್ಧೆ, ತತ್ವಜ್ಞಾನದಲ್ಲಿ ಆಸಕ್ತಿ ! ಸಂಸ್ಕೃತ, ಕನ್ನಡ, ಮರಾಠಿ, ಗ್ರಂಥಗಳನ್ನು ಓದುತ್ತಿದ್ದರು. ಸಂಚಾರ ಪ್ರಿಯರಾದ ಗೋವಿಂದ ಭಟ್ಟರು, ವೇಣು ಗ್ರಾಮ,ಹಲಸಿ,ಬಳ್ಳಿ ಗ್ರಾಮ,ದ್ವಾರಾವತಿ,ತಾಲಗುಂದ,ಐಹೊಲೆ ಪಟ್ಟದ ಕಲ್ಲು, ಮುಂತಾದ ಸ್ಥಳಗಳನ್ನು ಸಂದರ್ಶಿಸಿದರು. ತಂದೆ ತಿಳಿಸಿದ ರಾಜನೀತಿಯಲ್ಲಿ, ಆಸಕ್ತಿಯಿಲ್ಲದೆ ಆಧ್ಯಾತ್ಮಿಕತೆ ಕಡೆಗೆ ಮನ ಸೋತರು! ಇವರ ತಂದೆ, ಕೇಶವಭಟ್ಟರು,ನಾವು ವೈದಿಕ ಸಂಪ್ರದಾಯದ ಕುಟುಂಬದವರಲ್ಲ, ರಾಜ್ಯವಾಳಬೇಕು ಸಮಯ ಬಂದರೇ ಯುದ್ಧವನ್ನೂ ಮಾಡಬೇಕು ಎಂದು ಹೇಳುತ್ತಿದ್ದರು. ಹಲವಾರು ತಿಂಗಳು, ಗೋವಿಂದಭಟ್ಟರು, ಮನೆ ಬಿಟ್ಟು, ಹೊರಗೇ ಇರುತ್ತಿದ್ದರು! ವಿವಾಹದ ಕಡೆಗೆ ಇಷ್ಟವಿಲ್ಲದೆ, ಆಧ್ಯಾತ್ಮಿಕ ಕಡೆಗೆ ತುಡಿತ ಮಿಡಿತ ಇವರದಾಗಿತ್ತು. ಗೋವಿಂದಭಟ್ಟರು ಮನೆಬಿಟ್ಟು ಹೊರಗಡೆ ಹೋದಾಗ, ಇವರ ತಂದೆ ಕೇಶವ ಭಟ್ಟರು ತೀರಿಕೊಂಡರು. ಅಣ್ಣ ಧುಂಡಿರಾಜ ಅವರ ಆಶ್ರಯದಲ್ಲಿದ್ದರು.

ಗೋವಿಂದಭಟ್ಟರು,ಪ್ರತಿನಿತ್ಯ ದೇವತಾರ್ಚನೆ, ನೈವೇದ್ಯ, ನೈಮಿತ್ತಿಕ ಕರ್ಮಗಳನ್ನು,ಪೂರ್ಣಗೊಳಿಸಿ ಭೋಜನ ಮಾಡುತ್ತಿದ್ದರು. ಉಡುಪಿಗೆ ಹೊರಟಿದ್ದ, ಶ್ರೀಪದ್ಮನಾಭ ತೀರ್ಥರನ್ನು ಕಂಡು ನಮಸ್ಕರಿಸಿ, ಸನ್ಯಾಸಾಶ್ರಮ ಕೊಡಲು ಕೇಳಿದರು. ಶ್ರೀಪದ್ಮನಾಭ ತೀರ್ಥರು ಇವರ ಬೇಡಿಕೆಗೆ ಒಪ್ಪದೇ, ನಾವು, ನಿಮ್ಮ ಸ್ವರೂಪೋದ್ಧಾರಕರಲ್ಲ. ನಮಗೆಲ್ಲಾ ಸ್ವರೂಪೋದ್ಧಾರಕರು, ಉಡುಪಿಯಲ್ಲಿರುವ ಶ್ರೀ ಮಧ್ವರು ಅವರನ್ನು ಭೇಟಿ ಮಾಡಿ,ಎಂದರು. ಉಡುಪಿಗೆ, ಗೋವಿಂದಭಟ್ಟರು ಹೊರಟು, ಶ್ರೀಮಧ್ವಾಚಾರ್ಯರನ್ನು ಕಾಣಲು, ಸಮುದ್ರದ ಹತ್ತಿರ ಹೊರಟರು. ಅಂದು, ಅಮಾವಾಸ್ಯೆ, ಸೂರ್ಯಗ್ರಹಣ!! ಆನೆಯ ಗಾತ್ರದ ಸಮುದ್ರದ ಅಲೆಗಳು ಬರುತ್ತಿದ್ದವು. ಆನೆ ಗಾತ್ರದ ಅಲೆಗಳನ್ನು ನೋಡಿ, ಗೋವಿಂದ ಭಟ್ಟರಿಗೆ ಹೆದರಬೇಡವೆಂದು ಹೇಳಿ, ಶ್ರೀಮಧ್ವರು, ಗೋವಿಂದ ಭಟ್ಟರನ್ನು, ಸ್ಪರ್ಶಿಸಿ, ಅನುಗ್ರಹ ಮಾಡಿದಾಗ, ಗೋವಿಂದ ಭಟ್ಟರಿಗೆ, ತಕ್ಷಣ. ಅಪರೋಕ್ಷ ಜ್ಞಾನವಾಯಿತು. ನಂತರ ಆಚಾರ್ಯಮಧ್ವರು, ಕಣ್ವತೀರ್ಥಕ್ಕೆ ಬಂದು, ಹಿಂಬಾಲಿಸಿದ ಗೋವಿಂದಭಟ್ಟರ ಅಪಾರ ಪಾಂಡಿತ್ಯ ಕಂಡು, ಸಂತೋಷದಿಂದ ಗೋವಿಂದಭಟ್ಟರಿಗೆ, ಅಕ್ಷೋಭ್ಯತೀರ್ಥ ಎಂದು ನಾಮಕರಣ ಮಾಡಿ, ಸಂನ್ಯಾಸಾಶ್ರಮ ನೀಡಿದರು. (ಅಕ್ಷೋಭ್ಯ ಎಂದರೆ ಕ್ಷೋಭೆ ಇಲ್ಲದವನು ಎಂದರ್ಥ) ಅಕ್ಷೋಭ್ಯ ತೀರ್ಥರು, ಅತಿ ಚಿಕ್ಕ ವಯಸ್ಸಿನಲ್ಲೇ, ಶ್ರೀಮಧ್ವರ ನಂತರ ಸನ್ಯಾಸಿಯಾದ ಮೊದಲಿಗರು ! ಆಚಾರ್ಯರ ಅನುಗ್ರಹದಿಂದ ಹರಿಸರ್ವೋತ್ತಮ, ತತ್ವ, ಜೀವೋತ್ತಮ ತತ್ವ, ಭೇದ ತತ್ವ ಕಲಿತರು. ಪುನಃ ಮಂಗಳವೇಡೆಗೆ ವಾಪಸ್ ಬಂದು, ಅಕ್ಷೋಭ್ಯತೀರ್ಥರು, ತಮ್ಮ ಸಹೋದರರಾದ ಧುಂಡಿರಾಜನಿಗೆ, ಸಂತಾನವಾಗಲು ಅಹೋಬಲ ನರಸಿಂಹದೇವರನ್ನು ಪೂಜಿಸಲು, ಹೇಳಿದರು.

ಬಹಳ ಸಮಯದ ನಂತರ ಧುಂಡಿರಾಜರಿಗೆ, ಪುತ್ರ ಸಂತಾನವಾಯಿತು. ಆ ಪುತ್ರನೇ, ಮುಂದೆ, ಜಯತೀರ್ಥರೆಂದು ಪ್ರಸಿದ್ಧಿಯಾದರು. ಅದೇ ರೀತಿ ವಿಜಯನಗರದ ಅರಸ ಮುಳಬಾಗಿಲು ಮಂಡಲೇಶ್ವರನಾಗಿದ್ದ, ಕೆಂಪರಾಯನಿಗೂ, ಸಂತಾನವಾಗಲು ಅನುಗ್ರಹಿಸಿದರು. ಅನೇಕ ಸಂಪತ್ತು ನೀಡಲು ಮಂಡಲೇಶ್ವರ ಮುಂದಾದಾಗ, ನಿರಾಕರಿಸಿ, ವಾಕ್ಯಾರ್ಥ ಮಾಡಲು ವಿದ್ಯಾರಣ್ಯರೊಂದಿಗೆ ವ್ಯವಸ್ಥೆ ಮಾಡೆಂದು ಹೇಳಿದರು. ವಾಕ್ಯಾರ್ಥದಲ್ಲಿ, ತತ್ವಮಸಿ ವಾಕ್ಯಾರ್ಥದಲ್ಲಿ ಅಕ್ಷೋಭ್ಯತೀರ್ಥರು ಜಯ ಗಳಿಸಿದರು. ಭೇದ ತತ್ವ, ಮಧ್ವತತ್ವ ನಿರೂಪಿಸಿ, ಜಯಗಳಿಸಿದ ಕುರುಹಾಗಿ ರಾಜ ಮುಳಬಾಗಿಲುನಲ್ಲಿ ಜಯಸ್ತಂಭ ನಿರ್ಮಿಸಿದ. ಶ್ರೀ ಅಕ್ಷೋಭ್ಯತೀರ್ಥರು,ತಮ್ಮ ಉತ್ತರಾಧಿಕಾರಿಯನ್ನು ಹುಡುಕಲು, ಪ್ರಾರಂಭಿಸಿ ಪಂಢರಾಪುರಕ್ಕೆ ಹೊರಟು ವಿಠಲನನ್ನು ತೋರಿಸು ಎಂದು ಸ್ವಪ್ನದಲ್ಲಿ ಕೇಳಿಕೊಂಡರು. ಸ್ವಪ್ನದಲ್ಲಿ ವಿಠಲ, ಶ್ರೀಮಧ್ವಾ ಚಾರ್ಯರನ್ನು, ಕೇಳು ಎಂದು ಸ್ವಪ್ನವಾದಾಗ ಕುದುರೆಯ ಮೇಲೆ ಕುಳಿತು ಭೀಮಾನದಿ ನೀರನ್ನು ಕುಡಿಯುವವನು. ಅವರೇ ನಿನ್ನ ಮುಂದಿನ ಉತ್ತರಾಧಿಕಾರಿ ಎಂಬ ಮಧ್ವಾಚಾರ್ಯರ ಸ್ವಪ್ನವಾಯಿತು. ಅದರಂತೆ, ಮರುದಿನ ಕುದುರೆ ಸಮೇತ ಬಂದಿದ್ದ. ಯುವಕ ಪ್ರಾಣಿಯಂತೆ ಬಗ್ಗಿ, ನೀರನ್ನು ಕುಡಿದನು. ಅಕ್ಷೋಭ್ಯತೀರ್ಥರು ಕಿಂ ಪಶುಂ ಪೂರ್ವ ದೇಹೇ? ಎಂದು ಪ್ರಶ್ನಿಸಿದರು. ಆ ಯುವಕನೇ, ತಮ್ಮ ಪೂರ್ವಾಶ್ರಮದ ಸಹೋದರನ ಪುತ್ರ ಎಂದು ಸಂತೋಷಪಟ್ಟು, ಆಶ್ರಮ ನೀಡಿ ಜಯತೀರ್ಥ ಎಂದು ನಾಮಕರಣ ಮಾಡಿದರು. ಜಯತೀರ್ಥರು ನಂತರ ಶ್ರೀಮಧ್ವಾಚಾರ್ಯರ ಅನೇಕ ಗ್ರಂಥಗಳಿಗೆ ಟೀಕೆ ಬರೆದರು. ಅದರಲ್ಲಿ ಶ್ರೀ ಮನ್ಯಾಯ ಸುಧಾ ಟೀಕೆ ಅತ್ಯಂತ ಪ್ರಸಿದ್ಧಿ ಟೀಕಾಗ್ರಂಥವಾಗಿದೆ. ಶ್ರೀ ಅಕ್ಷೋಭ್ಯತೀರ್ಥರು, ಅನೇಕ ಉಪಯುಕ್ತ ಮಹಿಮೆಗಳನ್ನು ಮಾಡಿ ಜನರ ಕಷ್ಟ ಕಾರ್ಪಣ್ಯಗಳನ್ನು ಬ್ರಹ್ಮಹತ್ಯಾ ದೋಷ ಪರಿಹಾರ ಮಾಡಿದರು. ಮಹದೇವ ಭಟ್ಟರಿಗೆ ಸಂನ್ಯಾಸಶ್ರಮ ನೀಡಿ, ತ್ರೈಲೋಕ್ಯಭೂಷಣ ತೀರ್ಥ ಎಂದು ನಾಮಕರಣ ಮಾಡಿದರು. ಇವರೇ ಅಕ್ಷೋಭ್ಯತೀರ್ಥ ಮಠದ ಕೂಡ್ಲಿಯ ಮೂಲ ಮಠಾಧೀಶರು.

ದ್ವೈತ ಸಿದ್ಧಾಂತ ಪ್ರಚಾರ ಮಾಡಿ, ಹಲವಾರು ಮಹಿಮೆಗಳನ್ನು ತೋರಿಸಿ, ಶ್ರೀ ಅಕ್ಷೋಭ್ಯತೀರ್ಥರು, ಕಲಬುರ್ಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಕಾಗಿನೀನದಿ ತೀರದ ಮಳಖೇಡದಲ್ಲಿ, ಮಾರ್ಗಶಿರ ಮಾಸ, ಬಹುಳ ಪಂಚಮಿ,ವಿಶ್ವಾವಸು ಸಂವತ್ಸರ,ಕ್ರಿ.ಶ.1365ರಂದು ವೃಂದಾವನಸ್ಥರಾದರು. ಪ್ರತಿ ವರ್ಷ ಇವರ ಆರಾಧನೆ ನಡೆಯುತ್ತದೆ.



# ಶಿಖಂಡಿಯಾದ ಅಂಬೆ

– ಹನುಮಂತ.ಮ.ದೇಶಕುಲಕರ್ಣಿ
9480364915

ಕಾಶಿರಾಜ ಪ್ರತಾಪಸೇನನಿಗೆ ಅಂಬೆ,ಅಂಬಿಕೆ,ಅಂಬಾಲಿಕೆ ಎಂಬ ಮೂವರು ಮಕ್ಕಳಿದ್ದರು. ಇವರು ತನ್ನ ತಮ್ಮನಿಗೆ ಯೋಗ್ಯರಾಗಬಹುದೆಂದು ಭೀಷ್ಮನು ಯೋಚಿಸಿ ಮಾತುಕತೆ ಆರಂಭಿಸಬೇಕೆನ್ನುವಷ್ಟರಲ್ಲಿ ಕಾಶೀರಾಜನು ಸ್ವಯಂವರನ್ನು ಏರ್ಪಡಿಸಿರುವನೆಂಬ ಸುದ್ದಿಯಾಯಿತು.ಹಸ್ತಿನಾಪುರಕ್ಕೆ ಸ್ವಯಂವರದ ಆಹ್ವಾನ ಇರಲಿಲ್ಲ. ಭೀಷ್ಮನಿಗೆ ಅಪಮಾನವಾದಂತಾಗಿ ಕಾಶೀರಾಜನ ಮನೆಯಿಂದ ಕುರುವಂಶಕ್ಕೆ ಹೆಣ್ಣು ತರುವುದು ಮೊದಲಿನಿಂದಲೂ ನಡೆದು ಬಂದ ಪದ್ಧತಿ. ಅಂಥಾದ್ದರಲ್ಲಿ ಪದ್ಧತಿಗೆ ವಿರೋಧವಾಗಿ ಕಾಶೀರಾಜನು ಸ್ವಯಂವರವನ್ನು ತನಗೆ ತಿಳಿಸದೆ ಏರ್ಪಡಿಸುವುದೇ? ಎಂದು ಸ್ವಯಂವರ ನಡೆಯುತ್ತಿದ್ದೆಡೆಗೆ ಧಾವಿಸಿದನು.

ಅಲ್ಲಿ ಸ್ವಯಂವರಕ್ಕೆ ಅನೇಕ ರಾಜಕುಮಾರರು ಬಂದಿದ್ದರು. ಅವರು ಬ್ರಹ್ಮಚಾರಿಗೆ ಇಲ್ಲೇನು ಕೆಲಸವೆಂದು ಅಪಹಾಸ್ಯ ಮಾಡಿದರು. ಆಗ ಭೀಷ್ಮನು ಈ ರಾಜಕುಮಾರಿಯರು ಕುರುವಂಶದ ಸೊಸೆಯರಾಗುವರು ಧೈರ್ಯವಿದ್ದವರು ನನ್ನೊಂದಿಗೆ ಯುದ್ಧಮಾಡಿ ಇವರನ್ನು ಪಡೆಯಿರಿ ಎಂದನು. ಎಲ್ಲರೂ ಭೀಷ್ಮನೊಂದಿಗೆ ಒಟ್ಟಾಗಿ ಯುದ್ಧ ಮಾಡಿ ಸೋತರು. ಯುದ್ಧದಲ್ಲಿ ಸಾಲ್ವರಾಜನು ಪರಾಕ್ರಮವನ್ನು ತೋರಿದರೂ ಭೀಷ್ಮನು ಏಕಾಂಗಿಯಾಗಿ ಸೋಲಿಸಿ ಸೋತ ಸಾಲ್ವನಿಗೆ ಭೀಷ್ಮನು ಜೀವಭಿಕ್ಷೆ ನೀಡಿ ರಾಜಮಾರಿಯರೊಂದಿಗೆ ಹಸ್ತಿನಾಪುರಕ್ಕೆ ಬಂದನು.

ಹಸ್ತಿನಾಪುರದಲ್ಲಿ ಯುವರಾಣಿಯರನ್ನು ನೋಡಿ ಸಂಭ್ರಮಿಸಿದರು ಹಿರಿಯವಳಾದ ಅಂಬೆಯು ಭೀಷ್ಮ ಹಾಗೂ ಸತ್ಯವತಿಯರಲ್ಲಿ ತಾನು ಸಾಲ್ವನನ್ನು ಪ್ರೀತಿಸಿರುವುದಾಗಿ ತಿಳಿಸಿದಾಗ ಭೀಷ್ಮನು ಅವಳನ್ನು ರಕ್ಷಣೆಯೊಂದಿಗೆ ಸಾಲ್ವನಲ್ಲಿಗೆ ಕಳಿಸಿದ.ಅಂಬಿಕೆ, ಅಂಬಾಲಿಕೆಯರು ವಿಚಿತ್ರವೀರ್ಯನನ್ನು ಮದುವೆಯಾದರು, ಭೀಷ್ಮನಿಂದ ಕಳಿಸಲ್ಪಟ್ಟ ಅಂಬೆಗೆ, ನಿನ್ನನ್ನು ಭೀಷ್ಮನು ಯುದ್ಧದಲ್ಲಿ ಗೆದ್ದಿದ್ದಾನೆ. ನೀನು ಅವನ ಸೊತ್ತು ಶತ್ರುವಿನ ಉಡುಗೊರೆ ಸ್ವೀಕರಿಸಲು ನಾನು ಭಿಕ್ಷುಕನಲ್ಲ ಎನ್ನುವನು. ತಿರಸ್ಕೃತಳಾದ ಅಂಬೆ ಕಣ್ಣೀರಿಡುತ್ತಾ ಪುನಃ ಭೀಷ್ಮನಲ್ಲಿಗೆ ಬಂದು ಸಾಲ್ವನಿಂದ ತಿರಸ್ಕೃತಳಾದೆ ನೀನೇ ನನಗೆ ಜೀವನ ಕೊಡೆಂದು ಕೇಳುವಳು. ಭೀಷ್ಮನು, ತಾನು ಬ್ರಹ್ಮಚರ್ಯದ ಪ್ರತಿಜ್ಞೆ ಮಾಡಿದುದರಿಂದ ಇದು ಸಾಧ್ಯವಿಲ್ಲವೆಂದು ನಿರಾಕರಿಸಿದನು. ದುಃಖಿತಳಾದ ಅಂಬೆ 6 ವರ್ಷ ವ್ಯರ್ಥಕಾಲ ಕಳೆದ ನಂತರ ಭೀಷ್ಮನ ವಿರುದ್ಧ ಸೇಡು ತೀರಿಸಿಕೊಳ್ಳಲು ಸಂಕಲ್ಪ ಮಾಡಿ ಕಾಡಿಗೆ ಹೋಗಿ ಅಲ್ಲಿದ್ದ ಋಷಿ ಗಳೊಂದಿಗೆ ತಾನೂ ತಪಸ್ಸು ಮಾಡುವುದಾಗಿ ಹೇಳುವಳು. ಯೌವನದ ಅಂಬೆ ಆಶ್ರಮದಲ್ಲಿರುವುದು ಸರಿಯಲ್ಲವೆಂದು ಋಷಿಗಳು ಹೇಳಿದರು. ಆಗ ಅಂಬೆಯ ಅಜ್ಜನಾದ ಹೋತ್ರವಹನ ಅಲ್ಲಿಗೆ ಬಂದು, ನನ್ನ ಮಿತ್ರ ಭಾರ್ಗವರು ಭೀಷ್ಮನ ಗುರುಗಳು ಅವರು ಭೀಷ್ಮನಿಗೆ ಹೇಳಿದರೆ, ಅವರ ಮಾತನ್ನು ಮೀರಲಾರ ಹಾಗೂ ನಿನ್ನ ಭೀಷ್ಮನ ಮದುವೆ ಮಾಡಿಸುವೆನೆಂದು ಅಂಬೆಯನ್ನು ಸಂತೈಸಿದ.

ಭಾರ್ಗವರಲ್ಲಿ ಹೋತ್ರವಹನನು ಅಂಬೆಯ ಕೋರಿಕೆಯನ್ನು ಹೇಳಿದಾಗ ಭಾರ್ಗವರು ಶಿಷ್ಯನು ತನ್ನ ಮಾತನ್ನು ತೆಗೆದು ಹಾಕಲಾರನೆಂದು ಆತನನ್ನು ಕರೆದು ಅಂಬೆಯನ್ನು ಮದುವೆಯಾಗಲು ಹೇಳಿದರು. ಭೀಷ್ಮನಿರಾಕರಿಸಿದಾಗ, ಕೋಪಗೊಂಡ ಭಾರ್ಗವರು ಶಾಪ ನೀಡಲೇ? ಅಥವಾ ನನ್ನೊಂದಿಗೆ ಯುದ್ಧ ಮಾಡಿ ಗೆಲ್ಲುತ್ತೀಯಾ? ಎಂದಾಗ ಭೀಷ್ಮನು ಯುದ್ಧಕ್ಕೆ ಸಿದ್ಧನಾದ. ಹಲವು ದಿನಗಳವರೆಗೆ ಫಲಿತಾಂಶ ಬರದಂತೆ ಯುದ್ಧ ನಡೆಯಿತು. ಭೀಷ್ಮನು ಪ್ರಪಂಚ ವಿನಾಶದ ಪ್ರಸ್ವಾಪಾಸ್ತ್ರ ಪ್ರಯೋಗಕ್ಕೆ ಮುಂದಾದಾಗ ದೇವತೆಗಳು ನಾರದನನ್ನೂ, ರುದ್ರನನ್ನೂ ಮುಂದಿಟ್ಟುಕೊಂಡು ಭೀಷ್ಮನಲ್ಲಿಗೆ ಬಂದು ಯುದ್ಧವನ್ನು ನಿಲ್ಲಿಸು, ಅಸ್ತ್ರ ಪ್ರಯೋಗಿಸಬೇಡ.


ನೀನು ಲೋಕವನ್ನು ನಾಶಮಾಡಲು ಜನಿಸಿದವನಲ್ಲವೆಂದು ಯುದ್ಧ ನಿಲ್ಲಿಸುವರು. ಭಾರ್ಗವರು ಶಿಷ್ಯನ ಪರಾಕ್ರಮ ಮೆಚ್ಚಿ ಅಂಬೆಯೊಂದಿಗೆ ತನ್ನ ಪ್ರಯತ್ನ ಭೀಷ್ಮನ ಪ್ರತಿಜ್ಞೆ ಮುರಿಯುವಲ್ಲಿ ಸಫಲವಾಗಲಿಲ್ಲವಾದರೂ ನಾನು ನನ್ನ ಪ್ರಯತ್ನ ಮಾಡಿದೆನೆಂದೂ ಹೇಳಿ ಅಲ್ಲಿಂದ ತೆರಳುವರು.

ನಿರಾಶಳಾದ ಅಂಬೆ ಅಲ್ಲಿಂದ ತೆರಳಿ ಕಠಿಣ ತಪಸ್ಸನ್ನು ಆಚರಿಸಿ ಷಣ್ಮುಖನಿಂದ ಎಂದಿಗೂ ಬಾಡದ ಕಮಲಪುಷ್ಪಗಳ ಮಾಲೆಯೊಂದನ್ನು ಪಡೆದಳು. ಷಣ್ಮುಖನು, ಈ ಮಾಲೆಯನ್ನು ಯಾರು ಕುತ್ತಿಗೆಗೆ ಹಾಕಿಕೊಳ್ಳುವರೋ ಅವರೇ ಭೀಷ್ಮನನ್ನು ಕೊಲ್ಲುವವರು ಎಂದನು. ಅಂಬೆಗೆ ಸಂತೋಷವಾಗಿ, ಈ ಮಾಲೆಯೊಂದಿಗೆ ಅನೇಕ ವೀರರಲ್ಲಿ ಭೀಷ್ಮನನ್ನು ಕೊಲ್ಲಲು ಸಹಾಯ ಕೇಳಿದರೂ ಯಾರೂ ಮುಂದಾಗಲಿಲ್ಲ. ಕೊನೆಗೆ ಪಾಂಚಾಲ ರಾಜನಾದ ದ್ರುಪದನ ಆಸ್ಥಾನಕ್ಕೆ ಬಂದು ವಿನಂತಿಸಿದಾಗ ದ್ರುಪದ ನಿರಾಕರಿಸಿದಾಗ ಕೋಪಗೊಂಡ ಅಂಬೆಯು ಕಮಲಮಾಲೆಯನ್ನು ದ್ರುಪದನ ಆಸ್ಥಾನದ ಕಂಬಕ್ಕೆ ಕಟ್ಟಿ ಅರಣ್ಯಕ್ಕೆ ಹೋಗಿ ಪುನಃ ಉಗ್ರತಪಸ್ಸನ್ನು ಕೈಗೊಂಡಳು.

ಪರಮೇಶ್ವರನು ಪ್ರತ್ಯಕ್ಷನಾಗಿ, ಮಗು,ದುಃಖಿಸಬೇಡ. ಮುಂದಿನ ಜನ್ಮದಲ್ಲಿ ನೀನೇ ಭೀಷ್ಮನನ್ನು ಕೊಲ್ಲುವೆ. ಈ ಜನ್ಮದ ಪ್ರತಿಯೊಂದು ಘಟನೆಯನ್ನೂ ನೀನು ಮುಂದಿನ ಜನ್ಮದಲ್ಲಿ ನೆನಪಿನಲ್ಲಿಡುವೆ. ಪಾಂಚಾಲರಾಜ ದ್ರುಪದನ ಮಗಳಾಗಿ ಹುಟ್ಟುವೆ. ಮೊದಲು ಸ್ತ್ರೀಯಾಗಿದ್ದು ಅನಂತರ ಪುರುಷನಾಗುವೆ. ನೀನು ಖಂಡಿತವಾಗಿಯೂ ನಿನ್ನ ಶತ್ರು ಭೀಷ್ಮನನ್ನು ಕೊಂದು ಸೇಡು ತೀರಿಸಿಕೊಳ್ಳುವೆ ಎಂದನು. ಕೂಡಲೇ ಅಂಬೆ ಚಿತೆಯನ್ನು ಸಿದ್ಧಮಾಡಿ ದೇಹತ್ಯಾಗ ಮಾಡಿ ದ್ರುಪದನ ಮಗಳಾಗಿ ಜನಿಸುವಳು, ಒಂದು ದಿನ ಅರಮನೆಯಲ್ಲಿ ಕಮಲಮಾಲೆಯನ್ನು ಧರಿಸುವಳು, ಯಕ್ಷನೊಬ್ಬನ ಸಹಾಯದಿಂದ ಲಿಂಗ ಪರಿವರ್ತನೆ ಮಾಡಿಸಿಕೊಂಡು ದ್ರೋಣರಲ್ಲಿ ವಿದ್ಯಾಭ್ಯಾಸ ನಡೆಯುವುದು. ಆ ಮಗುವಿಗೆ 'ಶಿಖಂಡಿ' ಎಂದು ಹೆಸರಿಡಲಾಗುತ್ತದೆ. ಶಿಖಂಡಿ ಮುಂದೆ ಅರ್ಜುನನ ಸಾರಥಿಯಾಗುತ್ತಾಳೆ. ಅವಳ ಶಾಪದಿಂದಾಗಿ ಚಿರಂಜೀವಿ ಭೀಷ್ಮಶರಶಯ್ಯೆಯಲ್ಲಿ ಮಲಗುತ್ತಾನೆ.

ತಿರುಮಂಗೈಆಳ್ವಾರರಿಂದ ಮಂಗಳಾ ಶಾಸನ ಬರೆಸಿಕೊಂಡಂತಹಾ ದಿವ್ಯದೇಶಗಳಲ್ಲಿ ತಿರುನಾಂಗೂರ್ ಎಂದು ಪ್ರಸಿದ್ಧಿ ಪಡೆದಿರುವ ಕೆಲವು ದಿವ್ಯ ದೇಶಗಳು ಪಕ್ಕಪಕ್ಕದಲ್ಲೆ ನೆಲೆಸಿವೆ. ಹೆಚ್ಚುಕಡಿಮೆ ಹನ್ನೊಂದು ದಿವ್ಯದೇಶಗಳು ಇದ ರಲ್ಲಿ ಸೇರಿಕೊಂಡಿವೆ. ಇದಕ್ಕೆ ಒಂದು ಇತಿ ಹಾಸವು ಕ್ಷೇತ್ರಮಹಾತ್ಮೆಯಲ್ಲಿ ಕಂಡು ಬರು ತ್ತದೆ.

ದಕ್ಷಪ್ರಜಾಪತಿಯು ತಾನು ನಿರ್ವಹಿಸಿದ ಯಾಗಕ್ಕೆ ಪಾರ್ವತಿಪರಮೇಶ್ವರರನ್ನು ಕರೆ ಯದೆ ಅವಮಾನಿಸಿದ. ಈ ವಿಷಯವನ್ನು ಉಮಾಮಹೇಶ್ವರರು ದಕ್ಷಪ್ರಜಾಪತಿಯನ್ನು ಕೇಳಿದಾಗ ಪುನಃ ಅವರನ್ನು ಅವಮಾನಿಸಿದ. ಪಾರ್ವತಿ ದೇವಿ ಆ ಅವಮಾನವನ್ನು ಸಹಿಸ ಲಾರದೇ ಹೋಮಾಗ್ನಿಯಲ್ಲಿ ಆತ್ಮಸಮರ್ಪಣೆ ಯನ್ನು ಮಾಡಿಕೊಂಡಳು. ಈ ದುಷ್ಕೃತ್ಯವನ್ನು ನೋಡಿದ ಪರಶಿವನು ದಕ್ಷಪ್ರಜಾಪತಿಯ ಯಜ್ಞಶಾಲೆಯಲ್ಲಿ ಹನ್ನೊಂದು ಬಾರಿ ರುದ್ರ ತಾಂಡವವನ್ನು ಮಾಡಿದ. ಆ ಸಮಯದಲ್ಲಿ ಶಿವನ ಜಟಾಜೂಟವು 11 ಬಾರಿ ಭೂಮಿಯನ್ನು ಸ್ಪರ್ಶಿಸಿ 11 ರೂಪದಲ್ಲಿ ಶಿವನು ಕಂಡು ಬಂದಾಗ ಆ ಶಿವರೂಪವೆಲ್ಲವೂ ರುದ್ರತಾಂಡ ವವನ್ನು ಮಾಡಿದರು. ಈ ದೃಶ್ಯವನ್ನು ನೋಡಿ ಎಲ್ಲರೂ ಭಯಗೊಂಡು ಶ್ರೀ ಮನ್ನಾರಾಯಣ ನನ್ನು ಬೇಡಿಕೊಂಡರು. ಆಗ ಲಕ್ಷ್ಮೀವಲ್ಲಭನು 11 ದಿವ್ಯ ಕ್ಷೇತ್ರಗಳಲ್ಲಿ ನೆಲೆಸಿ 11 ರೂಪದಲ್ಲಿದ್ದ ಪರಶಿವನನ್ನು ಒಂದೇ ಮೂರ್ತಿಯಾಗಿ ಕಂಡು ಬರುವಂತೆ ಮಾಡಿ ದಾಕ್ಷಾಯಣಿಯಾದ ಪಾರ್ವತಿಯನ್ನು ಪುನಃ ಜೀವಂತಗೊಳಿಸಿದ. ಪರಮಶಿವನು ಶ್ರೀಮನ್ನಾರಾಯಣನನ್ನು ನೀನೂ ಹೀಗೆ ಹನ್ನೊಂದು ದಿವ್ಯ ಕ್ಷೇತ್ರಗಳಲ್ಲಿ ನೆಲೆಸಿ ಭಕ್ತರನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸಿದಾಗ, ಶ್ರೀಯಃಪತಿಯು ಪಾರ್ವ ತೀಶನ ಮಾತನ್ನು ಅಂಗೀಕರಿಸಿ ಹೀಗೆ 11 ದಿವ್ಯ ಕ್ಷೇತ್ರಗಳಲ್ಲಿ ನೆಲೆಸಿ ಭಕ್ತರನ್ನು ಅನುಗ್ರಹಿಸುತ್ತಿ ದ್ದಾನೆ. ಅದೇ ತಿರುನಾಂಗೂರ್ ದಿವ್ಯದೇಶ ವೆಂದು ಪ್ರಸಿದ್ಧಿಯಾಗಿವೆ.



**108 ದಿವ್ಯ ದೇಶಗಳು**



# ತಿರುಕ್ಕಾವಳಂಬಾಡಿ (ತಿರುನಾಂಗೂರ್)

**ಮೂಲ : ಆಚಾರ್ಯ ಚಕ್ರವರ್ತಿ ರಂಗನಾಥನ್**

**ಅನುವಾದ : ಶ್ರೀಮತಿ. ಸೂರ್ಯವಂಶಿ**

ಅಂತಹಾ ದಿವ್ಯದೇಶದಲ್ಲಿ ದ್ವಾರಕೆಗೆ ಸಮಾನವಾದ ನಂದನ ವನದ ಸದೃಶವಾಗಿರುವ ಅದ್ಭುತವಾದ ಪ್ರಕೃತಿರಮಣೀಯವಾದ ಕಳೆಯೊಂದಿಗೆ ಶೋಭಾಯಮಾನವಾಗಿ ರಾರಾಜಿಸುತ್ತಿರುವ ತಿರುಕ್ಕಾವಳಂಬಾಡಿ ಮೂಲ ಮೂರ್ತಿಯು ಗೋಪಾಲಕೃಷ್ಣನಾಗಿ ರುಕ್ಮಿಣೀಸತ್ಯಭಾಮಾ ಸಮೇತನಾಗಿ ಪೂರ್ವದಿಕ್ಕಿನಲ್ಲಿ ನಿಂತಿರುವ ಭಂಗಿಯಲ್ಲಿ ಭಕ್ತರನ್ನು ಅನುಗ್ರಹಿಸುತ್ತಿದ್ದಾನೆ. ಉತ್ಸವಮೂರ್ತಿ ರಾಜಗೋಪಾಲನ್‌ಸ್ವಾಮಿ, ಅಮ್ಮನವರು ಮಡವಲರ್ ಮಂಗೈ, ಶಂಕಮಲನಾಚ್ಯಾರ್, ರುಕ್ಮಿಣೀಸತ್ಯಭಾಮ ಎನ್ನುವ ಹೆಸರುಗಳಿಂದ ಕರೆಯಲ್ಪಡುತ್ತಿದ್ದಾರೆ. ಹೇಮಾಬ್ಜಪುಷ್ಕರಿಣಿ ತೀರ್ಥ, ಸ್ವಯಂಭೂ ವಿಮಾನ, ವೇದಾಮೋದವಿಮಾನ, ರುದ್ರ, ವಿಷ್ವಕ್ಸೇನ ದೇವತೆಗಳು ಮೊದಲಾದವರು ಇಲ್ಲಿ ಪ್ರತ್ಯಕ್ಷವಾಗಿದ್ದಾರೆ. ಪುರಾಣದ ಪ್ರಕಾರ ಪಾರಿಜಾತವೃಕ್ಷವು ಸ್ಥಳ ವೃಕ್ಷ ವೆಂದು ಕರೆಯಲ್ಪಡುತ್ತಿದೆ.

**ಸ್ಥಳ ಪುರಾಣ :**

ಶ್ರೀ ಕೃಷ್ಣಪರಮಾತ್ಮ ಮತ್ತು ಸತ್ಯಭಾಮೆಗೆ ಜನ್ಮಿಸಿದ ನರಕಾಸುರನು ಭೂಲೋಕವಾಸಿಗಳನ್ನು ಭಯಕ್ಕೀಡು ಮಾಡುತ್ತಾ ಹಾಗೇ ದೇವಲೋಕ ವಾಸಿಗಳನ್ನೂ ಹೆದರಿಸುತ್ತಾ ಎಲ್ಲವನ್ನೂ ತನ್ನ ವಶಕ್ಕೆ ತೆಗೆದುಕೊಂಡಿದ್ದ. ಈ ರೀತಿ ದೇವಲೋಕವನ್ನು ನರಕಾಸುರನು ವಶಪಡಿಸಿಕೊಂಡಾಗ ದೇವೇಂದ್ರನು ಶ್ರೀಮನ್ನಾರಾಯಣನನ್ನು ಉಳಿದ ದೇವತೆಗಳೊಂದಿಗೆ ಬಂದು ತಮ್ಮನ್ನೆಲ್ಲಾ ನರಕಾಸುರನ ವಶದಿಂದ ಬಿಡಿಸಬೇಕೆಂದು ಪ್ರಾರ್ಥಿಸಿದ, ದೇವ ಲೋಕವನ್ನು ಪುನಃ ತಮ್ಮ ವಶಕ್ಕೆ ತಂದು ಕೊಡಬೇಕೆಂದು ಪ್ರಾರ್ಥಿಸಿದ, ಇಂದ್ರನ ಪ್ರಾರ್ಥನೆಯೊಂದಿಗೆ ಶ್ರೀಕೃಷ್ಣನು ಸತ್ಯಭಾಮೆಯೊಂದಿಗೆ ಹೋಗಿ ನರಕಾಸುರನೊಂದಿಗೆ ಯುದ್ಧ ಮಾಡಿ ಅವನನ್ನು ಸಂಹರಿಸಿ, ದೇವಲೋಕ

ವನ್ನು ಪುನಃ ಇಂದ್ರನಿಗೆ ಅನುಗ್ರಹಿಸಿದ. ಯುದ್ಧದ ನಂತರ ಇಂದ್ರನು ಕೃತಜ್ಞತಾಪೂರ್ವಕವಾಗಿ ಭಗವಂತನಿಗೆ ನಮಸ್ಕರಿಸಿದ. ಅಲ್ಲಿ ಅಂದವಾದ ಪಾರಿಜಾತವೃಕ್ಷವನ್ನು ನೋಡಿದ ಸತ್ಯಭಾಮೆ ಅದನ್ನು ದ್ವಾರಕೆಗೆ ತೆಗೆದುಕೊಂಡು ಹೋಗಬೇಕೆಂದು ಆಸೆ ಪಟ್ಟಳು. ಆಕೆಯ ಇಚ್ಛೆಯನ್ನು ಶ್ರೀಕೃಷ್ಣನು ಇಂದ್ರನಿಗೆ ತಿಳಿಸಿದ. ಆದರೆ ಇಂದ್ರನು ಅದಕ್ಕೆ ಒಪ್ಪಲಿಲ್ಲ. ಆಗ ಶ್ರೀಕೃಷ್ಣನು ಇಂದ್ರನೊಂದಿಗೆ ಯುದ್ಧ ಮಾಡಿದ. ನಂದನಂದನನು ಆ ಯುದ್ಧದಲ್ಲಿ ಗೆದ್ದು ಪಾರಿಜಾತವೃಕ್ಷವನ್ನು ದ್ವಾರಕೆಗೆ ತೆಗೆದುಕೊಂಡು ಹೋದ. ಈ ಅದ್ಭುತವಾದ ಕತೆಯನ್ನು ತಿರುಮಂಗೈ ಆಳ್ವಾರರು ಪೆರಿಯತಿರುಮೊಳಿ ಎಂಬ ದಿವ್ಯ ಪ್ರಬಂಧದಲ್ಲಿ ನಾಲ್ಕನೆಯ ಶತಕದಲ್ಲಿ ಐದನೆಯ ಶಕದಲ್ಲಿ ವರ್ಣಿಸಿದ್ದಾರೆ. ಸಾಕ್ಷಾತ್ತು ಶ್ರೀಮನ್ನಾರಾಯಣನೇ ದ್ವಾರಕಾಧೀಶನಾಗಿ ಈ ಕಾವಳಂಬಾಡಿ ಕ್ಷೇತ್ರದಲ್ಲಿ ನೆಲೆಸಿದ್ದಾನೆಂದು ಪ್ರತೀತಿ.

ಮತ್ತೊಂದು ಪ್ರತ್ಯೇಕತೆ ಏನೆಂದರೆ ರುಕ್ಮಿಣೀ ಸತ್ಯಭಾಮೆಯರಿಗೆ ಪಾರಿಜಾತದ ವಿಷಯದಲ್ಲಿ ಒಂದು ಸಣ್ಣ ವಿವಾದ ಏರ್ಪಟ್ಟಿತ್ತು, ಆಗ ವಸುದೇವಸುತನು ಈ ಕ್ಷೇತ್ರದಲ್ಲೇ ಇಬ್ಬರನ್ನು ಸಮಾಧಾನಪಡಿಸಿದನೆಂದು ಹೇಳುತ್ತಾರೆ.

ಹರಿಮಿತ್ರನೆಂಬ ಭಕ್ತನು ಮೋಕ್ಷಕ್ಕಾಗಿ ಈ ಕ್ಷೇತ್ರದಲ್ಲೇ ತಪಸ್ಸನ್ನಾಚರಿಸಿದ. ಆತನ ತಪಸ್ಸಿಗೆ ಮೆಚ್ಚಿದ ದೇವಕೀರ್ತನನು ರುಕ್ಮಿಣೀ ಸತ್ಯಭಾಮೆಯರ ಸಮೇತನಾಗಿ ಗೋವುಗಳನ್ನು ಮೇಯಿಸುವ ಕೋಲನ್ನು ಹಿಡಿದಂತೆ ದರ್ಶನವನ್ನು ನೀಡಿ, ಅವನನ್ನು ಅನುಗ್ರಹಿಸಿದ ಹಾಗೇ ವಿಷ್ವಕ್ಸೇನರಿಗೆ ರಾಜಗೋಪಾಲಸ್ವಾಮಿಯಾಗಿ ಈ ಕ್ಷೇತ್ರದಲ್ಲೇ ದರ್ಶನವನ್ನು ನೀಡಿದನಂತೆ. ಹೀಗೆ ಅನೇಕ ವಿಷಯ ವಿಶೇಷಗಳೊಂದಿಗೆ ಈ ಕ್ಷೇತ್ರ ರಾರಾಜಿಸುತ್ತಿದೆ. ತಿರುಮಂಗೈ ಆಳ್ವಾರರು ಈ ಕ್ಷೇತ್ರವನ್ನು, ಕ್ಷೇತ್ರಾಧೀಶನನ್ನೂ ವರ್ಣಿಸಿದ್ದಾರೆ. ಪಾಂಚರಾತ್ರಾಗಮೋಕ್ತವಾಗಿ ಸಕಲ ಪೂಜಾದಿ ಕಾರ್ಯಕ್ರಮಗಳು ಇಲ್ಲೇ ನೆರವೇರುತ್ತದೆ. ಭಕ್ತರು ಈ ಗೋಪಾಲಕೃಷ್ಣನನ್ನು ಸೇವಿಸಿದರೆ ಸಕಲ ಸೌಭಾಗ್ಯಗಳು ದೊರೆಯುತ್ತವೆಂದು ಭಕ್ತರ ನಂಬಿಕೆ.

ಪ್ರಖ್ಯಾತೇ ಶಿವಗೀತನಾಮನಿ ಪುರೇ ಶ್ರೀಕೃಷ್ಣದೇವಃ ಪ್ರಭುಃ
ತದ್ದೇವೀ ಮೃಗಚಾಪಕಾಂತನಯನಾ ಹೇಮಬ್ಜರಾಜತ್ಸರಃ ।
ವೇದಾಮೋದ ವಿಮಾನ ರಾಜನಿಲಯಃ ಪೂರ್ವಾಬ್ಧಿ ಸೇವೀಕ್ಷಣಃ
ಸಾನ್ನಿಧ್ಯಂ ಕೃತವಾನ್ ಸುದರ್ಶನಗಣೈಃ ಸಾಕಂ ಭವಾನೀಪತೇಃ॥

## ಪುಷ್ಪಯಾಗ


ತಿರುಚಾನೂರಿನಲ್ಲಿ ನಡೆಯುವ ಪಂಚಮೀತೀರ್ಥದ ಮರುದಿನ ಅಮ್ಮನವರಿಗೆ ಅತ್ಯಂತ ವೈಭವದಿಂದ ಪುಷ್ಪಯಾಗವನ್ನು ನಿರ್ವಹಿಸುತ್ತಾರೆ. ನಿತ್ಯವು ಪೂಜೆಯಲ್ಲಿ ನಡೆಯುವ ಮಂತ್ರಪುಷ್ಪಗಳೊಂದಿಗೆ ಬ್ರಹ್ಮೋತ್ಸವಗಳು ಮೊದಲಾದ ವಿಶೇಷ ಉತ್ಸವಗಳನ್ನು ನೆರವೇರಿಸಿದ ನಂತರ ಆಚರಿಸುವ ಅದ್ಭುತವಾದ ಯಾಗವೇ **"ಪುಷ್ಪಯಾಗ"** ಆಯಾ ಕಾಲದಲ್ಲಿ ಲಭಿಸುವ ವಿವಿಧ ರೀತಿಯ ಪುಷ್ಪಗಳೊಂದಿಗೆ ವೈಭವದಿಂದ ಈ ಯಾಗವನ್ನು ನಿರ್ವಹಿಸುತ್ತಾರೆ. ಅಂತಹಾ ಪ್ರಾಮುಖ್ಯತೆ ಇರುವ ಹೂಗಳೊಂದಿಗೆ ಪೂಜಿಸುವಂತಹಾ ವಿಧಾನ ಬಹಳ ಪವಿತ್ರವಾದದ್ದು. ಲೋಕಕಲ್ಯಾಣಕ್ಕಾಗಿ, ದಿವ್ಯವಾದ ಈ ವಿಧಾನದಿಂದ ಸಮಸ್ತ ಜೀವರಾಶಿಗಳು ಸುಖ ಸಂಪತ್ತು, ಶಾಂತಿ, ಸೌಭಾಗ್ಯಗಳಿಂದ ಸುಖವಾಗಿ ಜೀವಿಸಬೇಕೆಂದು ನಡೆಸುವಂತಹಾ ವೈಭವದ ಆಚರಣೆ ಇದಾಗಿದೆ.



# ಧನುರ್ಮಾಸ ಪುಣ್ಯ ಪೂರ್ಣಮಾಸ ಪರ್ವಪ್ರವರ ಪ್ರತಿಷ್ಠಿತ ಮಾಸ

- ಡಾ॥ ಗುರುರಾಜ ಪೋಶೆಟ್ಟಿ ಹಳ್ಳಿ

97393 69621



ಗದಗುಟ್ಟುವ ಚಳಿಯ ಮುಂಜಾವು. ಹೊರಗೆ ಹಿಮದ ಮಬ್ಬು. ಮಂಜಿನ ಇಬ್ಬನಿಯ ಹನಿಗಳ ತೊಟ್ಟಿಕ್ಕುವ ಸದ್ದು. ಹೊದಿಕೆಯೊಳಗಿನ ನಿದ್ದೆಯ ಮಂಪರಿನಿಂದ ಹೊರಗೆ ಬರುವುದೇ ಬೇಡ ಎಂಬ ಜಾಡ್ಯ ನಿಮ್ಮ ಮೈ ಮನಗಳಿಗೆ ಆವರಿಸಿಕೊಳ್ಳುವ ಕ್ಷಣಗಳು, ಆದರೆ ನಿಮ್ಮ ಬಡಾವಣೆಯ,ನಿಮ್ಮೂರಿನ ದೇಗುಲದ ಗಂಟೆಯ ಸದ್ದು ಕಿವಿದೆರೆಗೆ ಬಡಿಯುತ್ತದೆ. ಏಳಿ, ಎದ್ದೇಳಿ ಕರ್ತವ್ಯದ ಕರೆಗೆ ಓಗೊಡಿ ಎಂಬ ಸಂದೇಶ ನೀಡುತ್ತದೆ, ಇದು ಧನುರ್ಮಾಸ ಪೂಜೆಯ ಆಶಯ.

ಇದೀಗ ಧರ್ನುಮಾಸ ಆರಂಭವಾಗಿದೆ. ಧನು ರಾಶಿಗೆ ಸೂರ್ಯ ಪ್ರವೇಶದ ಹೇಮಂತ ಋತು ಇದು, ದಕ್ಷಿಣಾಯನದ ಕೊನೆಯ ಭಾಗ, ವಾಸ್ತವವಾಗಿ ಛಳಿಗಾಲದಲ್ಲ ಸದ್ದಿಲ್ಲದ ಹೃದಯಾಘಾತದ ಸಾವು ನೋವುಗಳು ಅಧಿಕ. ರಾತ್ರಿ ಮಲಗಿದವರು ಮುಂಜಾನೆ ಏಳದ ನಿದ್ರಾ ಹೃದಯಾ ಘಾತಗಳಾಗುವುವು, ಹಿಂದಿನ ಸಹಸ್ರಮಾನಗಳಲ್ಲಿ ಅಂತಹ ಸಾವು ನೋವುಗಳನ್ನು ಕಂಡ ನಮ್ಮ ಪೂರ್ವಿಕರು ಧನುರ್ಮಾಸದ ಔಚಿತ್ಯ ಅರಿತರು. ಅದಕ್ಕಾಗಿ ವಿಶೇಷ ಆಚರಣೆಯತ್ತ ಗಮನವಿತ್ತರು. ಮದುವೆ ಮುಂಜಿಗಳಿಗೆ ಅದು ಅಪ್ರಶಸ್ತವೆಂದು ಕರೆದರು.

ಇಂತಹ ರೋಗ ಸಂಕರ ತಡೆಗೆ ಆಯಾಯ ಋತುಮಾನದ ಆಚರಣೆಗೆ ಆಹಾರ ಬದ್ಧತೆಗೆ ಆಯುರ್ವೇದ ಶಾಸ್ತ್ರವು ಸಲಹೆ ಮಾಡುತ್ತದೆ. ಅಂತಹ ಸಲಹೆಗಳಲ್ಲಿ ಒಂದು ಮುಂಜಾನೆ ಬೇಗ ಏಳುವುದು. ಅದನ್ನು ಬ್ರಾಹ್ಮಿ ಮುಹೂರ್ತದ ಕರ್ತವ್ಯ ಎನ್ನುವರು. ನಿರಂತರ ಅಂತಹ ಬೆಳಗಿನ ಜಾವದ ಏಳುವಿಕೆಯಿಂದ ಆಯುಷ್ಯ ವೃದ್ಧಿ ಎನ್ನುತ್ತದೆ ವೈದ್ಯಗ್ರಂಥ ವಾಗ್ಬಟ.ಅದು ಧನುರ್ಮಾಸದ ಮಟ್ಟಿಗೆ ಸೀಮಿತ ಅಲ್ಲ. ದೀಪಾವಳಿಗೆ ಹಬ್ಬದೊಂದಿಗೆ ಕತ್ತಲು ಕವಿಯುವ ಛಳಿಗೆ ಬೇಗ ಆರಂಭ, ಹಗಲು ಕಮ್ಮಿ ರಾತ್ರಿ ಸುದೀರ್ಘ .

ಆಯನ ಮತ್ತು ಋತುಗಳ ಕೊನೆಯ ಮತ್ತು ಆರಂಭದ ಏಳೇಳು ದಿನಗಳು ಸಹಾ ಅಯನ ಸಂಧಿ, ಋತು ಸಂಧಿ ಎನಿಸುತ್ತದೆ. ಅಂತಹ ದಿನಗಳಲ್ಲಿ ಸಹ ಆರೋಗ್ಯ ಪಡೆಯುವ ಸಲುವಾಗಿ ಬಹಳ ಎಚ್ಚರದ ಚರ್ಯೆ ಕೈಗೊಳ್ಳಬೇಕೆಂದು ಆಯುರ್ವೇದ ಸಂಹಿತೆಗಳು ಹೇಳುತ್ತವೆ. ಈ ದೃಷ್ಟಿಯಿಂದ ಕೂಡ ಧನುರ್ಮಾಸದ ಕೊನೆಯ ಹದಿನೈದು ದಿನಗಳ ಸಂದರ್ಭವು ಅಂತಹ ಸಂಧಿಕಾಲ ರೋಗ ಮತ್ತು ಸಾವು ನೋವಿನ ಆತಂಕದ ದಿನಗಳು. ಆದ್ದರಿಂದ ಧರ್ಮ ಮತ್ತು ಆರೋಗ್ಯ ಸಾಧನೆಯಲ್ಲಿ ತೊಡಗುವುದು ಶ್ರೇಯಸ್ಕರ.


ಈ ಕಾಲದಲ್ಲಿ ಮಲಬದ್ಧತೆಯಾಗಿ ಬಹಳ ತೊಂದರೆಯಾಗುತ್ತದೆ. ಪ್ರಾತಃ ಕಾಲ ಸೂರ್ಯೋದಯಕ್ಕೆ ಸರಿಯಾಗಿ ಹುಗ್ಗಿಯನ್ನು ಸೇವಿಸಿದರೆ ಮೇಲೆ ಹೇಳಿದ ಶರೀರದ ಕೊರತೆಯನ್ನು ಹೋಗಲಾಡಿಸಬಹುದು. ಹೆಸರು ಬೇಳೆ ತಂಪು, ರೋಚಕ ಮತ್ತು ವಿರೇಚಕ ತುಪ್ಪ ಅಥವಾ ಬೆಣ್ಣೆ ಉಷ್ಣವನ್ನು ಅಭಿವೃದ್ಧಿಯನ್ನು ಮಾಡುವ ವಸ್ತುಗಳು, ಮೆಣಸು, ಲವಂಗ ಉಷ್ಣಪದಾರ್ಥಗಳು ಇವುಗಳು ಸೇರಿದ ಆಹಾರವನ್ನು ನಾವು ಪ್ರಾತಃ ಕಾಲ ಔಷಧದ ಬದಲು ತೆಗೆದುಕೊಂಡರೆ ದೇಹಕ್ಕೆ ತೊಂದರೆಯಾಗದಂತೆ ಸರಿಯಾಗಿ ಮಲವಿಸರ್ಜನೆಯಾಗುವುದಲ್ಲದೆ ಛಳಿಗಾಲದಲ್ಲಿ ಶರೀರದ ಉಷ್ಣಾಂಶವು ಸಮಧಾತುವಾಗಿರುತ್ತದೆ.

ಸೂರ್ಯನು ವೃಶ್ಚಿಕ ರಾಶಿಯನ್ನು ಬಿಟ್ಟು ಧನುರಾಶಿಯಲ್ಲಿ ಕಾಣುವ ಸುಮಾರು ಮೂವತ್ತು ದಿನಗಳ ಕಾಲವೇ ಧನುರ್ಮಾಸ ಮಕರ ಸಂಕ್ರಾತಿಗೆ ಇದು ಕೊನೆಗೊಳ್ಳುತ್ತದೆ. ತಮಿಳುನಾಡಿನಲ್ಲಿ ಇದನ್ನು ಮಾರ್ಗಳಿ ಮಾಸಂ ಎನ್ನುವುದೂ ಉಂಟು. ಧನುರ್ಮಾಸಕ್ಕೆ ಚಾಪಮಾಸ, ಕೋದಂಡಮಾಸ, ಕಾರ್ಮುಕ ಮಾಸ ಎಂದು ಕರೆಯುತ್ತಾರೆ. ಭಗವಂತನನ್ನು ಒಂಭತ್ತು ಬಗೆಯ ಭಕ್ತಿಯಿಂದ ಸಾಕ್ಷಾತ್ಕರಿಸಿಕೊಳ್ಳಲು ಬಯಸುವವರಿಗೆ ಈ ಮಾಸ ಅತ್ಯುತ್ತಮವಾದುದು.

ಈ ಮಾಸದ ಪೂಜೆಯ ವಿಧಾನ ಸ್ವಲ್ಪ ಬೇರೆಯಾಗಿದೆ. ಈ ಪೂಜೆಯನ್ನು ಸೂರ್ಯೋದಯಕ್ಕೆ ಮೊದಲೇ ಮಾಡಬೇಕು. ಈ ತಿಂಗಳಲ್ಲಿ ಬ್ರಾಹ್ಮೀ ಮುಹೂರ್ತ

ದಲ್ಲಿ ದೇವತೆಗಳೂ ಋಷಿಗಳೂ ಪರಮಾತ್ಮನನ್ನು ಪೂಜಿಸುತ್ತಾರೆ, ಪ್ರಾರ್ಥಿಸುತ್ತಾರೆ. ಅವರನ್ನು ಅನುಸರಿಸಿ ಆಸ್ತಿಕರು ಬೆಳಕು ಹರಿಯುವುದಕ್ಕಿಂತ ಮೊದಲೇ ಎದ್ದು ಸ್ನಾನಾದಿಗಳನ್ನು ಮಾಡಿ ದೇವಪೂಜೆಯನ್ನು ಪೂರೈಸಬೇಕು. ಮೇಷಾದಿ ಮಾಸಗಳಲ್ಲಿ ಈ ನಿಯಮವಿಲ್ಲ. ತಾರೆಗಳು ಅಗಸದಲ್ಲಿ ಇನ್ನೂ ಕಂಗೊಳಿಸುತ್ತಿರುವಾಗ ದೇವಪೂಜೆ ಮುಗಿದರೆ ಅದು ಶ್ರೇಷ್ಠವೆನ್ನಲಾಗಿದೆ. ನಕ್ಷತ್ರಗಳು ಕಾಣದಿರುವ ಸಮಯದಲ್ಲಿ ಈ ಪೂಜೆಯು ಮಧ್ಯಮವಾಗುತ್ತದೆ. ಸೂರ್ಯೋದಯವಾದ ಮೇಲೆ ಪೂಜೆಯನ್ನು ಪೂರೈಸಿದರೆ, ಅದು ಅಧಮ. ಮಧ್ಯಾಹ್ನದಲ್ಲಿ ದೇವರನ್ನು ಈ ಮಾಸದಲ್ಲಿ ಪೂಜಿಸಿದರೆ, ಅದು ನಿಷ್ಫಲವಾಗುತ್ತದೆ.

ಧನುರ್ಮಾಸದ ಪೂಜೆಯು ಉಳಿದ ಮಾಸದ ಪೂಜೆಯಂತೆ ಆದರೂ ನೈವೇದ್ಯವು ಬೇರೆಯಾಗಿದೆ. ಹವಿಷ್ಯಾನ್ನದ ಬದಲಾಗಿ ಈ ಮಾಸದಲ್ಲಿ ಮುದ್ಗಾನ್ನವನ್ನು ಪರಮಾತ್ಮನಿಗೆ ನಿವೇದಿಸಬೇಕು. ಉತ್ತರ ಕರ್ನಾಟಕದಲ್ಲಿ ಅದನ್ನು ಖಿಚಿಡಿ ಎನ್ನುತ್ತಾರೆ. ಉತ್ತರ ಕನ್ನಡದಲ್ಲಿ ಧನುಮಡ್ಡಿ ಎನ್ನುವುದುಂಟು. ಹೆಸರುಬೇಳೆಯನ್ನು ಅಕ್ಕಿಯೊಂದಿಗೆ ಬೇಯಿಸಿ (ಬೆಲ್ಲ), ಮೆಂತ್ಯ ಮತ್ತು ಜೀರಿಗೆ ಪುಡಿಯನ್ನು ಸೇರಿಸಿ ಮಾಡಿದ ಈ ಮುದ್ಗಾನ್ನವನ್ನು ಅಭಿಘಾರ ಮಾಡಿ ಭಗವಂತನಿಗೆ ನಿವೇದಿಸಿ ಹುಣಸೆಹುಳಿಯೊಂದಿಗೆ ಪ್ರಸಾದವನ್ನು ಸವಿಯುವುದು ಒಂದು ವಿಶೇಷ ಅನುಭವವೇ ಸರಿ. ಕೆಲವರು ಇದಕ್ಕೆ ಗೇರು, ಶುಂಠಿ, ಕಾಳು ಮೆಣಸು, ಬೆಣ್ಣೆ, ತೆಂಗು ಮುಂತಾದವುಗಳನ್ನು ಸೇರಿಸುತ್ತಾರೆ. ಇದು ಪ್ರದೇಶದಿಂದ ಪ್ರದೇಶಕ್ಕೆ ಬೇರೆಯಾಗಿದೆ. ಪೊಂಗಲ್ ದಕ್ಷಿಣ ಕರ್ನಾಟಕದಲ್ಲಿ ಪ್ರಚಲಿತವಾಗಿದೆ.




ಕೆಲವರಿಗೆ ಬೆಳಗ್ಗೆ ಅಷ್ಟು ಬೇಗನೆ ಏಳುವುದು ಕಷ್ಟವಾಗಬಹುದು. ಕೆಲವರಿಗೆ ಸಾಧನ ಸಾಮಗ್ರಿಯ ಕೊರತೆ ಕಾಡಬಹುದು. ಕೊರೆಯುವ ಚಳಿಯಲ್ಲಿ ನಿದ್ದೆಯನ್ನು ಬಿಟ್ಟು ಮಿಂದು ಮಡಿಯುಟ್ಟು ಪೂಜೆಯನ್ನು ಮಾಡಿದರೆ ಬರುವ ಭಾಗ್ಯವಾದರೂ ಏನು ಎಂದು ಕೆಲವರು ಕೇಳಬಹುದು. ಅದಕ್ಕೆ ಪ್ರತಿಯಾಗಿ ಹೀಗೆ ಹೇಳುತ್ತಾರೆ. ಉಷಃಕಾಲದ ಪೂಜೆಯು ಸಾಮಾನ್ಯವಾದುದಲ್ಲ. ಒಂದು ದಿನದ ಪೂಜೆಯು ಶ್ಲಾಘನೀಯವಲ್ಲ. ದಿನೇದಿನೇ ಎಂದು ಹೇಳಿರುವುದರಿಂದ ನಿತ್ಯಕರ್ಮವಾದ ಪೂಜೆಯನ್ನು ಪ್ರತಿದಿನವೂ ಮಾಡಬೇಕು. ನಮ್ಮ ಅನುಕೂಲತೆಗೆ ತಕ್ಕಂತೆ ಅದನ್ನು ಬದಲಾಯಿಸಬಾರದು.

ನೈವೇದ್ಯವನ್ನು ಸಿದ್ಧ ಪಡಿಸುವಾಗ ಹೆಸರುಬೇಳೆ ಮತ್ತು ಅಕ್ಕಿ ಸಮ ಪ್ರಮಾಣದಲ್ಲಿದ್ದರೆ ಅದು ಉತ್ತಮೋತ್ತಮ ಎಂದು ಒಂದು ಮತ. ಅಕ್ಕಿ ಎರಡರಷ್ಟು ಬೇಳೆ ಇರಬೇಕೆಂಬುದು ಇನ್ನೊಂದು ಮತ. ಈ ಎರಡನೆಯ ಹೇಳಿಕೆಯೇ ಸರಿಯಿರಬಹುದು. ಅಕ್ಕಿಯ ಅರ್ಧದಷ್ಟು ಬೇಳೆಯಿದ್ದರೆ ಅದು ಮಧ್ಯಮ. ಅಕ್ಕಿಯ ಕಾಲುಭಾಗ ಬೇಳೆಯಿದ್ದರೆ ಅಧಮ ಎನ್ನಲಾಗಿದೆ. ಅಕ್ಕಿಯ ಅರ್ಧಕ್ಕಿಂತ ಕಡಿಮೆ ಬೇಳೆ ಉಪಯೋಗಿಸುವುದು ಸರಿಯಲ್ಲ. ಹಾಗಾದರೂ ಶಕ್ತಿಯಿಲ್ಲದವರಿಗೆ ವಿನಾಯಿತಿ ಇದ್ದೇ ಇದೆ. ಭಗವಂತನು ಕರುಣಾವರುಣಾಲಯ. ಅವನನ್ನು ಭಕ್ತಿಯಿಂದ ಸಂತೋಷಗೊಳಿಸಬಹುದು. ಹುಗ್ಗಿಯಯನ್ನು ನೋಡಿದ ಮಾತ್ರದಿಂದಲೇ ಅವನಿಗೆ ಧನುರ್ಮಾಸದಲ್ಲಿ ಸಂತಸವಾಗುತ್ತದೆ. ಅವನಿಗೆ ಷೋಡಶೋಪಚಾರ ಪೂಜೆಯನ್ನು ಮಾಡಿ, ಸೂರ್ಯೋದಯವಾದ ಮೇಲೆ ಊಟ ಮಾಡಬೇಕು. ಎಲ್ಲ ದೇವಾಲಯಗಳಲ್ಲಿಯೂ ಧನುರ್ಮಾಸ ಪೂಜೆಯನ್ನು ವಿಧಿವತ್ತಾಗಿ ನೆರವೇರಿಸುವುದರಿಂದ ವೈಯುಕ್ತಿಕವಾಗಿ ಪೂಜಿಸಲಾಗದರು ಅಲ್ಲಿ ಭಾಗವಹಿಸಿ ಕೃತಾರ್ಥರಾಗಬಹುದು.

### ಧನುರ್ಮಾಸದ ಮುಂಜಾವಿನ ಪೂಜೆ - ಆರೋಗ್ಯದ ಆಚರಣೆ

ವಾಸ್ತವವಾಗಿ ಚಳಿಗಾಲದ ದಿನಗಳಲ್ಲಿ ಸದ್ದಿಲ್ಲದ ಹೃದಯಾಘಾತವು ಸಾವು ನೋವುಗಳು ಅಧಿಕ. ರಾತ್ರಿ ಮಲಗಿದವರು ಮುಂಜಾನೆ ಏಳದ ನಿದ್ರಾ ಹೃದಯಾಘಾತಗಳಾಗುವುವು. ಹಿಂದಿನ ಸಹಸ್ರಮಾನಗಳಲ್ಲಿ ಅಂತಹ ಸಾವುಗಳನ್ನು ಕಂಡ ನಮ್ಮ ಹಿರಿಯರು ಧನುರ್ಮಾಸದ ಔಚಿತ್ಯ ಅರಿತರು. ಅದಕ್ಕಾಗಿ ವಿಶೇಷ ಆಚರಣೆಯತ್ತ ಗಮನವಿತ್ತರು. ಮದುವೆ, ಮುಂಜಿಗಳಂತಹ ಮುಹೂರ್ತಗಳಿಗೆ ಅದು ಅಪ್ರಶಸ್ತ ಎಂದು ಕರೆದರು.

ಆಯುರ್ವೇದ ಶಾಸ್ತ್ರದಲ್ಲಿ ಸಂವತ್ಸರವನ್ನು ಎರಡು ವಿಭಾಗಗಳಲ್ಲಿ ವಿಂಗಡಿಸುವರು. ದಕ್ಷಿಣಾಯನಕ್ಕೆ ವಿಸರ್ಗ ಕಾಲ ಎಂಬುವರು. ಆಗ ದೇಹದಲ್ಲಿ ಬಲ ಅಧಿಕ. ರೋಗಗಳ ಸಂಕರತೆ ಕಡಿಮೆ. ವರ್ಷಋತು, ಶರದೃತು ಮತ್ತು ಹೇಮಂತ ಋತುಗಳು ವಿಸರ್ಗ ಕಾಲದ ಮೂರು ಋತುಗಳು. ಶಿಶಿರ, ವಸಂತ ಮತ್ತು ಗ್ರೀಷ್ಮ ಋತುಗಳು ಆದಾನ ಕಾಲದವು. ಆಗ ಮನುಷ್ಯನ ಬಲ ಕಡಿಮೆ. ಹೊಸ ಹೊಸ ರೋಗಗಳಿಗೆ ದೇಹವು ಅಗರವಾಗಬಲ್ಲದು. ಅಂತಹ ರೋಗ ಸಂಕರ ತಡೆಗೆ ಆಯಾಯ ಋತುಮಾನದ ಆಚರಣೆಗೆ ಆಹಾರ ಬದ್ಧತೆಗೆ ಆಯುರ್ವೇದ ಶಾಸ್ತ್ರವು ಸಲಹೆ ಮಾಡುತ್ತದೆ.



ಅಂತಹ ಸಲಹೆಗಳಲ್ಲಿ ಒಂದು ಮುಂಜಾವಿನ ವೇಳೆ ಬೇಗನೆ ಏಳುವುದು ಅದನ್ನು ಬ್ರಾಹ್ಮಿ ಮುಹೂರ್ತದ ಕರ್ತವ್ಯ ಎಂಬರು. ನಿರಂತರ ಅಂತಹ ಬೆಳಗಿನ ಜಾವದ ಏಳುವಿಕೆಯಿಂದ ಆಯುಷ್ಯ ವೃದ್ಧಿ ಎನ್ನುತ್ತದೆ ವೈದ್ಯಗ್ರಂಥ ವಾಗ್ಬಟ. ಅದು ಧನುರ್ಮಾಸದ ಮಟ್ಟಿಗೆ ಸೀಮಿತ ಅಲ್ಲ. ಆದರೂ ವಿಶೇಷವಾಗಿ ಧನುರ್ಮಾಸದಲ್ಲಿ ಅದರ ಅಗತ್ಯ ಇನ್ನಿಲ್ಲದಷ್ಟಿದೆ. ದೀಪಾವಳಿಗೆ ಹಬ್ಬದೊಂದಿಗೆ ಕತ್ತಲು ಕವಿಯುವ ಘಳಿಗೆ ಬೇಗನೆ ಆರಂಭ. ಹಗಲು ಕಮ್ಮಿ ರಾತ್ರಿ ಸುದೀರ್ಘ. ಹಾಗೆಂದು ಅಂತಹ ಸುದೀರ್ಘ ರಾತ್ರಿಯಲ್ಲಿ ಉದ್ದನೆಯ ನಿದ್ದೆಗೆ ಜಾರುವುದು ಜಾಣತನ  ಹಾಗೆ ಧನುಪೂಜೆಯ ನಸುಕಿನ ಆಚರಣೆ ಶುರು.

ಅಷ್ಟೆ ಅಲ್ಲ. ನಸುಕಿನಲ್ಲಿಯೇ ಮಿಂದು ಶುಚಿರ್ಭೂತರಾಗಿ ದೇಗುಲದ ಪೂಜೆಯಲ್ಲಿ ಹೆಸರುಬೇಳೆಯ ಹುಗ್ಗಿ ಪ್ರಸಾದ ಸ್ವೀಕರಿಸುವರು. ಹೇಮಂತ ಋತುವಿನಲ್ಲಿ ಹಸಿವು ಹೆಚ್ಚು ಅಂತಹ ಹಸಿವು ಹಿಂಗಿಸಲು ಗುಡ ಅಂದರೆ ಬೆಲ್ಲದ ಹುಗ್ಗಿಗೆ ಸಾಮರ್ಥ್ಯ ಇದೆ.

ಹೀಗೆ ಧನುರ್ಮಾಸದ ಹುಗ್ಗಿಯ ಸೇವನೆ ಮಕರಸಂಕ್ರಾಂತಿ ಪರ್ಯಂತ ಸಾಗುತ್ತದೆ. ಬೇಗನೆ ಜೀರ್ಣವಾಗುವ ಹೆಸರುಬೇಳೆಗೆ ಆಯುರ್ವೇದದಲ್ಲಿ ಅತಿಶಯ ಮಹತ್ವ ಇದೆ. ಅದನ್ನು ಅತಿ ಪಥ್ಯತಮ ಆಹಾರ ಎಂದು ಬಗೆಯುವರು. ಮೈಕೈಗೆ ಮಾತ್ರ ಅಲ್ಲ, ನೆತ್ತಿ ತಂಪಾಗುವ ಎಣ್ಣೆ ಹಚ್ಚಿ ಆನಂತರ ಬಗೆ ಬಗೆಯ ಹಿಟ್ಟು, ಸೀಗೆಪುಡಿಗಳಿಂದ ಮೈ ಕೈ ತೊಳೆಯುವ ವಿಧಾನಕ್ಕೆ ಚಳಿಯ ದಿನಗಳಲ್ಲಿ ಮಹತ್ವ ಇದೆ.

ಒಗರು ರಸ, ಸಿಹಿ ರಸದ ಆಹಾರ, ಉದ್ದು, ಗೋಧಿಯ ಭಕ್ಷ್ಯ ತಯಾರಿಸಿ ತಿನ್ನಬಹುದು. ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡಬಹುದು. ಜಿಡ್ಡಿನ ವಸ್ತುಗಳಿಗೆ ಇಂತಹ ದಿನಗಳಿಂದಲೇ ಇಂಬು. ಆನಂತರ ಮಕರ ಸಂಕ್ರಮಣದಂದು ಎಳ್ಳಿನ ವಿಶೇಷ ಬಳಕೆಗೆ ಅಸ್ಪದವೀಯುವರು. ಎಳ್ಳು ಒಗರು, ಸಿಹಿ ರಸದ ಆಹಾರ ವಸ್ತು. ಅತಿ ಜಿಡ್ಡಿನದು ಕೂಡ. ಹೀಗೆ ಚಳಿಯ ದಿನಗಳಲ್ಲಿ ರೋಗ ಸಂಕರದಿಂದ ದೂರಾಗುವ ಉಪಾಯ ನಮ್ಮ ಹಿಂದಿನವರು ಕಲಿತರು. ಬಗೆ ಬಗೆಯ ಧಾರ್ಮಿಕ ಆಚರಣೆಗಳಿಗೆ ಮಹತ್ವ ನೀಡಿ ದರು.

ಆಯನ ಮತ್ತು ಋತುಗಳು ಕೊನೆಯ ಮತ್ತು ಆರಂಭದ ಏಳೇಳು ದಿನಗಳು ಸಹ ಆಯನಸಂಧಿ, ಋತುಸಂಧಿ ಎನಿಸುತ್ತದೆ. ಅಂತಹ ದಿನಗಳಲ್ಲಿ ಸಹ ಆರೋಗ್ಯ ಪಡೆಯುವ ಸಲುವಾಗಿ ಬಹಳ ಎಚ್ಚರದ ಚರ್ಯೆ ಕೈಗೊಳ್ಳಬೇಕೆಂದು ಆಯುರ್ವೇದ ಸಂಹಿತೆಗಳು ಹೇಳುತ್ತವೆ. ಆ ದೃಷ್ಟಿಯಿಂದ ಸಹ ಧನುರ್ಮಾಸದ ಕೊನೆಯ ಹದಿನೈದು ದಿನಗಳ ಸಂದರ್ಭವು ಅಂತಹ ಸಂಧಿಕಾಲ. ರೋಗ ಮತ್ತು ಸಾವು ನೋವಿನ ಆತಂಕದ ದಿನಗಳು. ಆದ್ದರಿಂದ ಧರ್ಮ ಮತ್ತು ಆರೋಗ್ಯ ಸಾಧನೆಯಲ್ಲಿ ತೊಡಗುವುದು ಶ್ರೇಯಸ್ಕರ.

### ಶ್ರೀ ಕೃಷ್ಣನಿಗೆ ಪ್ರಿಯವಾದ ಮಾಸ

ಕೃಷ್ಣನ ಪರಮಭಕ್ತರಿಗೆ ಇದು ತುಂಬಾ ಪ್ರಿಯವಾದ ಮಾಸ, ಏಕೆಂದರೆ ಕೃಷ್ಣ ತಿರುಮಲೆಯಲ್ಲಿ ನೆಲೆಸಿರುವ ಶ್ರೀನಿವಾಸ ವೆಂಕಟೇಶನ ರೂಪದಲ್ಲಿ ಭೂಲೋಕದಲ್ಲಿ ನೆಲೆಸಿದಾಗ ಭೂದೇವಿ ಆಂಡಾಳ್ ಒಬ್ಬ ಸಾಮಾನ್ಯ ಹುಡುಗಿಯಾಗಿ, ಪ್ರತಿದಿನ ತನ್ನ ಪ್ರೀತಿಯ ವೆಂಕಟೇಶನಿಗಾಗಿ ಹೂ ಮಾಲೆ ಮಾಡಿ ಮೊದಲು ಆ ಮಾಲೆಯನ್ನು ತಾನೇ ಧರಿಸಿ ಕೊಂಡು ನೋಡಿ, ಅದು ಚೆನ್ನಾಗಿ ಕಾಣಿಸುತ್ತದೆ ಎಂದ ಮೇಲೆ ಅದನ್ನು ವೆಂಕಟೇಶ್ವನ ಕೊರಳಿಗೆ ಹಾಕುತ್ತಿದ್ದಳು. ಇದೇ ಮಾರ್ಗಶೀರ್ಷ ಮಾಸದಲ್ಲಿ ತನ್ನ ಪ್ರಿಯತಮನಾದ ವೆಂಕಟೇಶನಿಗಾಗಿ ತಮಿಳಿನಲ್ಲಿ ತಿರುಪ್ಪಾವೈ 30 ಕವಿತೆಗಳು ಎಂಬ ಪ್ರೀತಿ ಗ್ರಂಥವನ್ನು ರಚಿಸಿದಳು. ಇವತ್ತಿಗೂ ಶ್ರೀವೈಷ್ಣವರು ನಾಲಾಯಿರಂ ತಿರುಪ್ಪಾವೈ ಕೃತಿಗಳೇ ವೆಂಕಟೇಶನಿಗೆ ಪ್ರಿಯವಾದ ದ್ದೆಂದು ಪಠಿಸುತ್ತಾರೆ. ವೆಂಕಟೇಶನ ಯಾವುದೇ ದೇವಸ್ಥಾನಕ್ಕೆ ಹೋದರೂ, ತಿರುಮಲೆ ದೇವಸ್ಥಾನದಲ್ಲೂ ಆಂಡಾಳ್ ರಚಿಸಿರುವ ಪ್ರೀತಿಯ ಪ್ರಬಂಧವನ್ನು ಹೇಳಿಯೇ ದೇವರನ್ನು ಎಬ್ಬಿಸುವುದು, ಹಾಗೇ ಆಂಡಾಳ್ ವೆಂಕಟೇಶನಿಗಾಗಿ ರಚಿಸಿರುವ ಲಾಲಿ ಹಾಡು ಹಾಡಿಯೇ ಅವನನ್ನು ಮಲಗಿಸುವುದು.

ಪರಮಾತ್ಮನನ್ನು ಪ್ರೀತಿಸಲು ನಮಗೆ ಯಾರ ಅನುಮತಿಯೂ ಬೇಕಾಗಿಲ್ಲ. ಭೂದೇವಿ ಆಂಡಾಳ್ ರೂಪದಲ್ಲಿ ಪ್ರತಿದಿನ ದೇವಸ್ಥಾನದ ಮುಂದೆ ಕುಳಿತು ವೆಂಕಟೇಶನಿಗಾಗಿ ಪ್ರೀತಿಯಿಂದ ಹಾಡುಗಳನ್ನು ಹಾಡಿ ದೇವರನ್ನು ಖುಷಿ ಪಡಿಸುತ್ತಿದ್ದಳು. ಅವಳು ವೆಂಕಟೇಶನನ್ನು ಪ್ರೀತಿಸಿದ ಮಾಸ ಮಾರ್ಗಶೀರ್ಷ. ಅದೇ ಮಾಸದಲ್ಲಿ ವೆಂಕಟೇಶ/ಶ್ರೀನಿವಾಸ ಆಂಡಾಳ್ ಪ್ರೀತಿಗೆ ಮೆಚ್ಚಿ ಪ್ರತ್ಯಕ್ಷನಾಗಿ ಅವನಳನ್ನು ಮದುವೆಯಾದ ಹಾಗಾಗಿ ಇದು ದೇವರಿಗೆ ಪ್ರಿಯವಾದ ಮಾಸ.

- ಮುಂದುವರೆಯುತ್ತದೆ



49

ಕರ್ನಾಟಕ ವೈಷ್ಣವ ದೇವಾಲಯಗಳು


# ಕನ್ನಂಬಾಡಿ ಗ್ರಾಮ (ನಾರ್ತ್‌ಬ್ಯಾಂಕ್) ಶ್ರೀ ವೇಣುಗೋಪಾಲಸ್ವಾಮಿ ದೇವಾಲಯ

– ಕೆಂಗೇರಿ ಚಕ್ರಪಾಣಿ
94483 86886

ಮಂಡ್ಯ ಜಿಲ್ಲೆಯ, ಪಾಂಡವಪುರ ತಾಲ್ಲೂಕಿನ ಕಾವೇರಿ ನದಿ ತೀರದಲ್ಲಿರುವ ಪುರಾತನ ಕ್ಷೇತ್ರ. ಶಾಸನಗಳಲ್ಲಿ ಕನಂಬಾಡಿ ಎಂದು ಉಲ್ಲೇಖಗೊಂಡಿದ್ದು, ಇದು ಕಣ್ವಋಷಿಗಳು ವಾಸಿಸಿದ್ದ ಕ್ಷೇತ್ರವಾಗಿತ್ತು. ಇಲ್ಲಿದ್ದ ಕಣ್ವೇಶ್ವರ ಮತ್ತು ಗೋಪಾಲಕೃಷ್ಣ ದೇವಾಲಯಗಳು ಕೃಷ್ಣರಾಜಸಾಗರ ಜಲಾಶಯ ಕಟ್ಟುವಾಗ ಹಿನ್ನೀರಿನಲ್ಲಿ ಮುಳುಗೊಡೆಯಾಯಿತು. ಗೋಪಾಲಕೃಷ್ಣ ದೇವಾಲಯವನ್ನು ಖೋಡೆ ಸಂಸ್ಥೆಯವರು ಕಾವೇರಿ ತೀರದಲ್ಲಿ ಅಂದವಾಗಿ ಪುನಃ ನಿರ್ಮಿಸಿರುವರು.

ಮುಳುಗಡೆಯಾದ ದೇವಾಲಯದ ವಿಗ್ರಹಗಳನ್ನು ಹೊಸದಾಗಿ ನಿರ್ಮಿತವಾದ ನಾರ್ತ್‌ಬ್ಯಾಂಕ್ ಪ್ರದೇಶಕ್ಕೆ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಸ್ಥಳಾಂತರಿಸಿ ಸಂರಕ್ಷಣೆಯ ಮಹತ್ ಕಾರ್ಯವನ್ನು ಮಾಡಿರುವರು. ಇಲ್ಲಿರುವ ಅನೇಕ ವಿಗ್ರಹಗಳು ಶಾಸನೋಕ್ತ ಗುಡಿಗಳಲ್ಲಿದ್ದವು.

ಕನ್ನಂಬಾಡಿ ನಾರ್ತ್‌ಬ್ಯಾಂಕ್‌ನಲ್ಲಿ ಕ್ರಮವಾಗಿ ಕಣ್ವೇಶ್ವರ, ಗೋಪಾಲಕೃಷ್ಣ, ಮಹಾಲಕ್ಷ್ಮೀ ದೇವಾಲಯಗಳಿವೆ. ಶ್ರೀ ವೇಣುಗೋಪಾಲಸ್ವಾಮಿ ದೇವಾಲಯವು ಮೂರು ಗರ್ಭಗೃಹಗಳನ್ನು ಹೊಂದಿದೆ. ಪೂರ್ವಾಭಿಮುಖವಾದ ಗರ್ಭಗುಡಿಯಲ್ಲಿ ಶ್ರೀ ವೆಂಕಟೇಶ್ವರ, ದಕ್ಷಿಣ ಗುಡಿಯಲ್ಲಿ ಕೊಳಲು ಗೋಪಾಲಕೃಷ್ಣ ಮತ್ತು ಉತ್ತರ ಗುಡಿಯಲ್ಲಿ ಶೇಷಶಾಯಿ ರಂಗನಾಥನ ಸುಂದರವಾದ ಮೂರ್ತಿಗಳಿವೆ. ಸುಮಾರು ನಾಲ್ಕು ಅಡಿಗಳು ಎತ್ತರವಿರುವ ಶ್ರೀನಿವಾಸನ ವಿಗ್ರಹವು ಕಿರೀಟ ಮಕುಟಧಾರಿಯಾಗಿದ್ದು, ಚತುರ್ಭುಜನಾಗಿ ಮೇಲಿನ ಕೈಗಳಲ್ಲಿ ಚಕ್ರ, ಶಂಖಗಳನ್ನು ಧರಿಸಿದ್ದು, ಕೆಳ ಬಲಗೈ ವರದಹಸ್ತ ಮತ್ತು ಕೆಳ ಎಡಗೈ ಕಟೀಹಸ್ತದಲ್ಲಿದೆ. ಉತ್ತರ ಗರ್ಭಗುಡಿಯಲ್ಲಿ ಹೊಯ್ಸಳರ ಕಾಲದ ಅನಂತಶಯನನ ಪುತ್ಥಳಿಯಿದೆ. ಏಳು ಹೆಡೆಗಳನ್ನು ಹೊಂದಿರುವ ಸರ್ಪದ ಮೇಲೆ ಪವಡಿಸಿರುವ ಅನಂತಶಯನನ ನಾಭಿಯಿಂದ ಬ್ರಹ್ಮ ದೇವನು ಉದಯಿಸಿರುವನು. ಎತ್ತಿದ ಬಲಗೈಯನ್ನು ಲಂಬವಾಗಿ ತಲೆಗೆ ಒತ್ತಿಕೊಂಡಿರುವ ದೇವನು ಎಡ ಕೆಳಗಿನ ಕೈಯಲ್ಲಿ ಕಮಲವನ್ನು ಹಿಡಿದಿರುವನು. ಬಲಗೈ ಎದೆಯ ಬಳಿಯಿದ್ದು ಚಿನ್ಮುದ್ರೆಯಲ್ಲಿದೆ. ಎಡಗೈ ಮೇಲಿನ ದೇಹದ ಉದ್ದಕ್ಕೂ ಚಾಚಿಕೊಂಡಿದೆ. ಅನಂತ ಪದ್ಮನಾಭನ ಪಾದದ ಬಳಿ ಶ್ರೀದೇವಿಯಿರುವರು. ವಿಗ್ರಹದ ಸುತ್ತಲೂ ಪ್ರಭಾವಳಿಯಲ್ಲಿ ದಶಾವತಾರದ ಚಿಕಣಿ ಶಿಲ್ಪ







ಗಳಿವೆ. ಈ ದೇವಾಲಯದ ಪ್ರಮುಖ ಆಕರ್ಷಣೆ ದಕ್ಷಿಣೆ ಗರ್ಭ ಗುಡಿಯಲ್ಲಿರುವ ಶ್ರೀವೇಣುಗೋಪಾಲ ಸ್ವಾಮಿಯ ಮೂರ್ತಿಯಾಗಿರುವುದು. ಹೊಯ್ಸಳರ ಕಾಲದ ಅತ್ಯಂತ ಶ್ರೇಷ್ಠಮಟ್ಟದ ಶಿಲ್ಪವಿದಾಗಿದ್ದು ನೋಡಲು ಬಹಳ ಮನೋಹರವಾಗಿದೆ. ತಮಾಲ ವೃಕ್ಷದ ಕೆಳಗೆ ಕತ್ತರಿ ಕಾಲನ್ನು ಹಾಕಿಕೊಂಡು ಕೊಳಲು ನುಡಿಸುತ್ತಿರುವ ಗೋಪಾಲನು ಕಿರೀಟ ಮಕುಟವನ್ನು ಧರಿಸಿರುವನು. ಕೊಳಲನ್ನು ನುಡಿಸುವುದರಲ್ಲಿ ತನ್ಮಯವಾಗಿರುವಂತೆ ದೇವನ ಮುಖಾರವಿಂದವನ್ನು ಬಿಂಬಿಸಲಾಗಿದೆ. ಕೈ ಬೆರಳಿನ ಉಗುರುಗಳು, ಕೈಕಡಗ ಕಾಲ್ಕಡಗ, ಇಳೆವಸ್ತ್ರ, ಕೊಳಲಿಗೆ ಇಳಿ ಬಿಟ್ಟಿರುವ ಕುಚ್ಚು, ಸೊಂಟಕ್ಕೆ ಕಟ್ಟಿರುವ ವಸ್ತ್ರ ಎಲ್ಲವೂ ಬಹಳ ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ್ದು ಆಕರ್ಷಕ ವಾಗಿವೆ. ಕೊಳಲು ಗೋಪಾಲಕೃಷ್ಣನ ವೇಣುಗಾನಕ್ಕೆ ಮನ ಸೋತಂತೆ ಗೋವುಗಳು, ಗೋಪಾಲಕರು, ಗೋಪಿಕಾ ಸ್ತ್ರೀಯರು ತಲೆಯೆತ್ತಿ ಆಲಿಸುತ್ತಿರುವಂತೆ ನೈಜ್ಯವಾಗಿ ಮೂಡಿಸಲಾಗಿದೆ.





ಈ ದೇವಾಲಯದಲ್ಲಿರುವ ಪ್ರಣಾಮ ಭಂಗಿಯಲ್ಲಿರುವ ಸುದರ್ಶನನ ವಿಗ್ರಹವು ಗಮನ ಸೆಳೆಯುತ್ತದೆ. ಈ ದೇವಾಲಯದ ಹಿಂಭಾಗದ ರಕ್ಷಣಾ ಕೋಣೆಯಲ್ಲಿ ಹಲವಾರು ಸುಂದರ ಮೂರ್ತಿಗಳನ್ನು ಸಂರಕ್ಷಿಸಿರುವರು. ಮತ್ಸ್ಯ ಕೂರ್ಮಾದಿಯಾಗಿ ದಶಾವತಾರದ ಮೂರ್ತಿಗಳು, ಕೇಶವ, ನಾರಾಯಣಾದಿಯಾಗಿ ಮಹಾವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳು, ಪರವಾಸುದೇವ ರಾಮ ಲಕ್ಷ್ಮಣ, ಮಹಾಲಕ್ಷ್ಮೀ, ಬ್ರಹ್ಮದೇವ, ಸರಸ್ವತಿ,ಹಯಗ್ರೀವ ಮುಂತಾದ ಮೂರ್ತಿಗಳನ್ನು ನೋಡಬಹುದು. ವೈಷ್ಣವಮೂರ್ತಿ ಶಿಲ್ಪದ ಬಗ್ಗೆ ಅಧ್ಯಯನ ಮಾಡುವವರು ನೋಡಲೇಬೇಕಾದ ಅಪರೂಪದ ಮೂರ್ತಿಗಳು ಇಲ್ಲಿವೆ. ಹೊಯ್ಸಳರ ದೇವಾಲಯಗಳಲ್ಲಿ ಹೊರ ಭಿತ್ತಿಯಲ್ಲಿ ಪ್ರಸ್ತುತ ಮೂರ್ತಿಗಳನ್ನು ಅಳವಡಿಸಿರುತ್ತಾರೆ. ಹೀಗೆ





ಪ್ರತ್ಯೇಕವಾಗಿ ಬಿಡಿ ಶಿಲ್ಪಗಳಾಗಿ ದೊರೆಯುವುದು ಅಪರೂಪ. ವೇಣುಗೋಪಾಲ ಸ್ವಾಮಿಯ ದೇವಾಲಯದ ಎಡ ಬದಿಯಲ್ಲಿ ಕಣ್ವೇಶ್ವರ ದೇವಾಲಯವಿದೆ. ಗರ್ಭಗುಡಿಯಲ್ಲಿ ಕಣ್ವೇಶ್ವರ ಲಿಂಗವಿದೆ. ಇಲ್ಲಿರುವ ಉಮಾಮಹೇಶ್ವರ ಮತ್ತು ಮಹಿಷಮರ್ದಿನಿಯರ ಶಿಲ್ಪಗಳು ಅಂದವಾಗಿವೆ. ದೇವಾಲಯದ ಹೊರ ಭಿತ್ತಿಯಲ್ಲಿ ದಕ್ಷಿಣಾಮೂರ್ತಿಯ ಮೂರ್ತಿಯಿದೆ. ವೇಣುಗೋಪಾಲಸ್ವಾಮಿ ದೇವಾಲಯದ ಬಲಬದಿಗೆ ಮಹಾಲಕ್ಷ್ಮೀದೇವಾಲಯವಿದೆ. ಇಲ್ಲಿ ಮಹಾಗೌರಿ,ಮಹಾಲಕ್ಷ್ಮೀ ಮತ್ತು ಮಹಾಸರಸ್ವತಿಯರ ವಿಗ್ರಹಗಳಿದ್ದು ಅಪಾರ ಸಂಖ್ಯೆಯ ಭಕ್ತರನ್ನು ಹೊಂದಿದೆ.

**ಹೀಗೆ ಬನ್ನಿ:** ಮಂಡ್ಯ ಜಿಲ್ಲೆಯ ಪಾಂಡವಪುರ - ಕೆ.ಆರ್. ಪೇಟೆ ರಸ್ತೆಯಲ್ಲಿ ಎಲೆಕೆರೆ ಹ್ಯಾಂಡ್ ಪೋಸ್ಟ್ ಸಿಗುತ್ತದೆ. ಅಲ್ಲಿ ಕಟ್ಟೇರಿ ರಸ್ತೆಯ ಕಡೆಗೆ ತಿರುಗಿ ಸಾಗಬೇಕು. ಮೊದಲು ಹರವು ನಂತರ ಕಟ್ಟೇರಿ, ತದನಂತರ ಕನ್ನಂಬಾಡಿ ನಾರ್ತ್‌ಬ್ಯಾಂಕ್ ಸಿಗುತ್ತದೆ. ಪಾಂಡವಪುರದಿಂದ ನಾರ್ತ್ ಬ್ಯಾಂಕ್ 18 ಕಿ.ಮೀ. ದೂರದಲ್ಲಿದೆ. ಮಾರ್ಗದಲ್ಲಿ ಸಿಗುವ ಹರವುವಿನಲ್ಲಿ ಸುಮಾರು 80 ಕಂಬಗಳನ್ನು ಹೊಂದಿರುವ ವಿಜಯನಗರದ ಕಾಲದ ಶ್ರೀರಾಮ ದೇವಾಲಯವಿದೆ.



# ಡಿಸೆಂಬರ್ ತಿಂಗಳ ರಾಶಿ ಫಲಗಳು


ಮೂಲ-ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣಪೂರ್ಣಪ್ರಸಾದ್ ಸಿದ್ಧಾಂತಿ

ಅನುವಾದ- ಕೆ.ಎನ್.ಎಸ್




**ಮೇಷ**

ಶಾರೀರಿಕ ಹಾಗೂ ಮಾನಸಿಕ ವ್ಯಥೆಯುಂಟಾಗುತ್ತದೆ. ಫೈನ್ಯಾನ್ಸ್ ಮುಂತಾದ ಹಣಕಾಸು ಸಂಸ್ಥೆಗಳಿಂದ ತೆಗೆದುಕೊಂಡ ಸಾಲದ ಹೊರೆ ಹೆಚ್ಚಾಗಲಿದೆ. ಆರ್ಥಿಕ ಪರಿಸ್ಥಿತಿಗಳನ್ನು ತಡೆಯಲಾಗದೇ ಇತರರನ್ನು ಸಾಲ ಕೇಳಿದಲ್ಲಿ ತೊಂದರೆಗಳು ಹೆಚ್ಚಾಗಲಿವೆ. ವಾದ ವಿವಾದಗಳಲ್ಲಿ ಸಿಲುಕಿಕೊಳ್ಳದೇ ಜಾಗೃತಿವಹಿಸಬೇಕು.

**ವೃಷಭ**

ಅಣ್ಣ ತಮ್ಮಂದಿರ ಸಹಕಾರವಿರಲಿದೆ. ಸುಖ ಸಂತೋಷಕ್ಕೆ ಕೊರತೆಯಾಗಲಾರದು. ಆಸ್ತಿ ವ್ಯಾಪಾರಗಳು ವೃದ್ಧಿ ಯಾಗಲಿವೆ.ರತ್ನಮಣಿ ಮೊದಲಾದ ವಸ್ತುಗಳನ್ನು ಮಾರಾಟ ಮಾಡುವುದರಿಂದ ಆದಾಯ ವೃದ್ಧಿಯಾಗಲಿದೆ. ಬಂಧು-ಮಿತ್ರರೊಂದಿಗೆ ಆಶಾದಾಯಕವಾಗಿ ಕಾಲ ಕಳೆಯುವಿರಿ.

**ಮಿಥುನ**

ಇದು ಆನಂದದಾಯಕ ಹಾಗೂ ಅದೃಷ್ಟವಂತವಾದ ಕಾಲ ನಿಮ್ಮ ಪ್ರಯತ್ನಗಳಿಗೆ ಜಯವುಂಟಾಗಲಿದೆ. ವ್ಯಾಜ್ಯಗಳ ವಿಷಯಗಳಲ್ಲಿಯೂ ಸಹಾ ಉಪಶಮನ ದೊರೆಯಲಿದೆ. ನಿಮ್ಮ ಸ್ಥಿತಿಗತಿ ಹಾಗೂ ಆದಾಯವೂ ಸಹಾ ವೃದ್ಧಿಯಾಗಲಿದೆ.

**ಕರ್ಕಾಟಕ**

ಸಹೋದ್ಯೋಗಿಗಳೊಂದಿಗೆ ವಾದವಿವಾದಗಳನ್ನು ಜಾಣತನದಿಂದ ತಪ್ಪಿಸಿಕೊಳ್ಳಬೇಕು. ವಿದ್ಯಾರ್ಥಿಗಳ ಪ್ರಯತ್ನಗಳು ಕಾರ್ಯರೂಪಗೊಳ್ಳಲಿವೆ. ಓದಿನ ವಿಷಯದಲ್ಲಿ ಮತ್ತಷ್ಟು ಪ್ರಯತ್ನ ಹಾಗೂ ಶ್ರದ್ಧೆ ಅಗತ್ಯ. ಲೇವಾದೇವಿಗಳಿಗೆ ಸಕಾಲವಲ್ಲ.

**ಸಿಂಹ**

ನಿಮ್ಮ ಒಡಹುಟ್ಟಿದವರು ನಿಮ್ಮೊಡನೆ ಉತ್ತಮ ಸಮಯ ಕಳೆಯಲು ಬಯಸುತ್ತಾರೆ. ನಿಮಗೆ ಒಳ್ಳೆಯ ಸಾಮಾಜಿಕ ಜೀವನ ದೊರೆಯಲಿದೆ. ನೀವು ನಿಮ್ಮ ಹವ್ಯಾಸ, ಸಂಗೀತ, ಕಲೆ ಮೊದಲಾದ ಸೃಜನಾತ್ಮಕ ವಿಷಯಗಳಲ್ಲಿ ಸಮಯವನ್ನು ಕಳೆಯುವ ಅವಕಾಶವಿದೆ.

**ಕನ್ಯೆ**

ಅಧಿಕಾರ, ಸಮಾಜದಲ್ಲಿ ಉನ್ನತ ಸ್ಥಾನ ಲಭಿಸಲಿದೆ. ಭೌತಿಕ ಸುಖ ಹಾಗೂ ವಿಲಾಸಗಳನ್ನು ಅನುಭವಿಸುವಿರಿ. ನೀವು ಹೊಸ ಸ್ನೇಹಿತರನ್ನು ಸಹಾ ಸಂಪಾದಿಸಿಕೊಳ್ಳುವಿರಿ. ಹಾಗೂ ಆನಂದಕರವಾದ ಜೀವನ ಶೈಲಿಯೊಂದಿಗೆ ಜೀವನದಲ್ಲಿ ಮುಂದುವರೆಯುವಿರಿ.

**ತುಲಾ**

ವಿದ್ಯಾರ್ಥಿಗಳು ನಾಯಕತ್ವ ಲಕ್ಷಣಗಳನ್ನು ಬೆಳೆಸಿಕೊಂಡು ಅಧ್ಯಯನದಲ್ಲೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲೂ ವಿಜಯವನ್ನು ಸಾಧಿಸುವಿರಿ.ಕೃಷಿಗಾರರಿಗೆ ಅಧಿಕ ಬೆಳೆಯಿಂದ ಅಧಿಕ ಆದಾಯ ಎಲ್ಲಾ ವೃತ್ತಿಯಲ್ಲಿರುವವರಿಗೆ ಸಮೃದ್ಧಿ.

**ವೃಶ್ಚಿಕ**

ಧನ ಸಂಗ್ರಹಿಸುವಿರಿ. ಪ್ರಸ್ತುತ ಪುತ್ರರೊಂದಿಗೆ ಸುಖ ಜೀವನ. ಕುಟುಂಬ ವಾತಾವರಣ ಚೆನ್ನಾಗಿರುತ್ತದೆ. ಆರೋಗ್ಯ, ಒಡಹುಟ್ಟಿದವರೊಂದಿಗೆ, ಅಣ್ಣತಮ್ಮಂದಿರು, ಅಕ್ಕ-ತಂಗಿಯರೊಂದಿಗೆ ಸತ್ಸಂಬಂಧಗಳು ಅವರ ಸಂತಾನ ಪ್ರಗತಿಗೆ ಪ್ರಯತ್ನ ನಡೆಯಲಿವೆ.

**ಧನಸ್ಸು**

ದೂರ ಪ್ರಯಾಣಗಳನ್ನು ಮುಂದೂಡುವುದು ಒಳಿತು ಮಾರ್ಗ ಪ್ರತಿಬಂಧಕಗಳು ಉಂಟಾಗಬಹುದು. ಫ್ಲೂ ಮುಂತಾದ ಜ್ವರ,ಮೈ,ಕೈ ನೋವಿನಂತಹ ಆರೋಗ್ಯ ಸಮಸ್ಯೆಗಳು ಬಾಧಿಸುವ ಅವಕಾಶವಿದೆ.

**ಮಕರ**


ಬೇಸಾಯಗಾರರಿಗೆ ಸಮಯ ಕೂಡಿ ಬರಲಿದೆ. ಶತ್ರುಗಳ ಮೇಲೆ ಜಯ ಅವರನ್ನು ಸದೆಬಡೆಯುವಿರಿ. ವೃತ್ತಿ ಉದ್ಯೋಗಗಳಲ್ಲಿ ಗೌರವ ಆರ್ಥಿಕ ಪುಷ್ಠಿ, ಕುಟುಂಬ ವೃದ್ಧಿಯಾಗಲಿದೆ. ವ್ಯಾಪಾರಗಳಲ್ಲಿ ಆರ್ಥಿಕ ಲಾಭಗಳಿಂದ ಮುನ್ನಡೆ.

**ಕುಂಭ**

ಅಭಿವೃದ್ಧಿ ಹಾಗೂ ಲಾಭಗಳನ್ನು ಹೊಂದುವ ಶುಭ ಸಮಯವಿದೆ.ಈ ಕಾಲದಲ್ಲಿ ಸಹ ಉದ್ಯೋಗ ವಿಷಯಗಳಲ್ಲಿ ಉನ್ನತಿ ಅಂದರೆ ಪ್ರಮೋಷನ್ ಅಥವಾ ಸಂಬಳ ಹೆಚ್ಚಳವಾಗಲಿದೆ. ಹೊಸ ಅವಕಾಶಗಳನ್ನು ಹೊಂದುವಿರಿ.

**ಮೀನ**

ಸ್ನೇಹಿತರಿಂದ ಸಹಕಾರ ಹಾಗೂ ಎಲ್ಲಾ ವಿಷಯಗಳಲ್ಲಿ ವಿಜಯವನ್ನು ಪಡೆಯುವಿರಿ. ಸಂಪತ್ತು ವೃದ್ಧಿಯಾಗುವ ಸೂಚನೆ. ಆರ್ಥಿಕ ಸಮಸ್ಯೆಗಳಿಂದ ಹೊರಬರುವಿರಿ. ಸಮಾಜದಲ್ಲಿ ಗಣ್ಯಸ್ಥಾನ ಹಾಗೂ ಆನಂದವನ್ನು ಅನುಭವಿಸುವ ಸುಸಮಯ.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

**- ಡಾ|| ಅನಸೂಯ ಎಸ್. ರಾಜೀವ್**

### 1. ವಿವಾಹ ಸಂಸ್ಕಾರದಲ್ಲಿ ಸಪ್ತಪದಿಯ ಪಾತ್ರ ಎಂತಹುದು?

**ಉತ್ತರ:** ಮದುವೆ ಎಂದರೆ ಒಂದು ದಿನದ ಸಂಭ್ರಮ ಪ್ರಥಮ ಸಂಗಮ ವಷ್ಟೇ ಅಲ್ಲದೆ ಎರಡು ಮನೆಗಳ ಮನಗಳ ಬೆಸುಗೆ ಮೂರುಗಂಟಿನ ಬಂಧ ಅನುಬಂಧವಾಗಿರುವ ವಿವಾಹವು ಹಿರಿಯರ ಆಶೀರ್ವಾದ ಅಕ್ಷತೆಯ ಆಶೀರ್ವಾದ ಪಂಚಭೂತಗಳೆ ಸಾಕ್ಷಿ. ಏಳು ಹೆಜ್ಜೆಗಳನ್ನು ಏಳೇಳು ಜನ್ಮಗಳಿಗೆ ಹಾಕುವುದು ಎಂದರ್ಥ, ಸಪ್ತಪದಿಯಲ್ಲಿ ಅವಳು ನಡೆಯುವ ಏಳು ಹೆಜ್ಜೆಗಳಲ್ಲೂ ತಮ್ಮ ಬದುಕಿನ ಅತ್ಯಂತ ಪ್ರಭಾವ ಶಾಲಿಯಾದ ವಚನಗಳನ್ನು ಕೊಡುವ ಮಂತ್ರಗಳನ್ನು ಇಬ್ಬರೂ ಪ್ರಮಾಣ ಪೂರ್ವಕವಾಗಿ ನುಡಿಯುವ ಅನನ್ಯ ಸಂಪ್ರದಾಯ ಹಿಂದೂ ವಿವಾಹ ಸಂಸ್ಕಾರದ ಮುಖ್ಯಅಂಶವಾಗಿದೆ. ಪತಿ ಪತ್ನಿಯರು ತಮ್ಮ ಮುಂದಿನ ಜೀವನವನ್ನು ಸುಖಮಯವಾಗಿ ಕಳೆದು ಸಾರ್ಥಕಗೊಳಿಸಿಕೊಂಡು ಸಂತಾನಾಭಿವೃದ್ಧಿ ಮಾಡಿ ವಂಶವನ್ನು ಉದ್ಧರಿಸಿ ಕೊನೆಗೆ ಮೋಕ್ಷದತ್ತ ಸಾಗುವ ಪಾಠವನ್ನು ಹೇಳಿಕೊಡುವುದೇ ಸಪ್ತಪದಿ ಮಂತ್ರಗಳು ಅದರಲ್ಲಿ ಮೊದಲನೇ ಹೆಜ್ಜೆಯು ಅನ್ನವೃದ್ಧಿಯನ್ನು ಸೂಚಿಸುತ್ತದೆ. ಅಂದರೆ ನನ್ನೊಂದಿಗೆ ಮೊದಲ ಹೆಜ್ಜೆಯಿಟ್ಟಿರುವೆ. ನಾವೀಗ ಗೆಳೆಯರಾಗಿದ್ದೇವೆ. ಸದಾ ನನಗೆ ಆಹಾರವನ್ನು ಒದಗಿಸು. ಧಾರ್ಮಿಕ ವ್ರತಾಚರಣೆಗಳಲ್ಲಿ ಸಹಭಾಗಿಯಾಗು ಉತ್ತಮ ಸಂತಾನಗಳನ್ನು ಪಡೆದು ನಾವಿಬ್ಬರೂ ಬಹುಕಾಲ ಬದುಕೋಣ ಎಂದು ವರ ವಧುವಿಗೆ ಹೇಳುತ್ತಾರೆ. ಆಗ ವಧುವು ನನ್ನನ್ನು ನಿಮಗೆ ಸಮರ್ಪಿಸಿಕೊಳ್ಳುತ್ತಿದ್ದೇನೆ. ಮನೆಯ ಆಹಾರದ ಹಣಕಾಸಿನ ಜವಾಬ್ದಾರಿಯನ್ನು ನೀಡಿ ನನಗೆ ಕೊಟ್ಟ ಜವಾಬ್ದಾರಿಗಳನ್ನು ನಾನು ಸಮರ್ಥವಾಗಿ ನಿಭಾಯಿಸುತ್ತೇವೆ.

ಎರಡನೇ ಹೆಜ್ಜೆಯು ಬಲವೃದ್ಧಿಗಾಗಿ ನೂತನ ವಧೂವರರೊಂದಿಗೆ ಎರಡೂ ಕುಟುಂಬಗಳು ಆಯುರಾರೋಗ್ಯದಿಂದ ಇರಲೆಂದು.ವರ ಹೇಳುತ್ತಾನೆ. ನನ್ನೊಂದಿಗೆ ಎರಡನೇ ಹೆಜ್ಜೆಯಿಟ್ಟಿದ್ದೀಯಾ ಸದಾ ನನ್ನೊಂದಿಗಿದ್ದು ಶಕ್ತಿಯನ್ನು ನೀಡು. ಆಗ ವಧುವು ನೀವು ದುಃಖದಲ್ಲಿರುವಾಗ ಮನ ಸ್ಫೂರ್ತಿಯನ್ನು ನೀಡುವೆ. ನಿಮ್ಮ ಒಳಿತಿಗಾಗಿ ಸದಾ ಚಿಂತಿಸುವೆ. ಸದಾ ನಿಮಗೆ ಹಿತಕರವಾದ ಮಾತನ್ನಾಡುವೇ ಕುಟುಂಬ ಹಾಗೂ ಮಕ್ಕಳ ಸಂಪೂರ್ಣ ಜವಾಬ್ದಾರಿಯನ್ನು ವಹಿಸುತ್ತೇನಲ್ಲದೇ ನಿಮ್ಮ ಪ್ರೀತಿ ಸದಾ ನನ್ನೊಬ್ಬಳಿಗೇ ಇರಲಿ.

ಮೂರನೇ ಹೆಜ್ಜೆ ಧನ ಪ್ರಾಪ್ತಿಯಾಗಲೆಂದು ಇಡಲಾಗುತ್ತದೆ. ವರ ಹೇಳುತ್ತಾನೆ. ನನ್ನ ಸಂಪ್ರತನ್ನು ನೀನು ಇನ್ನೂ ಹೆಚ್ಚಿಸುವೆಯೆಂಬ ನಂಬಿಕೆಯಿಂದ ನಿನ್ನೊಡನೆ ಮೂರನೇ ಹೆಜ್ಜೆಯನ್ನಿಟ್ಟಿದ್ದೇನೆ. ಆಗ ವಧುವು ಒಂದೇ-ಮನಸ್ಸಿನಿಂದ ನಿಮ್ಮನ್ನೂ ಆರಾಧಿಸುತ್ತೇನೆ. ನನ್ನ ಸಹೋದರರನ್ನು ಪ್ರೀತಿಸುವಂತೆ ನಿಮ್ಮನ್ನೂ ಪ್ರೀತಿಸುತ್ತೇನೆ. ನಿಮ್ಮಲ್ಲೇ ಭಕ್ತಿ ಹೊಂದಿರುತ್ತೇನೆ ಇದು ನನ್ನ ಪ್ರತಿಜ್ಞೆ.

ನಾಲ್ಕನೇ ಹೆಜ್ಜೆಯು ಗಂಡ ಹೆಂಡತಿ ನಡುವೆ ಸುಖ ಸಂತೋಷಗಳು ಸದಾಕಾಲ ತುಂಬಿ ತುಳುಕಲೆಂದು ವರ ಹೇಳುತ್ತಾನೆ. ನನ್ನ ಸಂತೋಷವನ್ನು ಹೆಚ್ಚಿಸುವೆಯೆಂಬ ನಂಬಿಕೆಯಿಂದ ನಿನ್ನೊಂದಿಗೆ ನಾಲ್ಕನೇ ಹೆಜ್ಜೆಯನ್ನಿಡುತ್ತಿದ್ದೇನೆ. ವಧುವು ಯಾವಾಗಲೂ ನೀವು ಆನಂದದಲ್ಲಿರುವಂತೆ ನೋಡಿಕೊಳ್ಳುತ್ತೇನೆ. ನಿಮ್ಮ ಲಾಲನೆ ಪೋಷಣೆಯ ಜವಾಬ್ದಾರಿ ನನ್ನದು ಎಂದು ಹೇಳುತ್ತಾಳೆ.

ಐದನೇ ಹೆಜ್ಜೆ ಇತರರಿಗೆ ಒಳ್ಳೆಯದನ್ನು ಮಾಡುವುದಕ್ಕಾಗಿ ವರನು ಉತ್ತಮ ಸಂತಾನವನ್ನು ಕರುಣಿಸುವೆಯೆಂಬ ನಂಬಿಕೆಯಿಂದ ಐದನೇ ಹೆಜ್ಜೆಯನ್ನಿಡುತ್ತಿದ್ದೇನೆ. ವಧುವು ಸಂಪತ್ತಿನಲ್ಲಿ ದುಃಖದಲ್ಲಿ ಸದಾ ನಿಮ್ಮೊಂದಿಗಿರು ತ್ತೇನೆ. ವಿಶ್ವಾಸ ಹಾಗೂ ಪ್ರಾಮಾಣಿಕತೆಯಿಂದ ನಿಮ್ಮೊಂದಿಗೆ ಜೀವಿಸುತ್ತೇನೆ, ನಿಮ್ಮ ಆಸೆಗಳನ್ನು ಸದಾ ನೆರವೇರಿಸುತ್ತೇನೆ.

ಆರನೇ ಹೆಜ್ಜೆಯು ದಾಂಪತ್ಯ ಜೀವನದಲ್ಲಿ ಕಲಹಗಳು, ಅನುಮಾನಗಳು ಬಾರದೆ ಸುಗಮವಾಗಿ ಸಾಗಲೆಂದು ವರ ಹೇಳುತ್ತಾನೆ. ಎಲ್ಲ ಋತುಗಳಲ್ಲೂ ಸಂತೋಷವನ್ನು ನೀಡುವೆಯೆಂಬ ಭರವಸೆಯಿಂದ ಆರನೇ ಹೆಜ್ಜೆಯನ್ನಿಡುತ್ತಿದ್ದೇನೆ, ವಧುವು ಎಲ್ಲ ಧಾರ್ಮಿಕ ಕಾರ್ಯಕ್ರಮದಲ್ಲೂ ಎಲ್ಲ ವಿಧದ ಸಂತೋಷ ದುಃಖಗಳಲ್ಲೂ ನಾನು ನಿಮ್ಮೊಂದಿಗಿರುತ್ತೇನೆ. ಯಾವಾಗಲೂ ನಿಮ್ಮ ಸಂತೋಷವನ್ನು ಬಯಸುತ್ತೇನೆ.

ಏಳನೇ ಹೆಜ್ಜೆಯು ಶಾರೀರಿಕವಾಗಿ ಮಾನಸಿಕವಾಗಿ ಸುದೃಢವಾದ ಸಂತಾನವನ್ನು ಕರುಣಿಸೆಂದು ಅಗ್ನಿ ದೇವರನ್ನು ಪ್ರಾರ್ಥಿಸುತ್ತಾ ಹಾಕುವ ಹೆಜ್ಜೆ ವರ ಹೇಳುತ್ತಾನೆ. ಪರಸ್ಪರರು ಅರಿತು ಜೀವನದುದ್ದಕ್ಕೂ ಜೊತೆಯಾಗಿ ಬಾಳೋಣ ಎನ್ನುತ್ತಾ ನಿನ್ನೊಡೆ ಏಳನೇ ಹೆಜ್ಜೆಯನ್ನಿಡುವೆ.

ವಧು ಹೇಳುತ್ತಾಳೆ - ಅಂದರೆ ದೇವಾನುದೇವತೆಗಳ ಅನುಗ್ರಹದಿಂದ ನಿಮ್ಮೊಡನೆ ಏಳು ಹೆಜ್ಜೆ ನಡೆದು ನಿಮ್ಮ ಪತ್ನಿಯಾಗಿರುವೆ. ಯಾವ ಪ್ರತಿಜ್ಞೆಗಳನ್ನು ಮಾಡಿದ್ದೇವೆಯೋ ಅದನ್ನು ಶಿರಸಾ ವಹಿಸಿ ಪಾಲಿಸೋಣ. ಪರಸ್ಪರರು ಎಂದಿಗೂ ವಿಶ್ವಾಸದಿಂದಿರೋಣ. ಯಾವಾಗಲೂ ಒಬ್ಬರನ್ನೊಬ್ಬರು ಪ್ರೀತಿಸೋಣ ಎಂದೂ ಸಪ್ತಪದಿಯನ್ನು ತುಳಿಯುತ್ತಾರೆ.

### 2. ಮಾಂಗಲ್ಯಧಾರಣೆಯ ಮಹತ್ವವೇನು?

**ಉತ್ತರ:** ಮಾಂಗಲ್ಯಧಾರಣೆಯು ದಂಪತಿಯಲ್ಲಿ ತಾವು ಪರಸ್ಪರರ ಸರ್ವಸ್ವ ಎಂಬ ಭಾವವನ್ನು ಅದು ಮೂಡಿಸುತ್ತದೆ. ವಿವಾಹಿತಳ ಸೌಭಾ ಗ್ಯದ ಚಿಹ್ನೆಯೂ ಆಗಿರುವ ತಾಳಿಯು ಅವಳ ಮನದಲ್ಲಿ ಭದ್ರತೆಯ ಭಾವ ವನ್ನು ಮೂಡಿಸುತ್ತದೆ. ವಿವಾಹವು ವಧೂವರರ ಜೀವನದಲ್ಲಿ ಒಂದು ಪವಿತ್ರ ಬಂಧನವಾಗಿದ್ದು, ಮಾಂಗಲ್ಯವು ಆ ವಿವಾಹದ ಲಾಂಛನವಾದ ದ್ದರಿಂದ ವರನು ಅದನ್ನು ವಧುವಿಗೆ ಕಟ್ಟುವಾಗ ನನ್ನ ಜೀವನ ಕಾರಣಕ್ಕಾಗಿ ಈ ಮಾಂಗಲ್ಯತಂತುವನ್ನು ನಿನ್ನ ಕಂಠಕ್ಕೆ ಕಟ್ಟುತ್ತಿದ್ದೇನೆ. ಹೇ ಸೌಭಾಗ್ಯ ವತಿಯೇ ನೀನು ನನ್ನೊಂದಿಗೆ ನೂರು ವರ್ಷ ಬಾಳು ಎಂಬ ಸಂಕಲ್ಪವನ್ನು ಮಾಡುವನು. ಹೀಗೆ ಮಾಂಗಲ್ಯವು ವಧುವಿಗೆ ಮಾತ್ರವಲ್ಲ. ವರನಿಗೂ ಮಾನಸಿಕವಾಗಿ ಅವಳ ಮೇಲೆ ಮಮಕಾರವನ್ನು ಅವಲಂಬನೆಯ ಭಾವ ವನ್ನು ಮೂಡಿಸುವ ವಸ್ತುವಾಯಿತು.

# ಹೀಯಾಳಿಸುವ ಪ್ರವೃತ್ತಿ ಒಳ್ಳೆಯದಲ್ಲ

- ಎ.ಆರ್. ರಘುರಾಮ
9916138436



ಸೋಮಪುರವೆಂಬ ಗ್ರಾಮದಲ್ಲಿ ಮಲ್ಲಪ್ಪನೆಂಬ ಅಗಸ ಇದ್ದ. ಆತ ಒಂದು ಕತ್ತೆ ಮತ್ತು ಕುದುರೆಯನ್ನು ಸಾಕಿದ್ದ. ದಿನವೂ ಕೆರೆಯಲ್ಲಿ ಒಗೆದ ಬಟ್ಟೆಗಳ ಭಾರವಾದ ದೊಡ್ಡ ಗಂಟನ್ನು ಕತ್ತೆ ಮೇಲೆ ಹೊರಿಸುತ್ತಿದ್ದ. ನಂತರ ಆತ ಕುದುರೆ ಮೇಲೆ ಕುಳಿತುಕೊಂಡು ಸಾಗುತ್ತಿದ್ದ. ಹತ್ತಾರು ವರ್ಷಗಳಿಂದ ಇದೇ ಕೆಲಸ ಸಾಗಿತ್ತು. ಕತ್ತೆಗೂ ನಿತ್ಯ ಭಾರ ಹೊತ್ತು ಹೊತ್ತು ಸಾಕಾಗಿತ್ತು. ಆದರೂ ಅದು ಮರು ಮಾತಾಡದೇ ತನ್ನ ಕೆಲಸ ವನ್ನು ವಿನಮ್ರವಾಗಿಯೇ ಮಾಡುತ್ತಿತ್ತು. ಹೀಗೆ ದಿನಗಳು ಕಳೆ ಯುತ್ತಿದ್ದಂತೆ ಕುದುರೆಗೆ ಸೊಕ್ಕು ಹೆಚ್ಚಾಯಿತು. ಕತ್ತೆ ಬಗ್ಗೆ ತಾತ್ಸಾರ ಬೆಳೆಯಿತು. ಒಂದು ದಿನ ಏನಪ್ಪಾ ಗಾರ್ದಭರಾಯ, ನಿನ್ನ ಬದುಕಿನ ಉದ್ದಕ್ಕೂ ಕೇವಲ ಭಾರ ಹೊತ್ತು ಸಾಗುವುದೇ ಆಯಿತು. ನಿನ್ನಂಥವರ ಜನ್ಮ ಯಾರಿಗೂ ಬೇಡ. ಮುಂದಿನ ಜನುಮದಲ್ಲಾದರೂ ನೀನು ನನ್ನ ರೀತಿ ಕುದುರೆಯಾಗಿ ಹುಟ್ಟು ಎಂದು ಅಪಹಾಸ್ಯ ಮಾಡಿ ನಕ್ಕಿತು.

ಇದರಿಂದ ಕತ್ತೆಗೆ ಅತೀವ ಬೇಸರ ಆಯಿತು. ಮದ ಹೆಚ್ಚಾಗಿರುವ ಕುದುರೆಗೆ ಪಾಠ ಕಲಿಸಲು ನಿರ್ಧರಿಸಿತು. ಒಂದು ದಿನ ಅಗಸನಿಗೆ ಮಿತಿ ಮೀರಿದ ಬಟ್ಟೆ ಒಗೆಯುವ ಕೆಲಸ ಬಂತು ಸರಿ. ಎಂದಿನಂತೆ ಆತ ಬಟ್ಟೆಗಳನ್ನು ಒಗೆದು ಕತ್ತೆಯ ಬೆನ್ನಿಗೆ ಹೇರಿದ. ನಾಲ್ಕು ಹೆಜ್ಜೆ ನಡೆದ ಕತ್ತೆ ನೆಲಕ್ಕೆ ಬಿದ್ದು ಒದ್ದಾಡ ತೊಡಗಿತು. ಇದರಿಂದ ಅಗಸನಿಗೆ ಆತಂಕ ಹೆಚ್ಚಾಯಿತು. ಇಷ್ಟು ದಿನ ಕೆಲಸ ಮಾಡಿದ ಕತ್ತೆಗೆ ಆರೋಗ್ಯ ಕೆಟ್ಟಿರಬಹುದು ಎಂದು ತಿಳಿದ. ಆತ ಕುದುರೆ ಮೇಲೆ ಮಣ ಭಾರದ ಬಟ್ಟೆ ಗಂಟು ಹೊರಿಸಿ ಸಾಗಿದ. ಎಂದೂ ಈ ರೀತಿ ಭಾರ ಹೊತ್ತು ಅಭ್ಯಾಸ ಇಲ್ಲದ ಕುದುರೆಗೆ ಸಾಕು ಸಾಕಾಗಿಬಿಟ್ಟಿತು. ಕತ್ತೆ ಒಳಗೇ ನಗುತ್ತಾ ಆರಾಮವಾಗಿ ಸಾಗಿತು.

ಕತ್ತೆಯನ್ನು ಹೀಯಾಳಿಸಿದ ತಪ್ಪಿಗಾಗಿ ಕುದುರೆಗೆ ತಕ್ಕ ಶಾಸ್ತಿಯಾಯಿತು. ಕತ್ತೆಯ ಕಷ್ಟ ಏನು ಎಂದು ಅರಿತ ಕುದುರೆ ಅಂದಿನಿಂದ ಹೀಯಾಳಿಸುವ ಪ್ರವೃತ್ತಿ ಬಿಟ್ಟಿತು. ಪ್ರತಿ ಕೆಲ ಸಕ್ಕೂ ಅದರದ್ದೇ ಆದ ಮಾನ್ಯತೆ ಇರುತ್ತದೆ. ನಾವು ಮಾತ್ರ ಶ್ರೇಷ್ಠರು, ಇತರರು ಕನಿಷ್ಠರು ಎಂದು ಯಾರನ್ನೂ ನಾವು ಹೀಯಾಳಿಸಬಾರದು ಎಂಬುದು ಈ ಪ್ರಸಂಗದ ನೀತಿ.


## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್‌ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

- ಕಾರ್ಯನಿರ್ವಹಣಾಧಿಕಾರಿ

ಈ ಗೊಂಬೆಗೆ ಚುಕ್ಕಿಯನ್ನು ಸೇರಿಸಿ ಹಾಗೂ
ಬಣ್ಣವನ್ನು ತುಂಬಿರಿ.....




ಬಣ್ಣವನ್ನು
ತುಂಬಿರಿ.






1.ಧನುರ್ಮಾಸ

2. ಗೀತಾಜಯಂತಿ

3. ಸುಬ್ರಹ್ಮಣ್ಯ ಷಷ್ಠಿ

ಮೇಲೆ ಹೇಳಿರುವ ಹಬ್ಬ ಹರಿದಿನಗಳಿಗೆ
ಸಂಬಂಧಿಸಿದ ಚಿತ್ರದ ಹತ್ತಿರವಿರುವ
ರೌಂಡ್‌ನಲ್ಲಿ ಆ ಸಂಖ್ಯೆಯನ್ನು ಹಾಕಿ





ಮಕ್ಕಳೇ, ಗೋದಾದೇವಿ ಯಾವ ಹಾದಿಯಲ್ಲಿ ಹೋದರೆ ತನ್ನ
ಕೃಷ್ಣನಲ್ಲಿಗೆ ಸೇರುತ್ತಾಳೆ, ಎಂದು ಕಂಡು ಹಿಡಿಯಿರಿ ನೋಡೋಣ!

ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು
ಹಿಡಿಯಿರಿ ನೋಡೋಣ....

ಕೆ ಲ್ಲ ಕ ಲಂ ಸು ತು

ಟ್ಟಿ ಕೆ ದ ಪಿ ಯಿ ಅಂ

ಉತ್ತರಗಳು:
ಅಂಕೆಯಿಲ್ಲದ ಕಪಿ ಲಂಕೆ ಸುಟ್ಟಿತು

ತಿರುಮಲೆ ತಿರುಪತಿ ದೇವಸ್ಥಾನಗಳು

# ಮಕ್ಕಳೇ ಇದು ನಿಮಗಾಗಿ

## ರಸ ಪ್ರಶ್ನೆಗಳು

01. ಸ್ವಾಮಿಯವರು ಒಟ್ಟು ಎಷ್ಟು ವರ್ಷಗಳ ಕಾಲ ಅಮ್ಮನವರಿಗಾಗಿ ತಪಸ್ಸನ್ನು ಮಾಡಿದರು?..........
02. ಶ್ರೀ ಕೋಟೇಶ್ವರ ಕ್ಷೇತ್ರದಲ್ಲಿ ಯಾವ ದೇವರನ್ನು ಪೂಜಿಸುತ್ತಾರೆ?..........
03.ಸಂಸ್ಕೃತದಲ್ಲಿ ಯಾವ ಗ್ರಂಥವು ಶ್ರೇಷ್ಠವಾದುದು? ..........
04.ಶ್ರೀ ಚೊಕ್ಕನಾಥಸ್ವಾಮಿ ದೇವಾಲಯವನ್ನು ಚೋಳರು ಯಾವಾಗ ನಿರ್ಮಿಸಿದ್ದಾರೆ? ..........
05.ಗೋದೆಯ ತಂದೆ ಯಾರು? ..........
06.ಗೀತೆ ಎಂದರೆ ಏನು?..........
07.ಪರಬ್ರಹ್ಮಜ್ಞಾನವನ್ನು ಉಪದೇಶಿಸುವುದು ಯಾವುದು? ..........
08.ಪೋಟು ಕೋಣೆಯ ಬಳಿ ಯಾವ ಬಾವಿಯಿದೆ? ..........
09.ಕುಕ್ಕೆಸುಬ್ರಹ್ಮಣ್ಯದಲ್ಲಿ ಯಾವಾಗ ಜಾತ್ರೆ ಆರಂಭವಾಗುತ್ತದೆ? ..........
10.ಶ್ರೀ ವಿದ್ಯಾಪ್ರಸನ್ನ ತೀರ್ಥರು ಯಾವಾಗ ಜನಿಸಿದರು?..........
11.ಕಾಶಿರಾಜ ಪ್ರತಾಪ ಸೇನನಿಗೆ ಎಷ್ಟು ಜನ ಮಕ್ಕಳಿದ್ದರು? ..........
12.ಯಾವ ವೃಕ್ಷವನ್ನು ನೋಡಿ ಸತ್ಯಭಾಮೆ ದ್ವಾರಕೆಗೆ ತೆಗೆದುಕೊಂಡು ಹೋದಳು?..........
13. ಶ್ರೀಮಧ್ವಾಚಾರ್ಯರ ಶಿಷ್ಯ ಯಾರು? ..........
14.ವೇಣುಗೋಪಾಲಸ್ವಾಮಿ ದೇವಾಲಯದ ಬಲಬದಿಯಲ್ಲಿ ಯಾವ ದೇವಾಲಯವಿದೆ? ..........
15.ಮಲ್ಲಪ್ಪ ಅಗಸ ಯಾವ ಗ್ರಾಮದಲ್ಲಿದ್ದನು? ..........

## ಸೂಚನೆಗಳು

29 ಕ್ವಿಜ್

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ನಿಮ್ಮ ಉತ್ತರಗಳನ್ನು ನಮಗೆ ಕಳುಹಿಸಬೇಕಾದ ಕೊನೆಯ ದಿನಾಂಕ ಇದೇ ತಿಂಗಳ 25 ರ ಒಳಗೆ ಕಳುಹಿಸಬೇಕು.
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಪ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**


ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪತ್ರಿಕೆ
ತಿ.ತಿ.ದೇ. ಪ್ರೆಸ್,
2 ನೇ ಅಂತಸ್ತು
ಕೆ.ಟಿ. ರಸ್ತೆ,
ತಿರುಪತಿ : 517 507
ಆಂಧ್ರ ಪ್ರದೇಶ್


ಹೆಸರು :
ಚಂದಾ ಸಂಖ್ಯೆ :
ತಂದೆಯ ಹೆಸರು :
ತಾಯಿಯ ಹೆಸರು:

ವಿಳಾಸ :

ದೂರವಾಣಿ ಸಂಖ್ಯೆ :

ಈ ಚಕ್ರದಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಬಣ್ಣದಲ್ಲಿರುವ ಬಾಕ್ಸ್‌ನಲ್ಲಿಯೇ ಬರೆಯಿರಿ

- ಭಗವದ್ಗೀತೆಯು ಮಹಾಭಾರತದ ಯಾವ ಅಧ್ಯಾಯದಲ್ಲಿ ಕಂಡು ಬರುತ್ತದೆ?
- ಅರ್ಜುನನು ತನ್ನ ರಥವನ್ನು ಎಲ್ಲಿಗೆ ತೆಗೆದುಕೊಂಡು ಹೋಗಬೇಕೆಂದು ಶ್ರೀ ಕೃಷ್ಣನನ್ನು ಕೇಳಿದನು?
- ಶ್ರೀ ಕೃಷ್ಣನಿಗೆ ಇಷ್ಟವಾದ ಹೂ ಯಾವುದು?
- ಶ್ರೀ ಕೃಷ್ಣನ ರಾಜ್ಯವನ್ನು ಏನೆಂದು ಕರೆಯುತ್ತಾರೆ?
- ಮಹಾಭಾರತದಲ್ಲಿ ಪಾರ್ಥ ಎಂದು ಯಾರನ್ನು ಕರೆಯುತ್ತಾರೆ?
- ಶ್ರೀ ಕೃಷ್ಣನ ಆಯುಧ ಯಾವುದು?
- ಶ್ರೀ ಕೃಷ್ಣನಿಗೆ ಕೃಷ್ಣ ಎಂದು ಹೆಸರಿಟ್ಟವರು ಯಾರು?
- ಭಗವದ್ ಗೀತೆಯಲ್ಲಿ ಎಷ್ಟು ಅಧ್ಯಾಯಗಳಿವೆ?




1)ಭೀಷ್ಮಪರ್ವ 2)ಕುರುಕ್ಷೇತ್ರದ ಎರಡು ಸೇನೆಗಳ ನಡುವೆ 3)ಪಾರಿಜಾತ 4)ದ್ವಾರಕ 5)ಅರ್ಜುನ 6) ಚಕ್ರ
7)ಯಶೋಧೆ 8)18




ಮಕ್ಕಳೇ ಈ ಮೇಲಿನ ಚಿತ್ರದಲ್ಲಿರುವ ಬೀಗದ ಕೈಯಲ್ಲಿರುವ ಅಂಕೆಗಳನ್ನು ಕೂಡಿದರೆ ಅಥವಾ ಕಳೆದರೆ ನಿಮಗೆ ಬರುವ ಸರಿಯಾದ ಉತ್ತರದೊಂದಿಗೆ ಯಾವ ಬೀಗದ ಕೈ ಯಾವ ಬೀಗಕ್ಕೆ ಸರಿಹೊಂದುತ್ತದೆ ಎಂದು ಕಂಡು ಹಿಡಿಯಿರಿ ಮಕ್ಕಳೇ!

1)ii 2)i 3)iv 4)iii 5)v

## ನೀತಿಯನ್ನು ತಿಳಿಯೋಣ!





ಚಿತ್ರಗಳನ್ನು ಜೋಡಿಸಿ. ಕಥೆಯನ್ನು ಅರ್ಥ ಮಾಡಿಕೊಂಡು ನೀತಿಯನ್ನು ತಿಳಿದುಕೊಳ್ಳಿ.

ಒಗ್ಗಟ್ಟಿನಲ್ಲಿ ಬಲವಿದೆ

ಚಿತ್ರಕಥೆ

# ಮಹಾದಾತ

ಕಥೆ: ತೆಲುಗು ಮೂಲ : ಶ್ರೀನಿವಾಸದೀಕ್ಷಿತರು
ಅನುವಾದ : ಆರ್.ಕೆ.ವಿ.
ಚಿತ್ರಗಳು : ಕೆ. ದ್ವಾರಕಾನಾಥ





ತಕ್ಷಣ ಕರ್ಣನು ರಕ್ಷಕಭಟನಿಗೆ ಆದೇಶಿಸಿದ ಗಂಧದ ಚೆಕ್ಕೆಗಳನ್ನು ತೆಗೆದುಕೊಂಡು ಬಾ ಎಂದು... ರಕ್ಷಕಭಟನು ಹೋಗಿ ಹಿಂದಿರುಗಿ ಬಂದನು.
ಪ್ರಭು! ಒಣಗಿದ ಗಂಧದ ಚೆಕ್ಕೆಗಳು ಎಲ್ಲೂ ಸಿಗಲಿಲ್ಲ.
ಹೌದಾ
ಕರ್ಣನು ರಕ್ಷಕಭಟರನ್ನು ಕರೆದನು ಭವನ ನಿರ್ಮಾಣಕ್ಕಾಗಿ ತಯಾರಿಸಿದ ಗಂಧದ ಚೆಕ್ಕೆಗಳ ಸ್ತಂಭಗಳನ್ನು ಗಡಾರಿಯಿಂದ ಹೊಡೆದು ಭವನವನ್ನು ಬೀಳಿಸಿ ಗಂಧದ ಚೆಕ್ಕೆಗಳನ್ನು ಆ ಬ್ರಾಹ್ಮಣನಿಗೆ ನೀಡಿದನು.
ಹಾಗೆಯೇ ಅಂಗರಾಜಾ!
ನಿನ್ನ ಹೆಂಡತಿಯ ದಹನಸಂಸ್ಕಾರಕ್ಕೆ ಈ ಗಂಧದ ಚೆಕ್ಕೆಗಳಿಂದ ಕಾರ್ಯವನ್ನು ನಿರ್ವಹಿಸು.
ಅಂಗರಾಜನು ಕೊಟ್ಟ ಗಂಧದ ಚೆಕ್ಕೆಗಳನ್ನು ಗಾಡಿಯ ಮೇಲೆ ಇಟ್ಟು ತೆಗೆದುಕೊಂಡು ಹೋಗುತ್ತಾ ಆ ವಿಷಯವನ್ನು ಅರ್ಜುನನಿಗೆ ಹೇಳಿದ ಬ್ರಾಹ್ಮಣ!
ದಾನ ಮಾಡಬೇಕೆಂದು ಕೋರಿಕೆ ಬಲವಾಗಿದ್ದರೆ ಹೇಗಾದರು ಮಾಡುತ್ತಾನೆ. ಆತನಿಗೆ ಯಾವ ಅಡ್ಡವು ಇರುವುದಿಲ್ಲ.
ಅರ್ಜುನಾ! ಗ್ರಹಿಸಿದೆಯಾ? ಅರ್ಜುನನು ತಲೆ ಬಾಗಿಸಿದನು.
ಶ್ರೀ ಕೃಷ್ಣನು ವಿವರಿಸಿದನು..
ಶ್ರೀ ಕೃಷ್ಣನು ನಸುನಗುತ್ತಾ ಕರ್ಣನ ದಾನಗುಣದ ದೊಡ್ಡತನ ಅರ್ಜುನನು ಚೆನ್ನಾಗಿ ಗ್ರಹಿಸುತ್ತಾನೆ.
ಅಂಗರಾಜ ಮಹಾದಾತನಾಗಿ ಲೋಕದಲ್ಲಿ ಪ್ರಸಿದ್ಧಿ ಹೊಂದಿದನು.ಅವನ ಕೀರ್ತಿ ಶಾಶ್ವತವಾಗಿ ಉಳಿದು ಹೋಯಿತು.
ಲೋಕಾಸಮಸ್ತಾಃ ಸುಖಿನೋ ಭವಂತು

తిరుమలె తిరుపతి దేవస్థానగళు. తిరుపతి

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ : (ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ),

ವಿದೇಶಿ ವಾರ್ಷಿಕ ಚಂದಾ ☐ ರೂ. 1030/-

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./

ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವಚಂದಾ (12 ವರ್ಷ) ರೂ.2,400/- ಗಳು ಅನ್‌ಲೈನ್‌ಗಾಗಿ ( https://ttdevasthanams.ap.gov.in), ಡಿ.ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ.ಅವರ ಹೆಸರಿನಲ್ಲಿ ತೆಗೆಯಬೇಕು. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು. ಎಂ.ಓ. ಕಳುಹಿಸು ವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ - ಪ್ರಧಾನಸಂಪಾಕರು,ಸಪ್ತಗಿರಿ ಕಾರ್ಯಾಲಯ,ತಿ.ತಿ.ದೇ ಪ್ರೆಸ್. ಎರಡನೇ ಅಂತಸ್ತು, ಕೆ. ಟಿ.ರೋಡ್ಡು,ತಿರುಪತಿ - 517507.

ಸಪ್ತಗಿರಿ ಚಂದಾ ವಿವರಣೆಗಾಗಿ ಫೋನ್‌ನಂಬರ್:0877- 2264359,0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಕ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು **ಟೋಲ್ ಫ್ರಿ ನಂಬರ್** ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**

0877-2233333,

0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, 2nd Floor, K.T.Road, Tirupati - 517 507.
Editor : Dr. V. G. Chokkalingam, M.A., Ph.D.





ತಿರುಮಲೆ ತಿರುಪತಿ ದೇವಸ್ಥಾನಗಳು

## ಆಧ್ಯಾತ್ಮಿಕ ಮಾಸ ಪತ್ರಿಕೆ

# ಸಪ್ತಗಿರಿ

- 'ಸಪ್ತಗಿರಿ' ತಿ.ತಿ.ದೇ.,ಆಧ್ಯಾತ್ಮಿಕ ಮಾಸಪತ್ರಿಕೆಯನ್ನು ಪ್ರಕಟಿಸಲಾಗಿದೆ.
- 'ಸಪ್ತಗಿರಿ' ಪತ್ರಿಕೆಯಲ್ಲಿ ಅನೇಕ ಆಧ್ಯಾತ್ಮಿಕ ವೈಶಿಷ್ಟಗಳನ್ನು ಪ್ರಕಟಿಸುತ್ತಿದೆ.
- 'ಸಪ್ತಗಿರಿ' ಪತ್ರಿಕೆಯು ತೆಲುಗು,ತಮಿಳು,ಕನ್ನಡ,ಹಿಂದಿ,ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಕಟವಾಗಿದೆ.
- 'ಸಪ್ತಗಿರಿ' ಪತ್ರಿಕೆಯ ವಾರ್ಷಿಕ ಚಂದಾ ರೂ. 240/-
- 'ಸಪ್ತಗಿರಿ' ಪತ್ರಿಕೆಯ ಅಜೀವ ಚಂದಾ (12 ವರ್ಷಗಳು ಮಾತ್ರ) ರೂ.2400/-
- 'ಸಪ್ತಗಿರಿ' ವಿದೇಷಿ ವಾರ್ಷಿಕ ಚಂದಾ ರೂ. 1030/-
- 'ಸಪ್ತಗಿರಿ' ಪತ್ರಿಕೆಯ ಚಂದಾ ಓದುಗರು ಡಿ.ಡಿ./ಇ.ಎಂ.ಓ./ಐ.ಪಿ.ಓ./ Online (ttdevasthanams.ap.gov.in) ಮೂಲಕ ಮಾಡಬಹುದು.
- 'ಸಪ್ತಗಿರಿ' ಪತ್ರಿಕೆಯ ಚಂದಾದಾರರು ಯಾವುದೇ ರಾಷ್ಟ್ರೀಯ ಬ್ಯಾಂಕ್ ಮುಖಾಂತರ ಪ್ರಧಾನ ಸಂಪಾದಕರು,ಸಪ್ತಗಿರಿ ಮಾಸಪತ್ರಿಕೆ,ತಿ.ತಿ.ದೇ.,ತಿರುಪತಿ. ನೀವು ಡಿ.ಡಿ. ಅಂಚೆ ಮೂಲಕ, ಪ್ರಧಾನ ಸಂಪಾದಕರು,ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ.,ಪ್ರೆಸ್ ಬಿಲ್ಡಿಂಗ್, ತಿರುಪತಿ - 517 507 ಎಂಬ ವಿಳಾಸಕ್ಕೆ ಕಳುಹಿಸ ಬಹುದು.
- ಚಂದಾದಾರರು ತಮ್ಮ ವಿಳಾಸ, ಪಿನ್‌ಕೋಡ್, ಸೆಲ್‌ಫೋನ್ ಸಂಖ್ಯೆ ಮತ್ತು ನಿಮಗೆ ಬೇಕಾದ ಪತ್ರಿಕೆಯ ಭಾಷೆಯನ್ನು ಸ್ಪಷ್ಟವಾಗಿ ಬರೆಯಬೇಕು.
- 'ಸಪ್ತಗಿರಿ' ಪತ್ರಿಕೆಯು ಸರಿಯಾದ ಸಮಯಕ್ಕೆ ತಲುಪದಿದ್ದರೆ ಅಥವಾ ವಿಳಾಸ ಬದಲಾದರೆ ಈ, ಇ-ಮೇಲ್ (Chiefeditortpt@gmail.com) ಅನ್ನು ಸಂಪ್ರದಿಸಬೇಕು.
- ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 0877-2264359, 0877-2264360
- ಹೆಚ್ಚಿನ ವಿವರಗಳಿಗೆ ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ., ಪ್ರೆಸ್ ಬಿಲ್ಡಿಂಗ್,ತಿರುಪತಿ - 517 507 ಈ ವಿಳಾಸ ವನ್ನು ಸಂಪರ್ಕಿಸುವ ಮೂಲಕ ಪಡೆಯಬಹುದು.
- ನೇರವಾಗಿ ಸಂಪರ್ಕಿಸಲು ಬಯಸುವವರು ಪ್ರಧಾನ ಸಂಪಾದಕರ ಕಾರ್ಯಾಲಯದ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams
Printing on 25-11-2024 and Posting at Tirupati RMS.Regd. with the Registrar of Newspapers for India under
RNI. No. APKAN/2021/80589. Postal Regd.No.TRP/156/2024-2026 "Licenced toPost Without Prepayment
No. PMGK/RNP/WPP-04(6)/ 2024-2026" Posting on 5th of Every Month.

